ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 12 | ಸಂಚಿಕೆ 50 | ಡಿಸೆಂಬರ್ 10-16, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com


ಕೇಂದ್ರ ಸಾಹಿತ್ಯ ಆಕಾಡೆಮಿ ದಕ್ಷಿಣ ಭಾಷಾ ಸಮ್ಮಾನ್
ಜಿ.ವೆಂಕಟಸುಬ್ಬಯ್ಯ
ಅವರಿಗೆ ಅಭಿನಂದನೆಗಳು







ಸಂಘ ಪರಿವಾರ ಎದುರಿಸಲು ಗಟ್ಟಿ ಸಿದ್ಧಾಂತ ಬೇಕು





ಬುಲಂದ್ ಶಹರ್ ↓ ಬುಲೆಟ್ ಶಹರ್



ಜಿಡಿಪಿ, ಅಚ್ಛೇದಿನ್ ಲೊಳಲೊಟ್ಟೆ

ಶಬರಿಮಲೆ : ಜನರ ತೀರ್ಪು



ಡಿಸೆಂಬರ್ 6: ಸಂವಿಧಾನ– ಜಾತ್ಯಾತೀತತೆ ರಕ್ಷಣೆಗೆ ಧರಣಿ

ಬುಲಂದ್‌ಶಹರ್ ಹಿಂಸಾಚಾರ–ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಉತ್ತರಪ್ರದೇಶದ ಬುಲಂದ್ ಶಹರ್ ಜಿಲ್ಲೆಯಲ್ಲಿ ಒಂದು ಜನಜಂಗುಳಿ ಪೊಲಿಸ್ ಇನ್ಸ್‌ಪೆಕ್ಟರ್ ಸುಬೋಧ್ ಕುಮಾರ್ ಸಿಂಗ್ ಎಂಬವರನ್ನು ಅಮಾನುಷವಾಗಿ ಕೊಂದಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಈ ಪೋಲಿಸ್ ಅಧಿಕಾರಿಯೊಂದಿಗೆ ಒಬ್ಬ ದಾರಿಹೋಕನನ್ನೂ ಗುಂಡಿಟ್ಟು ಕೊಲ್ಲಲಾಯಿತು ಎಂದು ವರದಿಯಾಗಿದೆ.

ಈ ಜನಜಂಗುಳಿಯ ಹಿಂಸಾತ್ಮಕ ಪ್ರತಿಭಟನೆಗಳು ಭುಗಿಲೆದ್ದದ್ದು ಗೋವಧೆ ನಡೆದಿದೆ ಎಂಬ ನೆಪದಲ್ಲಿ. ಸಿಯಾನ ಪ್ರದೇಶದ ಒಂದು ಹಳ್ಳಿಯಲ್ಲಿ ಹಸುವಿನ ಅಂಗಾಂಗಗಳು ಕಂಡು ಬಂದವು ಎಂಬ ಸಂದೇಹಾತ್ಮಕ ಸಂದರ್ಭದಲ್ಲಿ ನಡೆದಿರುವ ಈ ಘಟನೆ ಕೋಮುವಾದಿ ಸೆಳೆತಗಳನ್ನು ಉದ್ರೇಕಿಸುವ ವಿಶ್ವ ಹಿಂದು ಪರಿಷದ್ ಮತ್ತಿತರ ಹಿಂದುತ್ವ ಪಡೆಗಳ ವಿಧಾನಗಳಿಗೆ ಅನುಗುಣವಾಗಿಯೇ ಇದೆ.

ಮುಂಬರುವ ಲೋಕಸಭಾ ಚುನಾವಣೆಗಳ ದೃಷ್ಟಿಯಿಂದ ಇಂತಹ ಘಟನೆಗಳನ್ನು ಯೋಜಿಸಲಾಗುತ್ತಿದೆ. ಮುಖ್ಯಮಂತ್ರಿ ಆದಿತ್ಯನಾಥರ ಉದ್ರೇಕಕಾರಿ ಭಾಷಣಗಳೂ ಇಂತಹ ಜನಜಂಗುಳಿಗಳು ಯಾವುದೇ ದಂಡನೆಯ ಭಯವಿಲ್ಲದೆ ವರ್ತಿಸುವಂತಹ ವಾತಾವರಣವನ್ನು ಸೃಷ್ಟಿಸಿವೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಅಪರಾಧ ಎಸಗಿರುವವವರ ವಿರುದ್ಧ ದೃಢವಾದ ಕ್ರಮವನ್ನು ಕೈಗೊಳ್ಳಬೇಕು ಮತ್ತು ಕೋಮುವಾದಿ ಘಟನೆಗಳು ನಡೆಯದಂತೆ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

ಸರದಾರ್ ಪಟೇಲ್ ಹೇಳಿದಂತೆ, ಗಾಂಧೀಜಿಯನ್ನು ಕೊಂದ ಸಿದ್ಧಾಂತ ಇದು. 70 ವರ್ಷಗಳಾದರೂ ಆರೆಸ್ಸೆಸ್ ಮತ್ತು ಅದರ ಬದಲಿಗಳು ಕಾರ್ಯನಿರ್ವಹಿಸುವ ರೀತಿ, ಭಾರತದ ಆದರ್ಶಗಳನ್ನೆಲ್ಲ ಕೊಲ್ಲುವ ಅವರ ಪರಿ ಬದಲಾಗಿಲ್ಲ ಎಂದು ಈ ದುಷ್ಕೃತ್ಯದ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿದ್ದಾರೆ.

ಕಿಸಾನ್ ಸಭಾ ಮತ್ತು ಕೃಷಿ ಕೂಲಿಕಾರರ ಸಂಘಟನೆಯ ಖಂಡನೆ

ಇದು ಪೂರ್ವಯೋಜಿತ ಕೃತ್ಯ ಎಂದು ಅಖಿಲ ಭಾರತ ಕಿಸಾನ್ ಸಭಾ ಖಂಡಿಸಿದೆ. ಹತ್ಯೆಯಾದ ಪೋಲೀಸ್ ಇನ್ಸ್‌ಪೆಕ್ಟರ್ ದಾದ್ರಿಯಲ್ಲಿ ಗೋರಕ್ಷಕರೆನಿಸಿಕೊಂಡವರಿಂದ ಅಖ್ಲಾಕ್ ಹತ್ಯೆಯ ತನಿಖೆ ನಡೆಸಿದವರು ಎಂಬುದು ಆಘಾತ ಉಂಟು ಮಾಡುವಂತದ್ದು ಎಂದು ಅದು ಹೇಳಿದೆ. ಯೋಗಿ ಆದಿತ್ಯನಾಥ ನೇತೃತ್ವದ ಬಿಜೆಪಿ ಸರಕಾರದ ಅಡಿಯಲ್ಲಿ ಅರಾಜಕತೆ ಹರಡಿರುವುದಕ್ಕೆ ಇದು ಇನ್ನೊಂದು ಉದಾಹರಣೆ . ಈ ದುಷ್ಕೃತ್ಯ ಮತ್ತು ಈ ಹಿಂದೆ ಬಡಿದು ಸಾಯಿಸಿದ ದುಷ್ಟ ಕೃತ್ಯಗಳ ನ್ಯಾಯಾಂಗ ತನಿಖೆ ಸುಪ್ರಿಂ ಕೊರ್ಟ್ ಉಸ್ತುವಾರಿಯಲ್ಲಿ ನಡೆಯಬೇಕಾಗಿದೆ ಎಂದು ಎಐಕೆಎಸ್ ಅಗ್ರಹಿಸಿದೆ.

ಅಖಿಲ ಭಾರತ ಕೃಷಿಕೂಲಿಕಾರರ ಸಂಘವೂ ಈ ಕೃತ್ಯವನ್ನು ಖಂಡಿಸುತ್ತ ಆರೋಪಿಯಾಗಿರುವ ಜಿಲ್ಲಾ ಭಜರಂಗ ದಳ ಅಧ್ಯಕ್ಷ ಮತ್ತು ಆತನ ಜತೆಗಿದ್ದ ಗೂಂಡಾಗಳನ್ನು ಇನ್ನು ಬಂಧಿಸದಿರುವುದು, ಮತ್ತು ಎಫ್‌ಐಆರ್‌ನಲ್ಲಿ ಈ ಜಿಲ್ಲೆಯಲ್ಲಿ ಮತ್ತು ರಾಜ್ಯದಲ್ಲೆಲ್ಲ ಭಯೋತ್ಪಾದನೆ ನಡೆಸುತ್ತಿರುವ ಇವರ ಸಂಘಟನೆಯ ಹೆಸರನ್ನೂ ಪ್ರಸ್ತಾಪಿಸದಿರುವುದು ಮತ್ತು ಇನ್ನೊಂದೆಡೆಯಲ್ಲಿ ಗೋವಧೆ ನಡೆಸಿದರೆಂದು ನಯಾ ಬಾಸ್‌ನ ಏಳು ಮುಸ್ಲಿಮರ ಮೇಲೆ ಕೇಸು ಹಾಕಿರುವುದು ಅತ್ಯಂತ ಆತಂಕಕಾರಿ ಎಂದಿದೆ.

ತಕ್ಷಣವೇ ಕೋಮು ಸೌಹಾರ್ದ ಮತ್ತು ಶಾಂತಿಯನ್ನು ನೆಲೆಗೊಳಿಸಲು ಕ್ರಮವನ್ನು ಕೈಗೊಳ್ಳಬೇಕು, ದುಷ್ಕೃತ್ಯ ಎಸಗಿದವರನ್ನು ಬಂಧಿಸಿ ಶಿಕ್ಷಿಸಬೇಕು ಮತ್ತು ಪ್ರಾಣ ಕಳಕೊಂಡ ಪೋಲೀಸ್ ಇನ್ಸ್‌ಪೆಕ್ಟರ್ ಕುಟುಂಬಕ್ಕೆ ಸಾಂತ್ವನ ಒದಗಿಸಬೇಕೆಂದು ಆಗ್ರಹಿಸಿ ಮತಪ್ರದರ್ಶನ ನಡೆಸುವಂತೆ ಅದು ತನ್ನ ಘಟಕಗಳಿಗೆ ಕರೆ ನೀಡಿದೆ.

ನೇತಾಜಿಯವರಿಗೆ ಮೋದಿ ‘ಶ್ರದ್ಧಾಂಜಲಿ’ ದಾರಿತಪ್ಪಿಸಲು, ದುರುದ್ದೇಶಪೂರಿತ: ಎಡಪಕ್ಷಗಳ ಟೀಕೆ

“ಚಾಲೀಸ್ ಕರೋಡೋಂ ಕೀ ಆವಾಝ್– ಸೆಹಗಲ್, ಢಿಲ್ಲೋಂ ಷಾನವಾಝ್”: ಇದು 1945ರ ನವಂಬರ್ ನಲ್ಲಿ ದೇಶಾದ್ಯಂತ ಮೊಳಗಿದ ಘೋಷಣೆ– ನೇತಾಜಿ ಸುಭಾಷ್ ಚಂದ್ರ ಬೋಸ್ ನೇತೃತ್ವದ ಆಝಾದ್ ಹಿಂದ್ ಸೇನೆ(ಐಎನ್‌ಎ)ಯ ಈ ಮೂರು ಹಿರಿಯ ಸೇನಾಧಿಕಾರಿಗಳ ವಿಚಾರಣೆಯನ್ನು ಬ್ರಿಟಿಶರು ಆರಂಭಿಸಿದಾಗ; ಇದು ನೇತಾಜಿಯವರ ಎಲ್ಲರನ್ನು ಒಳಗೊಳ್ಳುವ ರಾಜಕೀಯದ ಜ್ವಲಂತ ಸಾಕ್ಷಿ. ಮತ್ತು ಎಲ್ಲ ಧರ್ಮ, ಜಾತಿ, ಲಿಂಗ ಬೇಧವಿಲ್ಲದೆ ಎಲ್ಲ ಜನಗಳನ್ನು ಒಟ್ಟುಗೂಡಿಸಿದ ಸ್ವಾತಂತ್ರ್ಯ ಆಂದೋಲನದ ಹೋರಾಟಶೀಲ ಚೈತನ್ಯದ ಉದಾಹರಣೆಯಾಗಿತ್ತು. ಇಂತಹ ನೇತಾಜಿ ಮತ್ತು ಐಎನ್‌ಎ ಗೆ, ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದಕ್ಕೆ ಪೋಷಣೆ, ಆ ಮೂಲಕ ಮುಸ್ಲಿಮರು, ದಲಿತರು ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಬರ್ಬರ ದಾಳಿಗಳಿಗೆ ಎಡೆ ಮಾಡಿಕೊಟ್ಟಿರುವ ದ್ವೇಷ ಮತ್ತು ಹಿಂಸಾಚಾರದ ಆತಂಕಕಾರಿ ಬೆಳವಣಿಗೆಗೆ ಅವಕಾಶ ಮಾಡಿಕೊಟ್ಟಿರುವ ಒಂದು ಸರಕಾರದ ನೇತೃತ್ವ ವಹಿಸಿರುವ ನರೇಂದ್ರ ಮೋದಿಯವರು ಗೌರವಾರ್ಪಣೆಯ ಪ್ರದರ್ಶನ ನಡೆಸಿರುವುದು ಒಂದು ಕಪಟಾಚರಣೆಯೂ ಹೌದು, ಅದು ನಿರರ್ಥಕವೂ ಹೌದು ಎಂದು ಎಡಪಕ್ಷಗಳು ಹೇಳಿವೆ.


The Hindustan Times

I.N.A. TRIAL OPENS IN RED FORT

I.N.A. WOMEN WARRIORS — SHAH NAWAZ — DHILLON — SAHGAL — DEFENCE COUNSEL

OUT OF GUN BATTLES IN — CHARGES OF MURDER AND — Syria A Potential Trouble

1945ರಲ್ಲಿ ಐಎನ್‌ಎ ಯ ಮೂರು ಹಿರಿಯ ಸೇನಾಧಿಕಾರಿಗಳ ವಿಚಾರಣೆ ಆರಂಭವಾದ ಮರುದಿನದ ಪತ್ರಿಕೆಯ ಮುಖಪುಟ.

ಸಿಪಿಐ(ಎಂ), ಸಿಪಿಐ, ಫಾರ್ವರ್ಡ್ ಬ್ಲಾಕ್ ,ಅರ್ ಎಸ್ ಪಿ ಮತ್ತು ಸಿಪಿಐ(ಎಂಎಲ್)–ಲಿಬರೇಷನ್ ಈ ಕುರಿತು ಡಿಸೆಂಬರ್ 1 ರಂದು ಒಂದು ಜಂಟಿ ಹೇಳಿಕೆಯನ್ನು ನೀಡಿವೆ.

ನೇತಾಜಿ ಸುಭಾಷ್ ಚಂದ್ರ ಬೋಸ್ ಅವರು ಅಕ್ಟೋಬರ್ 21, 1943ರಂದು ದಕ್ಷಿಣ–ಪೂರ್ವ ಏಷ್ಯಾದ ನೆಲದಲ್ಲಿ ಗಡೀಪಾರಿನಲ್ಲಿ ತಾತ್ಕಾಲಿಕ ಆಝಾದ್ ಹಿಂದ್ ಸರಕಾರಕ್ಕೆ ನೇತೃತ್ವ ನೀಡಿದರು ಎಂಬುದು ಒಂದು ಐತಿಹಾಸಿಕ ಸತ್ಯ. ಈ ದಿನ ಭಾರತದ ಸ್ವಾತಂತ್ರ್ಯ ಆಂದೋಲನದ ಚರಿತ್ರೆಯಲ್ಲಿ ಅಚ್ಚೊತ್ತಿದ ದಿನ. ಬ್ರಿಟನ್ ಮತ್ತು ಅಮೆರಿಕಾದ ವಿರುದ್ಧ ಯುದ್ಧ ಸಾರಿದ ಈ ಸರಕಾರಕ್ಕೆ ಒಂಭತ್ತು ದೇಶಗಳು ಮಾನ್ಯತೆಯನ್ನು ನೀಡಿದವು. ಅವುಗಳಲ್ಲಿ ಡೆ ವಲೆರಾ ರವರ ಐರ್ಲೆಂಡ್ ಕೂಡ ಸೇರಿದೆ. ಈ ಸರಕಾರದ ಬಾವುಟದ ಅಡಿಯಲ್ಲಿ ನೇತಾಜಿಯವರು ತಮ್ಮ 30 ಲಕ್ಷ ಐಎನ್‌ಎ ಸಿಬ್ಬಂದಿಯೊಂದಿಗೆ, ಭಾರತದ ನೆಲದಿಂದ ಬ್ರಿಟಿಶರು ಮತ್ತು ಅವರ ಮಿತ್ರರನ್ನು ಹೊಡೆದೋಡಿಸುವ ಅಂತಿಮ ಸ್ವಾತಂತ್ರ್ಯ ಸಮರವನ್ನು ಆರಂಭಿಸಿದರು.

ಐಎನ್‌ಎ, ಕರ್ನಲ್ ಎಸ್.ಎ. ಮಲಿಕ್ ನೇತೃತ್ವದಲ್ಲಿ ಎಪ್ರಿಲ್ 14, 1944ರಂದು ಭಾರತೀಯ ನೆಲವನ್ನು ಮಣಿಪುರದ ಮೊಯಿರಂಗ್ ನಲ್ಲಿ ಪ್ರವೇಶಿಸಿ ಭಾರತೀಯ ಬಾವುಟವನ್ನು ಹಾರಿಸಿತು. ಅಲ್ಲಿ ಐಎನ್‌ಎ ಸರಕಾರ ಮೂರು ತಿಂಗಳು ಸಕ್ರಿಯವಾಗಿತ್ತು. ಅದು ತನ್ನದೇ ಬ್ಯಾಂಕ್, ಕರೆನ್ಸಿ, ಅಂಚೆ ಕಚೇರಿ ಮತ್ತು ಇತರ ಮೂಲ ಸೌಕರ್ಯಗಳನ್ನು ಹೊಂದಿತ್ತು. ಅಲ್ಲಿಂದ ಅದು ಇಂಫಾಲ್ ನತ್ತ ತನ್ನ ಅಂತಿಮ ಸಮರ ನಡೆಯನ್ನು ಆರಂಭಿಸಿತು.

ನೇತಾಜಿಯವರ ಐಎನ್‌ಎ ಹೋರಾಟದ ಪ್ರಭಾವದಿಂದಾಗಿ ಭಾರತದಲ್ಲಿ ನವಂಬರ್ 1945ರಿಂದ ಜುಲೈ 1946 ರ ವರೆಗೆ ಒಂದು ಮಹಾನ್ ಮಹಾಯುದ್ಧಾನಂತರದ ಉತ್ಕ್ರಾಂತಿ ಭುಗಿಲೆದ್ದಿತು. ಕೊನೆಗೂ ಬ್ರಿಟಿಶ್ ಸರಕಾರ ಆಗಸ್ಟ್ 1947 ರಲ್ಲಿ ಅಧಿಕಾರದ ಹಸ್ತಾಂತರ ಮಾಡುವ ಒತ್ತಡಕ್ಕೆ ಒಳಗಾಗುವಲ್ಲಿ ಇದೂ ಒಂದು ಪ್ರಮುಖ ಅಂಶವಾಯಿತು.

ಈ 2018ರ ಅಕ್ಟೋಬರ್ 21 ರಂದು, ನೇತಾಜಿಯವರ ನೇತೃತ್ವದ ತಾತ್ಕಾಲಿಕ ಆಝಾದ್ ಹಿಂದ್ ಸರಕಾರ ರಚನೆಗೆ 75 ವರ್ಷಗಳು ಪೂರ್ಣಗೊಂಡ ಸಂದರ್ಭದಲ್ಲಿ ಇಡೀ ದೇಶ ಈ ಮಹಾನ್ ಕ್ರಾಂತಿಕಾರಿ ನೇತಾರ ಮತ್ತು ಭಾರತದ ದೇಶಪ್ರೇಮಿ ಪುತ್ರನಿಗೆ ಗೌರವಪೂರ್ಣ ನಮನ ಸಲ್ಲಿಸಿತು. ಈ ಸಂದರ್ಭದ ಪ್ರಯೋಜನ ಪಡೆಯುತ್ತ, ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಅಂದಿನ ದಿನ ಮೊದಲ ಬಾರಿಗೆ ಕೆಂಪುಕೋಟೆಯಲ್ಲಿ ರಾಷ್ಟ್ರೀಯ ಬಾವುಟವನ್ನು ಏರಿಸಿದರು. ಆ ಸಂದರ್ಭದಲ್ಲಿ ಒಂದು ದೀರ್ಘ ಭಾಷಣವನ್ನು ಮಾಡಿದರು. ಆದರೆ ಅದರಲ್ಲಿ ನೇತಾಜಿ ತಮ್ಮ ಆಝಾದ್ ಹಿಂದ್ ಸರಕಾರದಲ್ಲಿ ಮತ್ತು ಐಎನ್‌ಎ ಯಲ್ಲಿ ಆದರ್ಶಪೂರ್ವಕವಾಗಿ ಜಾರಿಗೊಳಿಸಿದ ರಾಷ್ಟ್ರೀಯ ಸಮಗ್ರತೆ ಮತ್ತು ಕೋಮು ಸಾಮರಸ್ಯದ ಅತ್ಯಂತ ಪ್ರಸ್ತುತವಾದ ವಿಷಯದ ಬಗ್ಗೆ ಮಾತೇ ಆಡಲಿಲ್ಲ.


ಬ್ರಿಟಿಷರು ಆರಂಭಿಸಿದ ಐ ಎನ್ ಎ ವಿಚಾರಣೆ ಭಾರತೀಯ ಜನತೆಯನ್ನು ಬಡಿದೆಬ್ಬಿಸಿತು, ಬ್ರಿಟಿಶ್ ವಸಾಹತುಶಾಹೀ ಆಳ್ವಿಕೆಯ ಮೇಲೆ ಅಂತಿಮ ಪ್ರಹಾರಕ್ಕೆ ಸ್ಫೂರ್ತಿ ತುಂಬಿತು. ‘ಸೆಹಗಲ್–ಢಿಲ್ಲೋಂ–ಷಾನವಾಝ್’ ಎಂಬ ಘೋಷಣೆ ನೇತಾಜಿಯವರ ಎಲ್ಲರನ್ನು ಒಳಗೊಳ್ಳುವ ರಾಜಕೀಯದ ಜ್ವಲಂತ ಸಾಕ್ಷಿ. ಮತ್ತು ಎಲ್ಲ ಧರ್ಮ, ಜಾತಿ, ಲಿಂಗ ಬೇಧವಿಲ್ಲದೆ ಎಲ್ಲ ಜನಗಳನ್ನು ಒಟ್ಟುಗೂಡಿಸಿದ ಸ್ವಾತಂತ್ರ್ಯ ಆಂದೋಲನದ ಹೋರಾಟಶೀಲ ಚೈತನ್ಯದ ಉದಾಹರಣೆಯಾಗಿತ್ತು. ಇಂತಹ ನೇತಾಜಿ ಮತ್ತು ಐಎನ್‌ಎ ಗೆ, ಒಂದು ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದಕ್ಕೆ ಪೋಷಣೆ, ಆ ಮೂಲಕ ಮುಸ್ಲಿಮರು, ದಲಿತರು ಮತ್ತು ಧಾಮಿಕ ಅಲ್ಪಸಂಖ್ಯಾತರ ಮೇಲೆ ಬರ್ಬರ ದಾಳಿಗಳಿಗೆ ಎಡೆ ಮಾಡಿಕೊಟ್ಟಿರುವ ದ್ವೇಷ ಮತ್ತು ಹಿಂಸಾಚಾರದ ಆತಂಕಕಾರಿ ಬೆಳವಣಿಗೆಗೆ ಅವಕಾಶ ಮಾಡಿಕೊಟ್ಟಿರುವ ಒಂದು ಸರಕಾರದ ನೇತೃತ್ವ ವಹಿಸಿರುವ ನರೇಂದ್ರ ಮೋದಿಯವರು ಗೌರವಾರ್ಪಣೆಯ ಪ್ರದರ್ಶನ ನಡೆಸಿರುವುದು ಒಂದು ಕಪಟಾಚರಣೆಯೂ ಹೌದು, ಅದು ನಿರರ್ಥಕವೂ ಹೌದು ಎಂದಿರುವ ಎಡಪಕ್ಷಗಳು, ಭಾರತೀಯ ಜನತೆ ತನ್ನ ಅತ್ಯಂತ ಪ್ರೀತಿಪಾತ್ರ ರಾಷ್ಟ್ರೀಯ ನೇತಾರರಾದ ನೇತಾಜಿ ಸುಭಾಷ್ ಚಂದ್ರ ಬೋಸ್ ಕುರಿತಂತೆ ಹೊಂದಿರುವ ಹಲವು ಆಕಾಂಕ್ಷೆಗಳನ್ನು ಮತ್ತು ದೀರ್ಘಕಾಲೀನ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿವೆ. ತಕ್ಷಣದ ಈ ಎರಡು ಬೇಡಿಕೆಗಳನ್ನು ಎಡಪಕ್ಷಗಳು ಪುನರುಚ್ಚರಿಸಿವೆ:

1. ನೇತಾಜಿಯವರ ಜನ್ಮದಿನ(ಜನವರಿ23)ವನ್ನು ‘ದೇಶಪ್ರೇಮ ದಿನ’ ಎಂದು ಘೋಷಿಸಬೇಕು. ಇದು ಬಡತನ–ಪೀಡಿತ ನಿರುದ್ಯೋಗಿ ಮತ್ತು ಹತಾಶ ಯುವಜನರನ್ನು ಪುನಶ್ಚೇತನಗೊಳಿಸುವಲ್ಲಿ ಬಹಳ ಸಹಾಯಕವಾಗುತ್ತದೆ.
2. ನೇತಾಜಿಯವರ ತಾತ್ಕಾಲಿಕ ಆಝಾದ್ ಹಿಂದ್ ಸರಕಾರ ಮತ್ತು ಅವರ ಆಝಾದ್ ಹಿಂದ್ ಫೌಜ್ (ಐ ಎನ್ ಎ), ಮತ್ತು ಭಾರತದ ಸ್ವಾತಂತ್ರ್ಯ ಆಂದೋಲನಕ್ಕೆ ಅವರ ಕೊಡುಗೆಗಳ ಬಗ್ಗೆ ಒಂದು ಪ್ರಮಾಣಿತ ರಾಷ್ಟ್ರೀಯ ಚರಿತ್ರೆಯ ಸಂಕಲನಕ್ಕೆ ಸರ್ವ ಪ್ರಯತ್ನ ನಡೆಸಬೇಕು.

ಇವೆರಡನ್ನು ನಡೆಸದಿದ್ದರೆ, ಮೋದಿಯವರ ಗೌರವಾರ್ಪಣೆ ಎಂಬುದು ಮುಂಬರುವ ಸಾರ್ವತ್ರಿಕ ಚುನಾವಣೆಗಳಲ್ಲಿ ಮತ್ತೆ ಅಧಿಕಾರ ಗಿಟ್ಟಿಸುವುದಕ್ಕಾಗಿ ಜನಗಳನ್ನು ದಾರಿತಪ್ಪಿಸಲು ಮಾಡಿರುವ ದುರುದ್ದೇಶ ಪೂರಿತ ಸ್ಟಂಟ್ ಎಂಬುದು ಸಾಬೀತಾಗುತ್ತದೆ ಎಂದಿದೆ ಎಡಪಕ್ಷಗಳ ಈ ಜಂಟಿ ಹೇಳಿಕೆ.

ಡಿಸೆಂಬರ್ 6 : ದೇಶಾದ್ಯಂತ ಸಂವಿಧಾನ ಮತ್ತು ಜಾತ್ಯತೀತತೆಯ ರಕ್ಷಣೆಗಾಗಿ ಎಡಪಕ್ಷಗಳ ರ್‍ಯಾಲಿಗಳು

ಡಿಸೆಂಬರ್ 6 ರಂದು ಎಡಪಕ್ಷಗಳ ಕರೆಯ ಮೇರೆಗೆ ದೇಶಾದ್ಯಂತ ‘ಸಂವಿಧಾನ ಮತ್ತು ಜಾತ್ಯತೀತತೆಯ ರಕ್ಷಣಾ ದಿನಾಚರಣೆ’ ನಡೆಸಲಾಯಿತು. ಕೊಲ್ಕತಾದಲ್ಲಿ ಒಂದು ಬೃಹತ್ ರ್‍ಯಾಲಿ ನಡೆಯಿತು. ಬೆಂಗಳೂರು, ಪಾಟ್ನಾ, ಲಕ್ನೌ ಮತ್ತಿತರ ಕಡೆಗಳಲ್ಲೂ ಧರಣಿ, ರ್‍ಯಾಲಿ, ಮತಪ್ರದರ್ಶನಗಳು ನಡೆದಿರುವ ವರದಿಗಳು ಬಂದಿವೆ.



ದಿಲ್ಲಿಯಲ್ಲಿ ಮಂಡಿ ಹೌಸ್‌ನಿಂದ ಸಂಸದ್ ಮಾರ್ಗದ ವರೆಗೆ ಮೆರವಣಿಗೆಯ ನಂತರ ಸಂಸದ್ ಮಾರ್ಗದಲ್ಲಿ ಸಾರ್ವಜನಿಕ ಸಭೆ ನಡೆಯಿತು. ಇದರಲ್ಲಿ ಎಡಪಕ್ಷಗಳ ರಾಷ್ಟ್ರೀಯ ಮುಖಂಡರು ಭಾಗವಹಿಸಿದರು. ಇದರಲ್ಲಿ ಮಾತನಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದವರ ವಿರುದ್ಧ ಹೋರಾಟವನ್ನು ನಡೆಸುವುದು ಅಗತ್ಯವಾಗಿದೆ ಎಂದು ಒತ್ತಿ ಹೇಳಿದರು. ಇದು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ ನಿಧನದ ದಿನವೂ ಆಗಿದ್ದು, ಅವರನ್ನು ನೆನಪಿಸಿಕೊಳ್ಳುತ್ತ, ಸಂವಿಧಾನದ ಆಶಯಗಳ ರಕ್ಷಣೆಗೆ ತನ್ನ ಹೋರಾಟವನ್ನು ಸಿಪಿಐ(ಎಂ) ತೀವ್ರಗೊಳಿಸುತ್ತದೆ ಎಂದು ಅವರು ಹೇಳಿದರು.



ಸರಿ ಸಾಟಿಯಿಲ್ಲದ ಭಾರತೀಯ ತತ್ವಶಾಸ್ತ್ರಜ್ಞ ಪ್ರೊಫೆಸರ್ ದೇವಿ ಪ್ರಸಾದ್ ಚಟ್ಟೋಪಾಧ್ಯಾಯ





ನಾಗರಾಜ ನಂಜುಂಡಯ್ಯ

ಈ ವರ್ಷ ನವೆಂಬರ್ 19, ರಂದು, 'ಲೋಕಾಯತ' ತತ್ವಶಾಸ್ತ್ರದ ಪ್ರಖ್ಯಾತ ಸಂಶೋದಕರಾದ ದೇವಿಪ್ರಸಾದ್ ಚಟ್ಟೋಪಾಧ್ಯಾಯರ ಜನ್ಮ ಶತಮಾನೋತ್ಸವದ ದಿನ. ಇವರು ಹುಟ್ಟಿದ್ದು 1918 ರಲ್ಲಿ. ಇವರೊಬ್ಬ ದುಡಿಯುವ ಜನರ ದಾರ್ಶನಿಕರು ಮಾತ್ರವಲ್ಲದೆ, ಬಹುಮುಖಿ ಸಾಮಾಜಿಕ ಚಿಂತಕ. ಬೆಳಗುವ ನಾಳೆಗಳನ್ನು ಬಿಡಿಸಿಟ್ಟಿರುವುದು ಇವರ ಅತ್ಯುಚ್ಚ ಸಾಧನೆ. ಮಾರ್ಕ್ಸ್ ವಾದದ ಅತ್ಯುನ್ನತ ಚಿಂತಕರಲ್ಲಿ ಒಬ್ಬರು. ಇವರನ್ನು ಪ್ರೀತಿಯಿಂದ ಹಲವರು ದೇಬಿದಾ ಎಂದು ಕರೆಯುವುದುಂಟು........ಈ ರೀತಿ ಹೇಳಿದವರು, ಅವರೊಂದಿಗೆ ಸುಮಾರು ಮೂರು ದಶಕಕ್ಕೂ ಹೆಚ್ಚು ಕಾಲ ಹತ್ತಿರದಿಂದ ನೋಡಿದ್ದ ಡಾ.ಜಿ.ರಾಮಕೃಷ್ಣ ರವರು.

ಕಳೆದ ಭಾನುವಾರ ಡಿಸೆಂಬರ್ 2 ರಂದು, ಸಿಪಿಐ(ಎಂ) ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯು, ಪ್ರೊ.ದೇವಿ ಪ್ರಸಾದ್ ಚಟ್ಟೋಪಾಧ್ಯಾಯ ರ ಜನ್ಮ ಶತಮಾನೋತ್ಸವದ ಅಂಗವಾಗಿ ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಉಪನ್ಯಾಸದಲ್ಲಿ, "ಭಾರತದ ಬೌದ್ಧಿಕ ತತ್ವಶಾಸ್ತ್ರದ ಕಿರು ಪರಿಚಯ "ಕುರಿತಂತೆ ಮಾತನಾಡುತ್ತಾ, ಈ ರೀತಿ ಹೇಳಿದರು. ಕಲ್ಕತ್ತಾ ಏಷ್ಯಾಟಿಕ್ ಸೊಸೈಟಿಯ ಸಂಸ್ಥೆಯೊಂದಿಗೆ ಸುಮಾರು ಐದು ದಶಕಗಳ ಕಾಲ ವಿದ್ವತ್ ನಿಕಟ ಸಂಪರ್ಕ ಹೊಂದಿದ್ದ ಒಬ್ಬ ಉದ್ದಾಮ ಚಿಂತಕ ಮತ್ತು ಅದ್ಭುತ ಲೇಖಕ ದೇವಿ ಪ್ರಸಾದ್ ಎಂದರು. ಇವರ ಅಪಾರವಾದ ಪಾಂಡಿತ್ಯ, ನಗೆ, ಚಾವಟಿ ಏಟು, ಅದಮ್ಯ ವಿಶ್ವಾಸ, ಮುಗ್ದ ಮನಸ್ಸು ಹಾಗೂ ಬೌದ್ಧಿಕ ವಿಚಾರದಲ್ಲಿ ಇವರು ಮಾಡಿದ್ದ ಸಂಶೋಧನೆಗಳಿಗೆ ಭಾರತದಲ್ಲಿ ಇವರಿಗೆ ಇವರೆ ಸರಿ ಸಾಟಿಯಾಗಿದ್ದರು.

ಇವರು ಹುಟ್ಟಿದ ನವೆಂಬರ್ 19 ರಂದೇ, ಮಾಜಿ ಪ್ರಧಾನಿ ದಿ.ಇಂದಿರಾಗಾಂಧಿ ಯವರು ಹುಟ್ಟಿದ್ದು, ಆದರೆ ನಾನು ಪ್ರಧಾನಿ ಯಾಗಲಿಲ್ಲ ಏಕೆ ? ಹುಟ್ಟಿದ ದಿನಾಂಕದ ಮೇಲೆ ಭವಿಷ್ಯದ ಹೇಳುವವರಿಗೆ ಇವರು ಹಾಕುವ ಬೌದ್ಧಿಕ ಸವಾಲು ಇದಾಗಿತ್ತು. ದೇವಿ ಪ್ರಸಾದ್ರ ಈ ಬೌದ್ಧಿಕ ಯಾನ ಆರಂಭ ಗೊಂಡಿದ್ದು ಮುಂಬಯಿ ನಗರದ ಒಂದು ಕಾಲೇಜ್ ನಲ್ಲಿ ಆದರೂ, ಕಲ್ಕತ್ತಾದ ಸಿಟಿ ಕಾಲೇಜ್ ನಲ್ಲಿ ಹಲವು ವರ್ಷಗಳ ಕಾಲ ಅಧ್ಯಾಪಕರಾಗಿ ಕೆಲಸ ನಿರ್ವಹಿಸಿದ್ದರು. ಆಶ್ಚರ್ಯವೆಂದರೆ ಮೊದಲಿಗೆ ಅವರು ಮುಂಬಯಿ ಗೆ ಹೋದದ್ದು ಚಲನಚಿತ್ರ ಗಳಿಗೆ ಕತೆ ಸಂಭಾಷಣೆ ಬರೆಯಲು, ಎರಡು-ಮೂರು ಚಿತ್ರಗಳಿಗೆ ಬರೆದದ್ದು ಉಂಟು. ಅವುಗಳು ಪ್ರಸಿದ್ಧಿಯಾಗಿದ್ದು ಹೌದು. ಆನಂತರ ಕಲ್ಕತ್ತಾ ವಿಶ್ವವಿದ್ಯಾಲಯವು ಅವರಿಗೆ ಡಿ.ಲಿಟ್ ಪದವಿ ನೀಡಿ ಗೌರವಿಸಿತು. ಆದರು ಈ ವಿಶ್ವವಿದ್ಯಾಲಯ ದಲ್ಲಿ ಅವರಿಗೆ ಅಧ್ಯಾಪಕರ ಕೆಲಸ ಮಾತ್ರ ನೀಡಿರಲಿಲ್ಲ. ಏಕೆಂದರೆ, ಕಾಳಿದಾಸ ಭಟ್ಟಾಚಾರ್ಯ ಎಂಬ ಪ್ರಸಿದ್ಧ ಭಾವನಾವಾದಿ ಅಂದರೆ ವೇದಾಂತಿ ಅಲ್ಲಿ ಮುಖ್ಯಸ್ಥರಾಗಿದ್ದೇ ಇದಕ್ಕೆ ಕಾರಣವಾಗಿತ್ತು. ಅವರು ಒಮ್ಮೆ ಹೇಳಿದ್ದು, "ಈ ವಿಭಾಗದಲ್ಲಿ ನಾನಿರ ಬೇಕು ಇಲ್ಲವೇ ನೀನಿರಬೇಕು" ಇಬ್ಬರು ಅಂದರೆ, ಭೌತಿಕ ವಾದಿ ಮತ್ತು ಭಾವನಾವಾದಿಗಳು ಇಬ್ಬರು ಇರಲು ಸಾಧ್ಯವಿಲ್ಲವೆಂದಿದ್ದರಂತೆ. ಚಾರಿತ್ರಿಕವಾಗಿ ದೇಬಿದಾ, ಹೊಂದಿದ್ದ ಬೌದ್ಧಿಕ ಶಿಸ್ತು ಎಲ್ಲರನ್ನು ತಬ್ಬಿಬ್ಬು ಮಾಡುತ್ತಿತ್ತು ಎಂದರು, ಡಾ. ಜಿ.ಆರ್ ರವರು, ಅವರ ಮತ್ತು ತಮ್ಮ ನಡುವಿನ ಮೂರು-ನಾಲ್ಕು ದಶಕಗಳ ಬೌದ್ಧಿಕ ವಿಚಾರಗಳಲ್ಲಿ ಇದ್ದ ಆತ್ಮೀಯ ಸಂಬಂಧ ಗಳನ್ನು ಎಳೆ ಎಳೆಯಾಗಿ, ತುಂಬ ಸರಳವಾಗಿ ನೆರೆದಿದ್ದವರಿಗೆ ಅರ್ಥವಾಗುವಂತೆ ತಿಳಿಸಿಕೊಟ್ಟರು.

ದೇವಿ ಪ್ರಸಾದ್ ರು ಜೀವನ ಮತ್ತು ಹೋರಾಟದ ಬದುಕನ್ನು, ಬೌದ್ಧಿಕ ನೆಲೆಯಲ್ಲಿ ತಮ್ಮೆಲ್ಲಾ ಸಂಶೋಧನೆಗಳಲ್ಲಿ ಮಾಡಿರುವ ವಿಶ್ಲೇಷಣೆ ಮತ್ತು ಮತ್ತು ಸಂದೇಶಗಳು, ನಮ್ಮ ಮುಂದೆ ಪ್ರಸ್ತುತ ತಾಂಡವವಾಡುತ್ತಿರುವ ಅಂದ ಶ್ರದ್ದೆ ಹಾಗೂ ಮೌಡ್ಯತೆಗಳ ರೌದ್ರತೆಗಳ ಪ್ರದರ್ಶನ ನಡೆಸುವವರಿಗೆ ಇವರು ಸೂಕ್ತ ವೈಜ್ಞಾನಿಕವಾಗಿ ಪ್ರತಿಕ್ರಿಯೆ ನೀಡುತ್ತಿದ್ದರು. ಈ ನಿಟ್ಟಿನಲ್ಲಿ ಅವರ ಜೀವನದುದ್ದಕ್ಕೂ ಅನುಭವಿಸಿದ ಪ್ರಸಂಗಗಳಲ್ಲಿ ಕೆಲವನ್ನು ಮಾತ್ರ ಅಷ್ಟೇ ಸ್ವಾರಸ್ಯಕರವಾಗಿ ಬಿಡಿಸಿ ಜಿ.ಆರ್.ರವರು ಪ್ರಸ್ತುತ ಪಡಿಸಿದರು.


ಭಾರತ ಕಂಡಂತಹ ತತ್ವ ಶಾಸ್ತ್ರದ ಇಬ್ಬರು ದೊಡ್ಡ ವಿದ್ವಾಂಸರುಗಳಾದ ಮಾಜಿ ರಾಷ್ಟ್ರ ಪತಿಗಳಾದ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ರವರು ಮತ್ತು ಪ್ರೊ.ಎಸ್.ಎಸ್.ದಾಸ್ ಗುಪ್ತ ರವರು, ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಇವರಿಗೆ ಪ್ರಾಧ್ಯಾಪಕರಾಗಿದ್ದವರು. ಈ ಯುವ ವಿಧ್ಯಾರ್ಥಿಯ ಕಾಲೆಳೆಯುವುದು ಇವರ ಹವ್ಯಾಸವಾಗಿತ್ತಂತೆ, ಒಮ್ಮೆ, ರಾಧಾಕೃಷ್ಣನ್ ರು, "ಇದನ್ನು ಕುರಿತು ನಿನ್ನ ಗುರು ಕಾರ್ಲ್ ಮಾರ್ಕ್ಸ್ ಏನು ಹೇಳುತ್ತಾರಪ್ಪ? ಎಂದು ಛೇಡಿಸಿದಾಗ, ದೇವಿ ಪ್ರಸಾದ್ ತಡಕಾಡದೆ ಉತ್ತರಿಸುತ್ತಿದ್ದರಂತೆ, ಯಾರಾದರೂ ಹೀಗೆ ಛೇಡಿಸಿದಾಗ, ಬೇಸರ ಮಾಡಿಕೊಳ್ಳದೆ ಹಂಗಿಸಿ ಲೇವಡಿ ಮಾಡುವುದಾಗಲಿ, ಅದನ್ನು ವಿರೋಧಿಸಿ ಕೇಕೆ ಹಾಕುವುದಾಗಲಿ ಇವರ ಗುಣ ವಾಗಿರಲಿಲ್ಲವಂತೆ, ಇವರೊಬ್ಬ ಅತ್ಯಂತ ಸಂಪ್ರದಾಯ ಬದ್ಧ ಕುಟುಂಬ ದಿಂದ ಬಂದವರಾಗಿದ್ದರು, ಅಮೋಘ ವಾಗಿ ತತ್ವಬದ್ಧ ವಾಗಿ ಪ್ರತಿಕ್ರಿಯೆ ನೀಡುತ್ತಿದ್ದರು. ದೇಬಿದಾ ರವರು ಇದು ಅವರ ಒಳ್ಳೆಯ ಸ್ವಭಾವವಾಗಿತ್ತು, ತಮ್ಮ ಜೀವನಪರ್ಯಂತ ಇಂತಹ ಸಾವಿರಾರು ಪ್ರಶೆಗಳಿಗೆ ಸಮಗ್ರವಾಗಿ ಉತ್ತರಿಸುವ ಕಲೆಯನ್ನು ಅವರು ತಮ್ಮ ಸಂಶೋಧನೆಯ ಮೂಲಕ ವೈಜ್ಞಾನಿಕವಾಗಿ ಕರಗತ ಮಾಡಿಕೊಳ್ಳಲು ಸಾಧ್ಯವಾಗಿತ್ತು ಎಂದರು.ಜಿ.ಆರ್ ರವರು.

ಮತ್ತೊಂದು, ಪ್ರಸಂಗವನ್ನು ಜಿ.ಆರ್ ರವರು ತಿಳಿಸಿದರು. 70 ರ ದಶಕದಲ್ಲಿ ನಡೆದಿದ್ದು, ಒಂದು ಅಖಿಲ ಭಾರತ ತತ್ವಶಾಸ್ತ್ರಜ್ಞ ರ ಸಮೇಳನದಲ್ಲಿ, ಒಬ್ಬ ಹಿರಿಯ ಪ್ರಾಧ್ಯಾಪಕರು ಇವರ ಬಗ್ಗೆ ನಿರ್ಣಯವನ್ನು ಚರ್ಚೆಗೆ ಮಂಡಿಸಿದ್ದರಂತೆ, ಅದರ ಸಾರ "ದೇವಿ ಪ್ರಸಾದ್ ರು ತನ್ನ ಕೃತಿಗಳ ಮೂಲಕ ಯುವ ಪೀಳಿಗೆಯಲ್ಲಿ, ತತ್ವಶಾಸ್ತ್ರಜ್ಞರ ನಡುವೆ ವಿಷಗಾಳಿ ಹಬ್ಬಿಸುತ್ತಿದಾನೆ. ಇದನ್ನು ತಡೆಗಟ್ಟಲು ಕ್ರಮಗಳನ್ನು ಕೈಗೊಳ್ಳ ಬೇಕೆಂದು ಈ ಸಮ್ಮೇಳನವು ನಿರ್ಣಯಿಸುತ್ತದೆ" ಎನ್ನಲಾಗಿತ್ತು. ಆ ನಂತರ ನಡೆದ ಚರ್ಚೆಯಿಂದ ಆ ನಿರ್ಣಯವನ್ನು ಕೈ ಬಿಡಲಾಯಿತಂತೆ. ಅಂದರೆ ವಿಷಗಾಳಿ ಹಬ್ಬಿಸುವ ಇವರು ಮುಂದೊಮ್ಮೆ, ಭಾರತೀಯ ತತ್ವಶಾಸ್ತ್ರದ ಸಂಶೋಧನಾ ಸಮಿತಿಯ ಸದಸ್ಯರಾಗಿ ನೇಮಕ ರಾದರು.

ಇನ್ನೊಂದು, ಸಂದರ್ಭದಲ್ಲಿ ಡಾ.ಎಸ್. ರಾಮಕೃಷ್ಣ ನ್ ರವರು ರಾಷ್ಟ್ರಪತಿಯಾಗಿ, ಸಿಮ್ಲಾದಲ್ಲಿರುವ ಪ್ರೌಢ ಅಧ್ಯಯನ ಕೇಂದ್ರ ದ ಒಂದು ವಿಚಾರ ಸಂಕಿರಣದ ಉದ್ಘಾಟನೆ ಮಾಡಲು ಆಗಮಿಸಿದ್ದಾಗ, ಅಲ್ಲಿಗೆ ಆಮಂತ್ರಿತರಾಗಿ ಆಗಮಿಸಿದ್ದ ದೇಬಿ ಪ್ರಸಾದ್ ರನ್ನು ಗುರುತಿಸಿದ ರಾಧಾಕೃಷ್ಣನ್ ರು, ತಮ್ಮ ಶಿಷ್ಯನ ಸಾಧನೆಯನ್ನು ಮೆಚ್ಚಿ ಹತ್ತಿರ ಕ್ಕೆ ಬಂದು ಮಾರ್ಕ್ಸ್‌ವಾದವನ್ನು ಅತ್ಯಂತ ಗಾಂಭೀರ್ಯ ದಿಂದ ಅಭ್ಯಾಸ ವನ್ನು ಮುಂದುವರಿಸಿದ್ದಕ್ಕಾಗಿ ಅಭಿನಂದಿಸಿದ್ದರಂತೆ. ಪಕ್ಕದಲ್ಲಿ ಕುಳಿತ್ತಿದ್ದವರೊಬ್ಬರು, ದೇಬಿದಾ ಇಂದಿಗೆ ನೀನು ಧನ್ಯನಾದೆ ಎಂದದ್ದು ಇವರಲ್ಲಿ ಅಚಲವಾಗಿದ್ದ ಬೌದ್ಧಿಕ ತಿಳುವಳಿಕೆಗೆ ಹಿಡಿದ ಕನ್ನಡಿಯಾಗಿತ್ತು.

ಬೆಂಗಳೂರಿನಲ್ಲಿ ವ ಭಾರತೀಯ ವಿಜ್ಞಾನ ಸಂಸ್ಥೆಯ ಅಂದಿನ ನಿರ್ದೇಶಕ ರಾಗಿದ್ದ, ಡಾ. ಸಿ.ಎನ್.ಆರ್.ರಾವ್ ರವರು ಅಧ್ಯಕ್ಷತೆಯಲ್ಲಿ ವಿಜ್ಞಾನ ಅಕಾಡೆಮಿಯ ಸಮ್ಮೇಳನದಲ್ಲಿ ಉಪನ್ಯಾಸ ನೀಡಿದ್ದಾರೆ. ಇವರ ಹತ್ತಾರು ಕೃತಿಗಳನ್ನು ಓದಲು ಜಿ.ಆರ್ ರವರು ಸಲಹೆ ಕೊಟ್ಟರು. "ಲೋಕಾಯತ", "ಪ್ರಾಚೀನ ಭಾರತದ ವಿಜ್ಞಾನ ತಂತ್ರಜ್ಞಾನಗಳ ಇತಿಹಾಸ", "ಭಾರತೀಯ ತತ್ವಶಾಸ್ತ್ರ", ಜನಪ್ರಿಯ ಕೈಪಿಡಿ, "ಭಾರತೀಯ ನಾಸ್ತಿಕತೆ", ಭಾರತೀಯ ತತ್ವಶಾಸ್ತ್ರದಲ್ಲಿ ಕಾಳು ಮತ್ತು ಜೊಳ್ಳು", " ತತ್ವಶಾಸ್ತ್ರಜ್ಞನಾಗಿ ಲೆನಿನ್, "ಭಾರತೀಯ ಪರಂಪರೆಯಲ್ಲಿ ಭೌತವಾದ ಮತ್ತು ಭಾವನಾವಾದ"ಹೀ ಎಲ್ಲಾ ಶಿಸ್ತು ಬದ್ಧತೆಯಿಂದ ಅಧ್ಯಯನ ಮತ್ತು ಸಂಶೋಧನೆ ಮಾಡಿ ರಚಿಸಿದಂತಹ ಕೃತಿಗಳನ್ನು ಅಭ್ಯಾಸ ಮಾಡಿರೆಂದು ತಿಳಿಸಿದರು.

ಒಟ್ಟಾರೆಯಾಗಿ, ದೇವಿ ಪ್ರಸಾದ್ ಚಟ್ಟೋಪಾಧ್ಯಾಯ ಕರಿತಂತೆ ಮತ್ತಷ್ಟು ಓದಲು ನನ್ನಂತಹ ಹಲವು ಸಂಗಾತಿಗಳಿಗೆ ಡಾ.ಜಿ.ಆರ್ ರವರ ಉಪನ್ಯಾಸ ತುಂಬಾ ಉಪಯುಕ್ತ ವಾಯಿತು. ●



ವಾಸುದೇವ ಉಚ್ಚಿಲ

ಕಡಲ ಕರೆ



ಜನಪದ ಮರಳು ನೀತಿಗಾಗಿ ಕರಾವಳಿ ಜಿಲ್ಲೆಗಳಲ್ಲಿ ಪ್ರತಿಭಟನೆಗಳು

ಮಂಗಳೂರು: ಕರಾವಳಿ ಜಿಲ್ಲೆಗಳಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ ಹೇರಳ ಮರಳು ಲಭ್ಯವಿದ್ದರೂ, ಕೃತಕವಾಗಿ ಮರಳಿನ ಕೊರತೆಯನ್ನು ಸೃಷ್ಟಿಸಲಾಗಿದೆ. ಒಂದೆಡೆ ಸರಕಾರದ ನೀತಿಗಳಿಂದಾಗಿ ಕೊರತೆ ಸೃಷ್ಟಿಯಾಗಿದ್ದರೆ, ಇನ್ನೊಂದೆಡೆ ರಿಯಲ್ ಎಸ್ಟೇಟ್ ಮಾಫಿಯಾ ಕೈಯಲ್ಲಿ ಮರಳು ಮಾಯವಾಗುತ್ತಿದೆ ಎಂಬುದಾಗಿ ರಾಜ್ಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ರಾಜ್ಯ ಒಕ್ಕೂಟದ ಕಾರ್ಯದರ್ಶಿ ಕೆ.ಮಹಾಂತೇಶ್ ಆಕ್ರೋಶ ವ್ಯಕ್ತಪಡಿಸಿದರು. ಅವರು ಡಿಸೆಂಬರ್ 3 ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಕಟ್ಟಡ ನಿರ್ಮಾಣ ಕಾರ್ಮಿಕರ ಜಿಲ್ಲಾ ಫೆಡರೇಶನ್ ವತಿಯಿಂದ ನಡೆದ ಒಂದು ದಿನದ ಧರಣಿ ಸತ್ಯಾಗ್ರಹವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಕೇಂದ್ರ ಸರಕಾರವು ಸಿಆರ್‌ಜೆಡ್ ನಿಯಮಗಳಲ್ಲಿ ರೂಪಿಸಿದ ಕೆಲವು ಅರೆಕೊರೆಗಳಿಂದಾಗಿ ರಾಷ್ಟ್ರೀಯ ಗ್ರೀನ್ ಟ್ರಿಬ್ಯೂನಲ್ ಮರಳುಗಾರಿಕೆಯ ವಿಸ್ತರಣೆಗೆ ಕರಾವಳಿ ನದೀಪಾತ್ರಗಳಲ್ಲಿ ಅವಕಾಶ ಮಾಡಿಕೊಡುತ್ತಿಲ್ಲ. ಅಲ್ಲದೆ 18 ತಿಂಗಳಿಂದ ಟ್ರಿಬ್ಯೂನಲ್ ಪ್ರಧಾನ ನ್ಯಾಯಾಧೀಶ ಹುದ್ದೆ ಖಾಲಿ ಇದೆ. ಈ ಬಗ್ಗೆ ಕರಾವಳಿ ಸಂಸದರುಗಳು ಕೇಂದ್ರ ಸರಕಾರಕ್ಕೆ ಸೂಕ್ತ ಪ್ರಸ್ತಾವಗಳನ್ನು ಮಂಡಿಸುತ್ತಿಲ್ಲ. ಸಂಸದರೂ, ರಾಜ್ಯ ಶಾಸಕರೂ ಸಮಸ್ಯೆಯ ಮೂಲಕ್ಕೆ ಹೋಗದೆ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ. ಮರಳು ಮಾಫಿಯಾವನ್ನು ನಿಯಂತ್ರಿಸುವಲ್ಲಿಯೂ ಜಿಲ್ಲಾಡಳಿತಗಳು ವಿಫಲವಾಗಿದೆ. ಇದರಿಂದಾಗಿ ಸಾಮಾನ್ಯ ಜನರಿಗೆ ಬೇಕಾದ ವಸತಿ ಇತ್ಯಾದಿ ಕಾಮಗಾರಿಗಳಿಗೆ ಮರಳು ಸಿಗುತ್ತಿಲ್ಲ. ಅಲ್ಲದೆ ದುಪ್ಪಟ್ಟು ಮೀರಿದ ಬೆಲೆಗೆ ಮರಳನ್ನು ಕೊಳ್ಳಬೇಕಾಗಿದೆ. ಇದರಿಂದ ಕಟ್ಟಡ ನಿರ್ಮಾಣ ಸ್ಥಗಿತವಾಗಿದೆ. ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಸಾಕಷ್ಟು ಕೆಲಸ ಸಿಗುತ್ತಿಲ್ಲ. ಅಧಿಕಾರಿಗಳು ಮತ್ತು ಚುನಾಯಿತ ಸದಸ್ಯರ ಒಳಒಪ್ಪಂದದಿಂದಾಗಿ ಮರಳಿನ ಕೃತಕ ಅಭಾವ ಉಂಟಾಗಿದೆ ಎಂದು ಮಹಾಂತೇಶ್ ಆರೋಪಿಸಿದರು.

ಜಿಲ್ಲಾ ಫೆಡರೇಶನಿನ ಪ್ರಧಾನ ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರು ಪ್ರಸ್ತಾವಿಕ ಮಾತುಗಳನ್ನಾಡಿದರು. ಪ್ರತಿಭಟನೆಯಲ್ಲಿ ಸಿಐಟಿಯು ರಾಜ್ಯ ಉಪಾಧ್ಯಕ್ಷ ವಸಂತ ಆಚಾರಿ, ಜಿಲ್ಲಾ ಮುಖಂಡರಾದ ಯು.ಬಿ.ಲೋಕಯ್ಯ, ಸದಾಶಿವದಾಸ್, ಜಯಂತ ನಾಯ್ಕ್, ವಸಂತಿ ಕುಪ್ಪೆಪದವು, ರಾಮಣ್ಣ ವಿಟ್ಲ, ಕಟ್ಟಡ ನಿರ್ಮಾಣ ಕಾರ್ಮಿಕ ಮುಖಂಡರಾದ ರವಿಚಂದ್ರ ಕೊಂಚಾಡಿ, ಜನಾರ್ಧನ ಕುತ್ತಾರ್, ನಾಗರಾಜ್ ಸುಳ್ಯ, ಶಂಕರ ವಾಲ್ಪಾಡಿ ಭಾಗವಹಿಸಿದ್ದರು. ಬಂದರು ಕಾರ್ಮಿಕ ಸಂಘಟನೆಯ ಮುಖಂಡ ಬಿ.ಕೆ.ಇಮ್ತಿಯಾಜ್ ಸಮಾರೋಪ ಭಾಷಣ ಮಾಡಿದರು.

ವಾಮಂಜೂರು: ಗುರುಪುರ ವಲಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕ ಸಂಘದ ನೇತೃತ್ವದಲ್ಲಿ ನವಂಬರ್ 30ರಂದು ವಾಮಂಜೂರು ಬಸ್ ನಿಲ್ದಾಣದಲ್ಲಿ ಮರಳು ಅಭಾವದ ವಿರುದ್ಧ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ದ.ಕ. ಜಿಲ್ಲಾ ಸಮಿತಿ ಮುಖಂಡರಾದ ಸದಾಶಿವದಾಸ್ ಮಾತನಾಡಿದರು. ಸ್ಥಳೀಯ ಸಿಐಟಿಯು ಮುಖಂಡರಾದ ಗಂಗಯ್ಯ ಅಮೀನ್, ಡಿವೈಎಫ್‌ಐ ಮುಖಂಡ ಮನೋಜ್ ವಾಮಂಜೂರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬೆಳ್ತಂಗಡಿ: ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಬೆಳ್ತಂಗಡಿ ತಾಲೂಕು ಸಂಘಟನೆಯ ವತಿಯಿಂದ ನವಂಬರ್ 30 ರಂದು ಬೆಳ್ತಂಗಡಿ ಮಿನಿ ವಿಧಾನಸೌಧದ ಎದುರು ಪ್ರತಿಭಟನೆ ನಡೆಯಿತು.

ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ಮುಖಂಡ ಎಸ್.ಎಂ.ಶಿವಕುಮಾರ್, ನ್ಯಾಯವಾದಿ ಸುಕನ್ಯಾ ಎಚ್, ಹಳ್ಳಿಮನೆ ಹೈದರಾಲಿ ಮಾತನಾಡಿದರು. ರೋಹಿಣಿ ಪೆರಾಡಿ, ಜಗನ್ನಾಥ ಲಾಯಿಲ, ಜಯಂತಿ ನೆಲ್ಲಿಂಗೇರಿ, ನಾರಾಯಣ ಬೆಳ್ತಂಗಡಿ ಮೊದಲಾದ ಕಾರ್ಮಿಕ ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಪ್ರತಿಭಟನೆಗೆ ಮೊದಲು ಬೆಳ್ತಂಗಡಿ ಪೇಟೆಯಲ್ಲಿ ಮೆರವಣಿಗೆ ನಡೆಸಲಾಯಿತು.

ಕುಂದಾಪುರ: ಕುಂದಾಪುರ ತಾಲೂಕು ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಮಹಾಸಭೆ ಡಿಸೆಂಬರ್ 2ರಂದು ಕುಂದಾಪುರದಲ್ಲಿ ನಡೆಯಿತು. ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿ, ಉಡುಪಿ ಜಿಲ್ಲೆಯಲ್ಲಿ ಮರಳು ಸಮಸ್ಯೆಯನ್ನು ಪರಿಹರಿಸುವಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸಂಪೂರ್ಣವಾಗಿ ವಿಫಲವಾಗಿದೆ ಎಂದು ಟೀಕಿಸಿದರು.


ಸಂಘದ ಅಧ್ಯಕ್ಷ ಯು.ದಾಸು ಭಂಡಾರಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ತಾಲೂಕು ಕಾರ್ಯದರ್ಶಿ ಸುರೇಶ್ ಕಲ್ಲಾಗರ ವಾರ್ಷಿಕ ವರದಿ ಮಂಡಿಸಿದರು. ಸಿಐಟಿಯು ರಾಜ್ಯ ಉಪಾಧ್ಯಕ್ಷ ಕೆ.ಶಂಕರ್ ತಾಲೂಕು ಮುಖಂಡರಾದ ಎಚ್.ನರಸಿಂಹ, ಮಹಾಬಲ ವಡೇರಹೋಬಳಿ, ನಾಗರತ್ನ ನಾಡ, ಬಲ್ಕೀಸು ಬಾನು ಕುಂದಾಪುರ, ಕಟ್ಟಡ ನಿರ್ಮಾಣ ತಾಲೂಕು ಮುಖಂಡರಾದ ರಮೇಶ್ ಗುಲ್ವಾಡಿ, ಶ್ರೀಧರ ಉಪ್ಪುಂದ ಸಮ್ಮೇಳನದಲ್ಲಿ ಉಪಸ್ಥಿತರಿದ್ದರು. ●

ಉಡುಪಿಯಲ್ಲಿ ಬಿಎಸ್ಸೆನ್ನೆಲ್ ಕಾರ್ಮಿಕರಿಂದ ಜಾಥಾ:

ಉಡುಪಿ ಜಿಲ್ಲೆಯ ಎಲ್ಲಾ ದೂರವಾಣಿ ಕೇಂದ್ರಗಳ ಮೊಬೈಲ್ ಟವರಿನಲ್ಲಿ ಮತ್ತು ದೂರವಾಣಿ ಕೇಂದ್ರಗಳಲ್ಲಿ 200 ಗುತ್ತಿಗೆ ಕಾರ್ಮಿಕರು ದುಡಿಯುತ್ತಿದ್ದು, ಇತ್ತೀಚಿನ ಕೆಲವು ತಿಂಗಳುಗಳಿಂದ ನಿಗದಿತ ದಿನಾಂಕದಂದು ವೇತನ ಪಾವತಿಯಾಗುತ್ತಿಲ್ಲ. ಬಾಕಿ ವೇತನ ಶೀಘ್ರ ಪಾವತಿಸುವಂತೆ ಹಾಗೂ ಇನ್ನಿತರ ಬೇಡಿಕೆಗಳನ್ನು ಆಗ್ರಹಿಸಿ ಕರ್ನಾಟಕ ರಾಜ್ಯ ಬಿಎಸ್ಸೆನ್ನೆಲ್ ನಾನ್ ಪರ್ಮನೆಂಟ್ ವರ್ಕರ್ಸ್ ಯೂನಿಯನ್ ಉಡುಪಿ ಜಿಲ್ಲಾ ಸಮಿತಿಯ ವತಿಯಿಂದ ಉಡುಪಿಯ ಬಿಎಸ್ಸೆಎನ್ನೆಲ್ ಉಪಮಹಾಪ್ರಬಂಧಕರ ಕಚೇರಿವರೆಗೆ ಪ್ರತಿಭಟನಾ ಜಾಥಾವನ್ನು ಡಿಸೆಂಬರ್ 3ರಂದು ನಡೆಸಲಾಯಿತು.

ಉಡುಪಿ ಬಸ್ ನಿಲ್ದಾಣದಿಂದ ಆರಂಭಗೊಂಡ ಜಾಥಾವು ಸರ್ವಿಸ್ ಬಸ್ ನಿಲ್ದಾಣ, ಸಿಟಿ ಬಸ್ ನಿಲ್ದಾಣ, ಕಡಿಯಾಳವರೆಗೆ ಸಾಗಿ, ಅಲ್ಲಿನ ಕಚೇರಿಯಲ್ಲಿ ಮನವಿ ಸಲ್ಲಿಸಲಾಯಿತು. ಈ ಸಂದರ್ಭ ಯೂನಿಯನ್ ಜಿಲ್ಲಾಧ್ಯಕ್ಷ ಶಶಿಧರ ಗೊಲ್ಲ, ಕಾರ್ಯದರ್ಶಿ ಮೋಹನ್, ಸಿಐಟಿಯು ಉಡುಪಿ ಜಿಲ್ಲಾಧ್ಯಕ್ಷ ವಿಶ್ವನಾಥ ರೈ, ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ ಉಪಸ್ಥಿತರಿದ್ದರು. ●

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಜಿ ವೆಂಕಟಸುಬ್ಬಯ್ಯ, ನಾಗರಾಜಪ್ಪ ಅವರಿಗೆ ಅಭಿನಂದನೆಗಳು



ಜಿ. ವೆಂಕಟಸುಬ್ಬಯ್ಯ




ಕೆ.ಜಿ ನಾಗರಾಜಪ್ಪ

ಕನ್ನಡದ ಖ್ಯಾತ ಸಂಶೋಧಕ, ಭಾಷಾ ತಜ್ಞ ಜಿ. ವೆಂಕಟಸುಬ್ಬಯ್ಯನವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಭಾಷಾ ಸಮ್ಮಾನ್ ಪ್ರಶಸ್ತಿ.ಲಭಿಸಿದೆ. ಇನ್ನೋರ್ವ ಸೃಜನಶೀಲ ಲೇಖಕ ಕೆ.ಜಿ ನಾಗರಾಜಪ್ಪ ಅವರ ಚಿಂತನಶೀಲ ಬರಹ ಮಾಲಿಕೆ 'ಅನುಶ್ರೇಣಿ ಯಜಮಾನಿಕೆ' ಪುಸ್ತಕಕ್ಕೆ 2018ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಲಭಿಸಿದೆ.

2016–17ನೇ ಸಾಲಿನ ಭಾಷಾ ಸಮ್ಮಾನ್ ಪುರಸ್ಕಾರಕ್ಕೆ ವೆಂಕಟಸುಬ್ಬಯ್ಯ ಆಯ್ಕೆಯಾಗಿದ್ದಾರೆ. ಎರಡೂ ಪ್ರಶಸ್ತಿಯು ಒಂದು ಲಕ್ಷ ನಗದು ಹಾಗೂ ಸ್ಮರಣಿಕೆ ಹೊಂದಿರಲಿದೆ.





ಕೇಂದ್ರ ಸಾಹಿತ್ಯ ಅಕಾಡಮಿ ಅಧ್ಯಕ್ಷ ಚಂದ್ರಶೇಖರ್ ಕಂಬಾರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ವಿವಿಧ ಭಾಷೆಗಳ ಒಟ್ಟು 24 ಪುಸ್ತಕಗಳಿಗೆ ಪ್ರಶಸ್ತಿ ಘೋಷಿಸಲಾಗಿದೆ. 2019ರ ಜನವರಿ 29ರಂದು ದೆಹಲಿಯಲ್ಲಿ ಪ್ರಶಸ್ತಿ ವಿತರಣೆ ಸಮಾರಂಭ ನಡೆಯಲಿದೆ.

ಬೆಳ್ತಂಗಡಿ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯಿಂದ ಆದಿವಾಸಿ ಸಮಾವೇಶ:



ಡಿಸೆಂಬರ್ 3 ರಂದು ಬೆಳ್ತಂಗಡಿಯಲ್ಲಿ ನಡೆದ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಸಮಾವೇಶವನ್ನು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ರಾಜ್ಯ ಸಹಸಂಚಾಲಕ ಎಸ್.ವೈ. ಗುರುಶಾಂತ್ ಉದ್ಘಾಟಿಸಿದರು.

ಆದಿವಾಸಿಗಳಿಂದ ಕಾಡು ನಾಶವಾಗಿಲ್ಲ. ರಾಷ್ಟ್ರೀಯ ಉದ್ಯಾನವನ, ಆನೆ ಕಾರಿಡಾರ್, ಹುಲಿ ಸಂರಕ್ಷಣಾ ವಲಯ ಹಾಗೂ ವಿವಿಧ ವರದಿಗಳ ಜಾರಿ ಹೆಸರಲ್ಲಿ ಕಾಡಿನಲ್ಲಿ ವಾಸವಾಗಿರುವ ಆದಿವಾಸಿಗಳಿಗೆ ವಿದ್ಯುತ್, ರಸ್ತೆ ಇತ್ಯಾದಿ ನಾಗರಿಕ ಸೌಲಭ್ಯಗಳನ್ನು ನಿರಾಕರಿಸಲಾಗುತ್ತಿದೆ. ಅಲ್ಲದೆ ಅವರ ಮೂಲವಾಸದಿಂದ ಹೊರದಬ್ಬಲಾಗುತ್ತಿದೆ ಎಂದವರು ಟೀಕಿಸಿದರು.

ಆದಿವಾಸಿ ಹಕ್ಕುಗಳ ತಾಲೂಕು ಸಮನ್ವಯ ಸಮಿತಿ ಅಧ್ಯಕ್ಷ ರಾಜ್ಯ ಸಮಿತಿ ಸದಸ್ಯ ಶ್ರೀಧರ ನಡ, ಸಂಚಾಲಕ ಶೇಖರ ಲಾಯಿಲ, ಕಾರ್ಮಿಕ ಮುಖಂಡ ಎಸ್.ಎಂ.ಶಿವಕುಮಾರ್ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ಸಮಿತಿಯ ತಾಲೂಕು ಸಂಘಟನಾ ಸಂಚಾಲಕ ಜಯಾನಂದ ಪಿಲಿಕಲ, ರಾಜ್ಯ ಸಮಿತಿ ಸದಸ್ಯರಾದ ಮಹೇಶ್ವರ ಸಾಲ್ಯಾನ್ ಸಕಲೇಶಪುರ, ನಾಗರಾಜ್ ಏಳಿಗೆ ಶಿವಮೊಗ್ಗ ಹಾಗೂ ತಾಲೂಕು ಸಮಿತಿ ಮುಖಂಡರು ಉಪಸ್ಥಿತರಿದ್ದರು. ●

ಡಿಸೆಂಬರ್ 6 : ಸಂವಿಧಾನ ಮತ್ತು ಜಾತ್ಯಾತೀತ ರಕ್ಷಣೆಗಾಗಿ ಪ್ರಚಾರ, ಧರಣಿ



ಬಾಬರಿ ಮಸೀದಿ ನಾಶದ 26ನೇ ವಾರ್ಷಿಕ ಮತ್ತು ಡಾ. ಅಂಬೇಡ್ಕರ್ ಪರಿನಿರ್ವಾಣ ದಿನವಾಗಿರುವ ಡಿಸೆಂಬರ್ 6ನ್ನು ಸಂವಿಧಾನ ಮತ್ತು ಜಾತ್ಯಾತೀತ ರಕ್ಷಣೆಯ ದಿನವಾಗಿ ಆಚರಿಸಿ, ಆ ದಿನ ಪ್ರಚಾರ ಧರಣಿಗಳನ್ನು ಕೈಗೊಳ್ಳಬೇಕೆಂದು ಎಡ ಪಕ್ಷಗಳು ಅಖಿಲ ಭಾರತ ಕರೆ ನೀಡಿದ್ದವು. ಈ ಕರೆಯಂತೆಯೇ ಕರ್ನಾಟಕದಲ್ಲಿ ಬೆಂಗಳೂರು, ಉಡುಪಿ, ಹಾಸನ, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ದಾವಣಗೆರೆ ಮುಂತಾದ ಕಡೆ ಪ್ರಚಾರ, ಧರಣಿ ನಡೆದ ವರದಿಗಳು ಬಂದಿವೆ. ಕೆಲವು ವರದಿಗಳು ಇಲ್ಲಿವೆ.



ಉಡುಪಿ : ಸಾಂವಿಧಾನಿಕ ಸಂಸ್ಥೆಯಾಗಿರುವ ಸುಪ್ರೀಂಕೋರ್ಟ್ ತೀರ್ಪುಗಳನ್ನು ಸಂಘಪರಿವಾರ ಅಧಿಕಾರಕ್ಕೆ ಬಂದ ಇತ್ತೀಚಿನ ದಿನಗಳಲ್ಲಿ ತುಳಿಯುವ ಪ್ರಯತ್ನಗಳನ್ನು ಮಾಡುತ್ತಿರುವುದು ಸಂವಿಧಾನಕ್ಕೆ ಮಾಡುವ ದ್ರೋಹವಾಗಿದೆ. ಅಲ್ಲದೇ ಸಂವಿಧಾನವನ್ನೇ ಬದಲಿಸುವ ಹುನ್ನಾರಗಳು ನಡೆಯುತ್ತಿದೆ ಎಂದು ಸಿಪಿಎಂ ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣಶೆಟ್ಟಿ ಹೇಳಿದರು. ಅವರು ಉಡುಪಿ ಅಜ್ಜರಕಾಡಿನ ಹುತಾತ್ಮರ ಸ್ಮಾರಕ ಬಳಿ ನಡೆದ ಸಂವಿಧಾನ ಮತ್ತು ಜಾತ್ಯಾತೀತ ಸಂರಕ್ಷಣೆಗಾಗಿ ನಡೆದ ಧರಣಿ ಸತ್ಯಾಗ್ರಹದಲ್ಲಿ ಹೇಳಿದರು.

ಬಿಜೆಪಿ ಪಕ್ಷಕ್ಕೆ ಚುನಾವಣೆ ಹತ್ತಿರವಾದಂತೆಲ್ಲ ರಾಮಮಂದಿರ ನೆನಪಾಗಿ ತನ್ನ ಅಂಗಸಂಸ್ಥೆಗಳಿಂದ ಜನರ ಭಾವನೆ ಕೆರಳಿಸಿ ಓಟು ಪಡೆಯುವ ರಾಜಕಾರಣ ಮಾಡುತ್ತಿದೆ. ಜನರಿಗೆ ಸನ್ಮಾರ್ಗ ತೋರಿಸಬೇಕಾದ ಪೇಜಾವರ ಶ್ರೀಗಳು ಸುಪ್ರೀಂಕೋರ್ಟ್ ತೀರ್ಪು ಕಾಯಬೇಕಾಗಿಲ್ಲ ಕೇಂದ್ರಸರಕಾರ ಸುಗ್ರೀವಾಜ್ಞೆ ಹೊರಡಿಸಬೇಕು ಎಂದು ಹೇಳಿರುವುದು ಖಂಡನೀಯ. ರಾಮಮಂದಿರ ನಿರ್ಮಾಣ ಮಾಡಲು ಯಾರಿಂದಲೂ ವಿರೋಧವಿಲ್ಲ. ಆದರೆ ವಿವಾದಿತ ಸ್ಥಳದಲ್ಲೇ ಮಾಡಬೇಕು ಎಂಬುವುದನ್ನು ಸಿಪಿಎಂ ವಿರೋದಿಸುತ್ತದೆ ಮತ್ತು ಸುಪ್ರೀಂ ಕೋರ್ಟ್ ತೀರ್ಪಿಗೆ ಬದ್ದರಾಗಬೇಕು ಎಂದು ಒತ್ತಾಯಿಸುತ್ತದೆ.

ದೇಶದ ಸ್ವಾತಂತ್ರ್ಯಕ್ಕಾಗಿ ಹಿಂದು, ಮುಸ್ಲಿಂ, ಕ್ರೈಸ್ತರು, ಜೈನರು, ಸಿಕ್ಕರು, ಬೌದ್ಧರು ಎಲ್ಲರೂ ಒಟ್ಟಾಗಿ ಹೋರಾಟ ನಡೆಸಿದ್ದರು. ಈ ಆಧಾರದಲ್ಲಿ ಡಾ.ಬಿ.ಆರ್ ಅಂಬೇಡ್ಕ್ ರವರು ಸಂವಿಧಾನ ರಚಿಸಿದರು. ಸಂವಿಧಾನದಲ್ಲಿ ಧರ್ಮನಿರಪೇಕ್ಷತೆ, ಜಾತ್ಯಾತೀತತೆ ಅಂಶಗಳು ಬಂದಿವೆ. ಇಂದು ಆಳುವ ಶಕ್ತಿಗಳಿಂದಲೇ ಈ ಅಂಶಕ್ಕೆ ಅಪಾಯ ಬಂದಿರುವುದು ದೇಶದ ಐಕ್ಯತೆಗೆ ಕಂಟಕವಾಗಿದೆ ಎಂಬುವುದು ಆತಂಕಕಾರಿಯಾಗಿದೆ. ಸಿಪಿಎಂ ಪಕ್ಷವು ಸಂವಿಧಾನ ರಕ್ಷಿಸಲು ನಿರಂತರ ಇಂತಹ ಶಕ್ತಿಗಳ ವಿರುದ್ಧ ಹೋರಾಟ ನಡೆಸಲಿದೆ ಎಂದು ಹೇಳಿದರು.



ಕಾರ್ಯದರ್ಶಿ ಮಂಡಳಿ ಸದಸ್ಯರಾದ ಹೆಚ್ ನರಸಿಂಹ ಮಾತನಾಡಿ ಅಧಿಕಾರಕ್ಕಾಗಿ ಸುಳ್ಳುಗಳನ್ನೇ ಹೇಳಿ ಅಧಿಕಾರಕ್ಕೆ ಬಂದ ಬಿಜೆಪಿ ಕಳೆದ 4 ವರ್ಷಗಳ ಆಡಳಿತ ವೈಫಲ್ಯ ಕಂಡಿದೆ.ಬಂಡವಾಳವಿಲ್ಲದ ಬಿಜೆಪಿಗೆ ರಾಮ ಮಂದಿರ ಆಸರೆಯಾಗಿದೆ. ದೇಶದಲ್ಲಿ ಮತ್ತೊಮ್ಮೆ ಅಧಿಕಾರಕ್ಕೆ ಬರುವ ಕನಸು ಕಾಣುತ್ತಿದೆ ಎಂದು ಹೇಳಿದರು. ವಿಠ್ಠಲ ಪೂಜಾರಿ ಸ್ವಾಗತಿಸಿದರು. ನರಸಿಂಹ ವಂದನಾರ್ಪಣೆ ಮಾಡಿದರು. ಧರಣಿಯಲ್ಲಿ ಸುರೇಶ್ ಕಲ್ಲಾಗರ, ಮಹಾಬಲ ವಡೇರಹೋಬಳಿ, ಶಶಿಧರ, ಬಲ್ಕೀಸ್, ರಾಮ ಕಾರ್ಕಡ, ಗೋಡ್ವಿನ್ ಇದ್ದರು

ಹಾಸನ : ದೇಶದ ಜಾತ್ಯಾತೀತ ಪರಿಕಲ್ಪನೆಗೆ ದಕ್ಕೆ ತರುವಂತೆ ಸಂವಿಧಾನದ ಆಶಯಗಳನ್ನು ಗಾಳಿಗೆ ತೂರುವಂತೆ ಅಂಬೇಡ್ಕರವರ ಆಶಯಗಳನ್ನು ಜನರು ನೆನಪಿಸಿಕೊಳ್ಳದಂತೆ ಮಾಡುವ ಹುನ್ನಾರದ ಭಾಗವಾಗಿ ಡಿಸೆಂಬರ್ 6 ರಂದು ಈ ದೇಶದ ಜಾತ್ಯಾತೀತತೆಯ ಪ್ರತೀಕವಾಗಿದ್ದ ಬಾಬರೀ ಮಸೀದಿಯನ್ನು ಸಂಘಪರಿವಾರ ಉರುಳಿಸುವ ಮೂಲಕ ಸಂವಿಧಾನಕ್ಕೆ ದ್ರೋಹ ಬಗೆಯಲಾಗಿದೆ ಎಂದು ಹಿರಿಯ ದಲಿತ ಮುಖಂಡರಾದ ರಾಜಶೇಖರ್ ರವರು ಆರೋಪಿಸಿದರು. ನಗರದಲ್ಲಿಂದು ಸಿಪಿಐಎಂ ಮತ್ತು ದಲಿತ ಜನಪರ ಸಂಘಟನೆಗಳ ನೇತೃತ್ವದಲ್ಲಿ ನಡೆದ ಬಾಬರಿ ಮಸೀದಿ ಧ್ವಂಸ ಮಾಡಿದ 26 ನೇ ವರ್ಷ ಮತ್ತು ಅಂಬೇಡ್ಕರ್‌ರವರ ಪರಿನಿರ್ವಾಣ ದಿನದ ಅಂಗವಾಗಿ ಸಂವಿಧಾನ ಉಳಿಸಿ ಜಾತ್ಯಾತೀತತೆಯನ್ನು ಸಂಭ್ರಕ್ಷಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.



ಹೇಮಾವತಿ ಪ್ರತಿಮೆಯ ಮುಂಬಾಗದಿಂದ ಅಂಬೇಡ್ಕರ್ ಪ್ರತಿಮೆಯವರೆಗೆ ಪಂಜಿನ ಮೆರವಣಿಗೆಯನ್ನು ನಡೆಸಿ ಸಭೆ ನಡೆಸಲಾಯಿತು. ಸಭೆಯನ್ನು ಉದ್ದೇಶಿಸಿ ಸಿಪಿಐಎಂನ ಹಾಸನ ಸ್ಥಳಿಯ ಸಮಿತಿ ಕಾರ್ಯದರ್ಶಿ ಎಚ್.ಆರ್. ನವೀನ್ ಕುಮಾರ್ ಮಾತನಾಡಿ ಕಳೆದ ನಾಲ್ಕುವರೆ ವರ್ಷಗಳಲ್ಲಿ ಕೇಂದ್ರದ ನರೇಂದ್ರ ಮೋದಿ ಸರ್ಕಾರ ಜಾರಿಗೆ ತಂದಿರುವ ಜನವಿರೋಧಿ ನೀತಿಗಳಿಂದ ಆಕ್ರೋಶಗೊಂಡ ಜನ ಬೀದಿಗಿಳಿದು ಪ್ರತಿಭಟನೆಗಳನ್ನು ನಡೆಸುತ್ತಿರುವ ಈ ಸಂದರ್ಭದಲ್ಲಿ ಜನರ ದಿಕ್ಕನ್ನು ಬೇರೆಡೆಗೆ ಸೆಳೆಯಲು ರಾಮಮಂದಿರ ನಿರ್ಮಾಣದ ಚರ್ಚೆಯನ್ನು ಸಂಘಪರಿವಾರ ಮತ್ತೆ ಹುಟ್ಟು ಹಾಕಿದೆ. ಇದು ಈ ದೇಶದ ಜಾತ್ಯಾತೀತ ಮತ್ತು ಸಂವಿಧಾನದ ಮೇಲೆ ಮಾಡುತ್ತಿರುವ ದಾಳಿಯಾಗಿದೆ ಎಂದರು.

ಮೆರವಣಿಗೆಯಲ್ಲಿ ಪೃಥ್ವಿ ಎಂ.ಜಿ, ಮುಬಾಷಿರ್ ಅಹಮದ್, ಮರಿಜ್ಯೋಸೆಫ್, ಜಿ.ಪಿ. ಸತ್ಯನಾರಾಯಣ, ಅರವಿಂದ್ ಮುಂತಾದವರಿದ್ದರು.

ಬೆಂಗಳೂರಿನಲ್ಲಿ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳ ನೇತೃತ್ವದಲ್ಲಿ ಟೌನ್ ಹಾಲ್ ನ ಎದುರು ಧರಣಿ ಸತ್ಯಾಗ್ರಹ ನಡೆಸಲಾಯಿತು.

ಹಗರಿಬೊಮ್ಮನಹಳ್ಳಿಯಲ್ಲಿ ಸಂವಿಧಾನ ಮತ್ತು ಜಾತ್ಯತೀತತೆಯ ಸಂರಕ್ಷಣೆ ಗಾಗಿ ಹಾಗೂ ಜಾತಿವಾದ ಕೋಮು ವಾದ ವಿರೋಧಿಸಿ (ಸಿಪಿಐ(ಎಂ), ದೇವದಾಸಿ ಮಹಿಳೆಯರ ವಿಮೋಚನಾ ಸಂಘ. KPRS. DHS, DYFI, JMS, CITU ಸಂಘಟನೆಗಳ ಪ್ರತಿಭಟನೆ ನಡೆಸಲಾಯಿತು.

●





ಶೀಘ್ರ ಬರ ಪರಿಹಾರ ಕಾಮಗಾರಿಗೆ ಒತ್ತಾಯ

ವಿಜಯಪುರ : ಸರ್ಕಾರ ಬರಗಾಲ ಎಂದು ಸಾರಿದ್ದು ಶಾಶ್ವತ ಬರಗಾಲ ಕಾಮಗಾರಿಗಳನ್ನು ಶೀಘ್ರ ಪ್ರಾರಂಭಿಸಬೇಕು ಹಾಗೂ ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಉಪಾಧ್ಯಕ್ಷ ಭೀಮಶಿ ಕಲಾದಗಿ, ಹಾಗೂ ರೈತ ಸಂಘದ ಜಿಲ್ಲಾ ಮುಖಂಡರು ಪರಶುರಾಮ ಮಂಟೂರ ಮಾತನಾಡಿ, ನೀರಾವರಿ ಯೋಜನೆಗಳು ಹಾಗೂ ಕೆರೆ ತುಂಬುವ ಯೋಜನೆಗಲನ್ನು ಸಮಾರೋಪಾದಿಯಲ್ಲಿ ಮುಗಿಸಬೇಕು. ಆಲಮಟ್ಟಿ ನಾರಾಯಣಪುರ ಎಡದಂತೆ ಬಲದಂಡೆ ನೀರು ಬಿಡಬೇಕು. ಆಲಮಟ್ಟಿ ಆಣೆಕಟ್ಟು 524 ಗೇಟ್ ಅಳವಡಿಸಬೇಕು. ಮಹಾತ್ಮಾಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ ಕೂಲಿ ಕಾರ್ಮಿಕರಿಗೆ ವರ್ಷವಿಡೀ ಉದ್ಯೋಗ ನೀಡಬೇಕು. ರೂ. 600 ವೇತನ ನೀಡಬೇಕು. ಚೆಕ್‌ಡ್ಯಾಂ, ಕೃಷಿ ಹೊಂಡಗಳನ್ನು ಪ್ರಾರಂಭಿಸಬೇಕು. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಭ್ರಷ್ಟಾಚಾರ ತಡೆಗಟ್ಟಬೇಕು. ಚಂಡ ಮಾರುತ ಗಾಳಿ ಬೀಸುವುದರಿಂದ ವ್ಯವಸಾಯ ಹಾಳಾಗಿದ್ದು, ಪರಿಹಾರ ಧನ ನೀಡಬೇಕು. ಬಾಗೇವಾಡಿ ಗ್ರಾಮದ ತಳೆವಾಡ ಗ್ರಾಮದ 10,500 ಪರಿಹಾರ ನೀಡಿದ್ದಾರೆ ಇನ್ನೂ ಹೆಚ್ಚಿಗೆ ಪರಿಹಾರ ಒದಗಿಸಬೇಕು. ಹಿಂಗಾರಿ, ಮುಂಗಾರಿ ಬೆಳೆ ಕಮರಿ ರೈತರಿಗೆ ಸಾಕಷ್ಟು ನಷ್ಟವಾಗಿದೆ. ಕೃಷಿ ಅಧಿಕಾರಿ, ಕಂದಾಯ ಅಧಿಕಾರಿಗಳ ಸಮೀಕ್ಷೆ ನಡೆಸಿ ಪರಿಹಾರಧನ ಒದಗಿಸಬೇಕು. ಈ ಮೇಲಿನ ಬೇಡಿಕೆಗಳನ್ನು ಶೀಘ್ರವಾಗಿ ಈಡೇರಿಸಬೇಕೆಂದು ಆಗ್ರಹಿಸಿದರು.

ಮುದ್ದೇಬಿಹಾಳ ತಾಲೂಕು ಕೃಷಿ ಪತ್ತಿನ ಸಹಕಾರಿ ಸಂಘ ಕೊಣ್ಣೂರ ಆಡಳಿತ ಮಂಡಳಿ ಸದಸ್ಯ ಶಂಕರಗೌಡ ಅಸ್ಕಿ ಮಾತನಾಡಿ, ಕೃಷಿ ಪತ್ತಿನ ಸಹಕಾರಿ ಸಂಘದ ಕಾರ್ಯದರ್ಶಿಯಾದ ಪ್ರಭುಗೌಡ ದ್ಯಾಪೂರ ಇವರಿಗೆ ನಾನು ಸಂಘದ ಯಾವುದೇ ಖರ್ಚುವೆಚ್ಚದ ಬಗ್ಗೆ, ಅಡಿಟ್ ವರದಿಯ ಮಾಹಿತಿ ಸಂಘದಲ್ಲಿ ನೌಕರರ ಪಗಾರ ತೆಗೆದ ಬಗ್ಗೆ ಎಲ್ಲ ಖರ್ಚಿನ ಬಾಬತ್ತಿನ ಬಗ್ಗೆ ಅಡಿಟ್ ವರದಿ ದಾಖಲೆಯನ್ನು ಕೇಳಿದಾಗ ಲಿಖೀತವಾಗಿ ಕೇಳಿಕೊಂಡರೂ ಕೂಡ ಯಾವುದೇ ರೀತಿಯಾಗಿ ಸ್ಪಂದನೆ ನೀಡಿರುವುದಿಲ್ಲ. ಕೂಡಲೆ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸಬೇಕು ಎಂದು ವಿನಂತಿಸಿಕೊಂಡರು. ಅದರಂತೆ ಚಂಡಮಾರುತಕ್ಕೆ ಬೆಳೆಗಳು ನಾಶವಾಗಿವೆ. ಅವರಿಗೆ ಪರಿಹಾರ ಒದಗಿಸಬೇಕು.

ಮನವಿ ಸ್ವೀಕರಿಸಿದ ಅಪರ ಜಿಲ್ಲಾಧಿಕಾರಿ ಪ್ರಸನ್ನ ಮಾತನಾಡಿ, ಈಗಾಗಲೇ ಕೇಂದ್ರ ತಂಡ ಬಂದಿದೆ ವರದಿ ಸಲ್ಲಿಸಿದೆ. ಕೃಷಿ, ತೋಟ, ಕಂದಾಯ ಅಧಿಕಾರಿಗಳು ಸಮೀಕ್ಷೆ ನಡೆಸಿ ಪರಿಹಾರ ಒದಗಿಸಲಾಗುವುದು ಎಂದು ಆಶ್ವಾಸನೆ ನೀಡಿದರು.

ಸಿಐಟಿಯು ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ ಹಂದ್ರಾಳ, ರಾಮಣ್ಣ ಶಿರಗೋಳ, ದಾದಾಪೀರ, ಸಿದ್ರಾಮ ಬಂಗಾರಿ, ಆರ್. ಬಡಿಗೇರ, ಚಿದಾನಂದ ಬೆಳ್ಳೆಣ್ಣವರ, ಸುಭಾಶ ಕೆಳಮನಿ, ಸುಮಿತ್ರಾ ಘೋಷಸಗಿ ಸೇರಿದಂತೆ ನೂರಾರು ರೈತರು, ಮಹಿಳೆಯರು ಭಾಗವಹಿಸಿದ್ದರು.

ಅತಿಥಿ ಅಂಕಣ



ಡಾ. ವಿನಯಾ ಒಕ್ಕುಂದ

ಅವಳು, ಬಂಗಡೆ ಫ್ರೈ ಮತ್ತು . . . . .

ಕಡೆಗೆ, ಕಟ್ಟ ಕಡೆಗೆಂಬಂತೆ ಅಂದಳು – "ಹೂಂ. ಕೇಳ್ಸಕಾ ಸಮಾ. ಇನ್ನು ಘೋನ್‌ಗಿನ್ ಮಾಡಾಕ ಹೋಗ್ಬೇಡ, ಬ್ಯಾಡಾ ಬಿಡು. ನಾ ಯೇನ್ ನಿನ್ನ ಹೆಸ್ರ ಮ್ಯಾಗ ಪ್ರಾಣ ತಕ್ಕೊಳಾಂಗಿಲ್ಲ. ನಿನ್ನ ದಾರಿ ನಿನಗ. ನನ್ನ ಮತ್ತ ಮತ್ತ ಮಾತಾಡ್ಸಾಕೂ ಹೋಗ್ಬ್ಯಾಡ. ಕೇಳಕಾ ಶಂಕ್ರು. ನಂಗೂ ದಗದ ಐತಿ ಓದೂದು ಹಾಂಗ್ಯ ಬಿದ್ದೇತಿ, ತಿಳೀತಾ. . ." ಅವಳದನ್ನು ಎಷ್ಟು ದಿಟ್ಟವಾಗಿ ಹೇಳಿದ್ದಳೆಂದರೆ– ರೋಷವಿಲ್ಲದೆ, ಭಯವಿಲ್ಲದೇ, ಅಳು ಅದುಮಿಡದೆ ಅದಯಾವದೋ ಅನುಭಾವದ ಎತ್ತರದಲ್ಲಿದ್ದಂತೆ. ಕೇಳಿಸಿಕೊಳ್ಳುತ್ತಿದ್ದ ನಾನೂ ಅವಾಕ್ಕಾಗಿದ್ದೆ. ಅವಳು ಕಣ್ಣೀರು ಹಾಕಲಿಲ್ಲ. ಕಣ್ಣ ಬೆಳಕಿನಲಿ ಹಾದಿ ಹುಡುಕಿದ್ದಳು. ನಿಜ. ಆವತ್ತು ಬಂಗಡೆ ಫ್ರೈಗೆ ಅದೆಂಥ ರುಚಿ. ಅವಳ ಆತ್ಮವಿಶ್ವಾಸದ ಉಸಿರು ತಾಕಿರಬೇಕು.

ಮಾರ್ಕ್ಸ್‌ನ ಬಗ್ಗೆ ತುಂಬು ಪ್ರೀತಿಯಿದ್ದರೂ, ಅಡಿಗೆ ಮನೆಯಲ್ಲಿದ್ದಾಗ ಮಾತ್ರ 'ಮನೆಗೆಲಸವನ್ನು ಆದಷ್ಟು ಬೇಗ ಮುಗಿಸುವ ಕೆಲಸ ಎಂದು ತಿಳಿಯಬೇಕು'– ಅನ್ನೋ ಮಾತನ್ನು ಒಪ್ಪಲು ಮನ್ಸು ಬರದು. ಮನೆಯಿಡೀ ಕೋಳಿ ಕೆದರಿದಂತೆ ಹರವಿರಲಿ ಬೇಕಾದರೆ, ಅಡಿಗೆಮನೆ ಮಾತ್ರ ಯಾವತ್ತೂ ಶುಚಿರ್ಭೂತೆ, ಸದಾವತ್ಸಲೆ. 'ಅಡ್ಗೆ ಅಂದ್ರೆ ಕೊಚ್ಚೋದು ಕುದಿಸೋದು ಅನ್ಕೋಬ್ಯಾಡ್ರೆ' ಅಂತ ತನ್ನ ಹೆಣ್ಣುಬಳಗಕ್ಕೆ ಯಾವತ್ತೂ ಹೇಳುತ್ತಿದ್ದ ಅಜ್ಜಿ ಸಾಯುವಾಗಲೂ 'ಕೋಡುಬಳೆಗೆ ಕಾಯಿಹಾಲು ಮಾಡ್ರೇ' ಅಂತ ಹೇಳುತ್ತಲೇ ಕಣ್ಮುಚ್ಚಿದ್ದಳು. ಅಡಿಗೆಮನೆ ನನ್ನ ಧ್ಯಾನದ ಕೇಂದ್ರ. ಹೊರಗಿನ ಉತಾವಳಿ ಏನೇ ಇರಲಿ, ನನ್ನನ್ನು ನನ್ನ ಜಗತ್ತಿಗೆ ಒಯ್ದು ಸಂಭಾಳಿಸಿ ಎತ್ತಿ ತರುವ ಶಕ್ತಿ ಅದಕ್ಕಿದೆ. ಮನಸ್ಸು ರೋಸಿ ಅಂಚಿನ ಮೊನಚಿಗೆ ಹಾಯ್ದಾಗಲೆಲ್ಲ, 'ಒಲಿಮ್ಯಾಲೆ ಗಂಜಿ ಕುದಿಯೊಡಿಬೇಕಂದ್ರೆ ಒಲಿ ಬಾಯಾಗ ಹಾಕೋ ಕಟಗಿ ಚೂರಿಗೂ ಹದ ಇರ್ಬೇಕೆ' ಎಂದು ಬದುಕಿನ ಹದ ಹಿಡಿಯಲು ಹೇಳುತಿದ್ದ ಅಜ್ಜಿಯ ವೇದಾಂತ ನೆನಪಾಗುತ್ತದೆ. ಕೋಳಿಗೂಡಿನ ಮೇಲೆ ಮಳೆಗಾಲಕ್ಕೆ ಅಂತ ಕಟ್ಟಿಗೆ ಒಟ್ಟುವ ಅಜ್ಜಿಗದು ಗೋಳಗುಮ್ಮಟದ ಗೋಡೆ ಕಟ್ಟುವಂಥ ಶ್ರದ್ಧೆಯ ಕೆಲಸ. ಮೊನ್ನೆ ಕಡಿದಾಳು ಶಾಮಣ್ಣ ಅವರ ಮನೇಲಿ ಶ್ರೀದೇವಕ್ಕ ಮನೆಯಿಟ್ಟ ಚೆಂದ ಕಂಡರೆ . . . ಓಹ್ . . ಮನೆಯೆಂದರದು ಗುಡಿಯೇ. ಹೆಣ್ತನದ ಅದಮ್ಯ ತ್ರಾಣ ಕಣ್ಣೆದುರು ಮರುಕಳಿಸಿತ್ತು.

ವರ್ತಮಾನದ ನನ್ನಂಥವರಿಗೆ ಅಡಿಗೆಮನೆ ಸೆರಗಿನ ತುದಿಹಿಡಿದು ಮಗುವಂತೆ ಜಗ್ಗುತ್ತಿದ್ದರೂ ಬಿಡಿಸಿ ಹೊರ ಬದುಕಿಗೆ ಹಾಜರಾಗುವ ಗರಜು. ನಮ್ಮ ನಗರಗಳ ಮನೆಗಳಂತೂ ಒಂದರ ಬೆನ್ನು ಇನ್ನೊಂದು ಹಿಡಿದು ರೊಪ್ಪದಲ್ಲಿ ಹಂದಿಗಳ ಹಾಗೆ ಬಿದ್ದುಕೊಂಡಿವೆ. ನಂನಮ್ಮ ಕಿಡಕಿಗಳು ನನ್ನ ಒಗ್ಗರಣೆಯನ್ನು ಅವರಿಗೂ, ಅವರ ಕಾವಲಿಯ ಬಿಸುಪನ್ನು ನನಗೂ ದಾಟಿಸುತ್ತ, ಸಹಯಾನದ ಗುಟ್ಟು ಉಸುರುತ್ತವೆ. ಮನೆ ಅಂತ ಬೇರ್ಪಡಿಸೋಕೆ ಹಾಕಿಕೊಂಡಿರುವ ಕಂಪೌಂಡು ಗೋಡೆಗಳು ನೇರಾನೇರ ಸಂಬಂಧವನ್ನು ತಡೆದಿಟ್ಟಿವೆ. ಕಣ್ಣಿಗೆ ರೆಪ್ಪೆಯಿದೆ, ಕಿವಿಗೆಲ್ಲಿದೆ? ಆ ಕಡೆಯ ಮಾತು ಈ ಕಡೆಗೂ, ಈ ಕಡೆಯ ಮಾತು ಆ ಕಡೆಗೂ ಕ್ಷಣಾರ್ಧದಲ್ಲಿ ರವಾನೆಯಾಗುತ್ತ 'ಎಲ್ಲರೂ ಮಾಡುವುದು ಹೊಟ್ಟೆಗಾಗಿ. . .' ಎಂಬ ತತ್ತ್ವ ಎದುರಿಡುತ್ತವೆ. ಈಗೀಗ ನಮ್ಮ ನಗರಗಳಲ್ಲಿ ಮನೆಯೆಂದರೆ, ಮರು ಆದಾಯ ತರಬಲ್ಲ ಆಸ್ತಿ. ಇರುವ ಚೂರು ಪಾರು ಜಾಗೆಯನ್ನೇ ಸರಿಸ್ಯಾಡಿ 'ಖೋಲಿ' ಮಾಡಿ ಬಾಡಿಗೆಗೆ ಕೊಟ್ಟರೇ, ವಿದ್ಯಾಕಾಶಿ ಎನಿಸಿಕೊಂಡಿದ್ದ ಧಾರವಾಡ, ವಿದ್ಯೆಯ ಚೌಕಾಶಿ ಜಾಗೆಯಾದ ಮೇಲಂತೂ ಕಲಿಯಲು ಬರುವ ಮಕ್ಕಳ ದಂಡು ಲೆಕ್ಕಮೀರಿದ್ದು. ಯು.ಜಿ., ಪಿ.ಜಿ. ಕಲಿಕೆಗಳ ಕೇಂದ್ರಗಳಷ್ಟೇ ಅಲ್ಲ; ಲೋಕದಲ್ಲಿರುವ ಸಕಲೆಂಟು ಕೋರ್ಸಗಳಿಗೂ, ಪರೀಕ್ಷೆಗಳಿಗೂ ಇಲ್ಲಿ ತರಬೇತಿ ಸಂಸ್ಥೆಗಳಿವೆ. ನಾಡಿನ ಮೂಲೆ ಮೂಲೆಗಳಿಂದ ಕನಸು ಹೊತ್ತು ಕಲಿಯಲು ಮಕ್ಕಳ ದಂಡು ಬರುತ್ತಲೇ ಇರುತ್ತದೆ. ಬಿಜಾಪುರ, ಗುಲ್ಬರ್ಗಾ, ಸಿಂಧನೂರು, ರಾಯಚೂರು, ಬಳ್ಳಾರಿ, ಕಾರವಾರಗಳ ತರಹೇವಾರಿ ಕನ್ನಡದ ತನಿಗಂಪು ಕಲಿಸಿ ಧಾರವಾಡಕ್ಕೇ ಒಂದು ಮುದ



ಬಂದಂತೆ, ಬರುವವರಿಗೂ ಹೋಗುವವರಿಗೂ ಇದು ದ್ವಾರವಾಡವೇ. ಹೀಗೆ ಬರುವವರ ಆಶ್ರಯ ತಾಣಗಳು ಮನೆ ಮನೆಗಳಲ್ಲಿ ರೆಕ್ಕೆ ಹರಡಿ ನಿಂತಿರುವ ಬಾಡಿಗೆ ಕೋಣೆಗಳೇ.

ನನ್ನ ಅಡಿಗೆ ಕೋಣೆಯ ಆಚೆಗೇ ಹೀಗೊಂದು ಖೋಲಿಯಿದೆ. ಅಲ್ಲಿ ಹುಡಿಗಿಯರು ಉಳಿದಿರುತ್ತಾರೆ. ಅವರು ವರ್ಷವೋ, ಆರು ತಿಂಗಳೋ, ಮೂರು ತಿಂಗಳೋ ಉಳಿದು ತಮ್ಮ ಕೆಲಸ ಕಬ್ಜ ಮುಗಿಸಿ ಹೊರಡುತ್ತಿರುತ್ತಾರೆ. ಮತ್ತೆ ಇನ್ನಾರೋ ಬರುತ್ತಾರೆ. ನನ್ನ ಅವರ ಸಂಬಂಧಕ್ಕೆ ಕಂಪೌಂಡು ಗೋಡೆ ಅಡ್ಡಲಾಗಿದೆ. ಆದರೆ ಕಿವಿಯ ಬಲ, ಜೀವ ಜೀವಾಳದ ಸಂಬಂಧ ಬೆಸೆವ, ನೆಲದಾಳದ ಬಿಸುಪಿನಂತಿರುತ್ತದೆ. ಅವರು ತಮ್ಮ ಕೋಣೆಯಿಂದ ಹೊರಬಂದು ಕಂಪೌಂಡು ಗೋಡೆಗೆ ಆತುಕೊಂಡು ಮೊಬೈಲಿನಲ್ಲಿ ಪಿಸುಪಿಸು ನುಡಿಯುವಾಗ, ಬೇಕಿಲ್ಲದೆಯೂ ಕಿವಿದುಂಬುವ ಆ ಹರೆಯದ ಹುಡಿಗಿಯರ ಲೋಕ ನನ್ನನ್ನು ದಶಕ ದಶಕಗಳ ಹಿಂದಕ್ಕೂ ಮುಂದಕ್ಕೂ ಜೀಕು ಹೊಡೆಸುತ್ತಿರುತ್ತದೆ.

ಈಗ ಬಂದಿರುವ ಹುಡುಗಿಯರೂ ಹೀಗೆ ಮನಸ್ಸಿಗೆ ಹತ್ತಿರವಾಗಿ ಬಿಟ್ಟಿದ್ದಾರೆ. ಅವರಿಗೂ ನನ್ನ ಅಡಿಗೆಮನೆಯಿಂದ ದಾಟುವ ಪರಿಮಳದ ಕಂಪು ಕರೆಯುತ್ತದೆಯೋ ಏನೋ, ಮತ್ತೆ ಮತ್ತೆ ಕಿಡಕಿಗೆ ಬಾಚಿಕೊಂಡಂತೆ, ನನ್ನೊಂದಿಗೇ ತಮ್ಮ ಗುಟ್ಟುಗಳನ್ನು ಹೇಳಿಕೊಳ್ಳುವಂತಿರುತ್ತಾರೆ. ಅವರ ಮಾತಿನ ಧಾಟಿ ನೋಡಿದರೆ ಬಳ್ಳಾರಿ ಕಡೆಯವರು ಅನ್ನಿಸುತ್ತದೆ. ಊರಿಂದ ಕಟ್ಟಿ ತಂದ ರೊಟ್ಟಿ–ಚಟ್ನಿಯ ಗಂಟು ಕರಗುವವರೆಗೂ ಅಡಿಗೆ ಉಸಾಬರಿಗೆ ಹೋಗದ ಜಾಣೆಯರು. 'ಏ, ಅನು ಚಾದಕೂಟಾಗ ರೊಟ್ಟಿ ಕಲ್ಸಕಂಡ ತಿನ್ನಾಕತ್ತಿಯಲ್ಲೆ ನಿನ್ನ. . .' ಅಂತ ನಗೆಯ ಅಲೆ ಉಕ್ಕಿದರೆ ಇಲ್ಲಿ ನನಗೂ ನಗು. 'ಹಾಂಗ್ಯಾಕ ಕುಂತೀ. . . ಕಂಪೌಂಡ ಹತ್ತಿ? ಬಿದ್ದರ ?' ರಸ್ತೆಗೆ ಮರೆಯಾಗಿರುವ ಕಂಪೌಂಡು ಹತ್ತಿ ಓದಲು ಕೂತವಳ ಉತ್ತರ, 'ಎಷ್ಟ ಓದಬೇಕಂದ್ರೂ ತೂಕಡಿಕಿ ನಿಂದರವಲ್ದು. ಇಲ್ಲಿ ಕೂತ್ರ ಅದ ಹ್ಯಾಂಗ ತೂಕಡಿಕಿ ಬರ್‍ತದ ಅಂಬೂದ. . .' 'ಊರಿಗಿ. . . ಬ್ಯಾಡ ಬಿಡೆ, ಬಸ್‌ಚಾರ್ಜ್ ಏನ್ ಕಮ್ಮಿ ಐತಾ. . . ಇಲ್ಲೇ ಓದ್ಕಂಬಿಡಾಮು" –ಹೀಗೆ ತುಂಡು ತುಂಡು ಮಾತುಗಳು ಕೌದಿ ಹೊಲಿದಂತೆ ಅವರ ಮತ್ತು ಅವರಂಥ ಹೆಣ್ಣುಮಕ್ಕಳ ಹೋರಾಟದ ಕಥನವನ್ನು ಅರುಹುತ್ತಿದ್ದವು. ಎರಡು ಯೂನಿಫಾರಂ ಬಿಟ್ಟರೆ, ಹೊರಗೆ ಹಾಕಲು ಅಂತ ಇದ್ದ ಇನ್ನೊಂದೇ ಒಂದು ಡ್ರೆಸ್ಸು. . ಆದರೂ ಕೊರತೆ ಅನ್ನಿಸದೆ ಕಳೆದ ಹೈಸ್ಕೂಲು ದಿನಗಳು ನೆನಪಾಗುತ್ತಿದ್ದವು. ಇಂದಿಗೂ ಬಟ್ಟೆಯಂಗಡಿಗೆ ಹೋದರೆ ಯಾರೋ ಕತ್ತು ಹಿಡಿದು ಹೊರಗೆ ತಳ್ಳಿದಂತಾಗುತ್ತಿರುವುದು ಅದಕ್ಕೇ ಏನೋ. ಈ ಅಪರಿಚಿತ ಮಕ್ಕಳು ನನ್ನೆದುರು ನನ್ನನ್ನೇ ಅನಾಮತ್ತಾಗಿ ನಿಲ್ಲಿಸುವ ಪರಿಗೆ ಬೆರಗೋ ಬೆರಗು.

ಮೊನ್ನೆ, ಹನಿವ ಮಳೆಯಲ್ಲಿ ಧಾರವಾಡದಲ್ಲಿ ಮೀನು ಮಾರ್ಕೆಟ್ಟಿಗೆ ಹಸಿಹಸಿ ಬಂಗಡೆ ಬಂದು ಕೂತಿದೆ ಅಂದರೆ ಸಾಮಾನ್ಯದ ಸಂಗತಿಯಾಗಿರಲಿಲ್ಲ. ಮೀನು ಸಿಕ್ಕ ದಿನ ನನ್ನ ಅಡಿಗೆಮನೆ ಅಮ್ಮನನ್ನೂ ಅಜ್ಜಿಯನ್ನೂ ಅನಾಮತ್ತಾಗಿ ತಂದು ತನ್ನೊಳಗಿಟ್ಟುಕೊಂಡು ಬಿಡುತ್ತದೆ. ವಾಟೆಹುಳಿ, ಜುಮ್ಮನಕಾಯಿಗಳ ಡಬ್ಬಗಳು ಮೂಲೆಯಿಂದೆದ್ದು ಬರುತ್ತವೆ. ನೋಡುತ್ತೇನೆ, ಮುಳ್ಳು ತೆಗೆದು ಫ್ರೈ ಮಾಡಬಹುದಾದಷ್ಟು ತಾಜಾ ಮೀನು. ಬಿಡುತ್ತೇನೆಯೇ? ಅನ್ನ, ಮೀನಗಸಿ ಎಲ್ಲ ಮುಗಿದು ಚಕಚಕಾಂತ ಬಂಗಡೆ ಸೀಳಿ ಮುಳ್ಳು ತೆಗೆದು ಹಿಡಿದರೆ ಎಡಗೈ ಹಸ್ತ ತುಂಬಿತ್ತು. ಒಂದೊಂದಕ್ಕೆ ಮಸಾಲ ಸವರಿ ಇನ್ನೇನು ಉಳಿದದ್ದು ಫ್ರೈ ತಯಾರಿ ಒಂದೇ. ಅಷ್ಟೊತ್ತಿಗೆ ಕಂಪೌಂಡಿನ ಆಚೆಯಿಂದ ಮಾತು. ಓ. ಹುಡುಗಿ ಮೊಬೈಲ್‌ನಲ್ಲಿ ಮಾತಾಡುತ್ತಿದ್ದಳು. ಕತ್ತಲನ್ನು ಕರಗಿಸುವ ಉಮೇದಿಯಲ್ಲಿ. ಓಹ್, ಇಷ್ಟು ಮಧುರವಾಗಿ ಸವಿಯಾಗಿ ಆಡಬಹುದಾದ ಮಾತುಗಳು 'ಅವನೊಂದಿಗೆ' ಮಾತ್ರ. ನನ್ನ ಪಳಗಿದ ಮನಸ್ಸು ಶರಾ ಬರೀತಿತ್ತು. ಇನ್ನೊಬ್ಬರ ಮಾತನ್ನು ಕೇಳಿಸಿಕೊಳ್ಳಬಾರದು, ನಿಜ. ಆದರೆ ನಾನೆಲ್ಲಿಗೆ ಹೋಗಲಿ? ನನ್ನ ಒಲೆಮೇಲಿನ ತವೆ ಬೆಂಕಿ ಸಣ್ಣಗಿಡು, ಚೂರು ಎಣ್ಣೆ ಹನಿಸು ಅಂತ ಆದೇಶಿಸುತ್ತದೆ. ನಾನೇನು ಬೇಕೂಂತ ಕೇಳಿಸಿಕೊಳ್ಳುತ್ತಿಲ್ಲವಲ್ಲ – ಎಂಬ ಮೊಂಡುತನ. ತವೆ ಮೇಲಿನ ಫ್ರೈ ಹರಡಿದ ಗಮಲಿಗೂ ಅವಳು ಜಾಗ ಬದಲಿಸುತ್ತಿಲ್ಲ. ಬಹುಶಃ ಮೀನು ತಿನ್ನುವವಳೇ ಇದ್ದಾಳು. ಕೇಳುವುದು ಹೇಗೆ? ಕಾಣುತ್ತಿಲ್ಲ ಅವಳು.

ಸ್ವಲ್ಪ ಹೊತ್ತಿಗೆ, ಅವಳ ದನಿಯಲ್ಲಿ ಎಂಥದೋ ಬಿರುಸು, ಗಂಟಲು ಒದ್ದೆಯಾದಂತೆ, "ನೀ ಮನ್ಯಾಗ ಹೇಳು, ಒಪ್ಸು. ನಿಮ್ಮವ್ವನ ತಾವ ಹೇಳಾಕ ಆಗವಲ್ಲದು ಅಂದ್ರ ನಿಮ್ಮಕ್ಕನ ಕೂಟಾಗ ಹೇಳು. ಆಕಿಗ ನನ ಕಂಡ್ರ ಭಾಳ ಜೀವಾ. . ." ಆ ಕಡೆಯ ಮಾತು ಅದೇನಿತ್ತೋ? ಅವನು ಮದುವೆಗೆ ಸಿದ್ಧನಿಲ್ಲವೇನೋ, ಕಡೆಗೆ, ಕಟ್ಟ ಕಡೆಗೆಂಬಂತೆ ಅಂದಳು – "ಹೂಂ. ಕೇಳ್ಸಕಾ ಸಮಾ. ಇನ್ನು ಘೋನ್‌ಗಿನ್ ಮಾಡಾಕ ಹೋಗ್ಬೇಡ, ಬ್ಯಾಡಾ ಬಿಡು. ನಾ ಯೇನ್ ನಿನ್ನ ಹೆಸ್ರ ಮ್ಯಾಗ ಪ್ರಾಣ ತಕ್ಕೊಳಾಂಗಿಲ್ಲ. ನಿನ್ನ ದಾರಿ ನಿನಗ. ನನ್ನ ಮತ್ತ ಮತ್ತ ಮಾತಾಡ್ಸಾಕೂ ಹೋಗ್ಬ್ಯಾಡ. ಕೇಳಕಾ ಶಂಕ್ರು. ನಂಗೂ ದಗದ ಐತಿ ಓದೂದು ಹಾಂಗ್ಯ ಬಿದ್ದೇತಿ, ತಿಳೀತಾ. . ." ಅವಳದನ್ನು ಎಷ್ಟು ದಿಟ್ಟವಾಗಿ ಹೇಳಿದ್ದಳೆಂದರೆ– ರೋಷವಿಲ್ಲದೆ, ಭಯವಿಲ್ಲದೇ, ಅಳು ಅದುಮಿಡದೆ ಅದಯಾವದೋ ಅನುಭಾವದ ಎತ್ತರದಲ್ಲಿದ್ದಂತೆ. ಕೇಳಿಸಿಕೊಳ್ಳುತ್ತಿದ್ದ ನಾನೂ ಅವಾಕ್ಕಾಗಿದ್ದೆ. ಗಡಿಬಿಡಿಯಲ್ಲಿ ತವೆಗೆ ಕೈ ತಾಕಿ ಚಂದದ ಬರೆಯೂ ಮೂಡಿತ್ತು. ಅವಳೀಗ ಅಲ್ಲಲ್ಲ ಅವಳ ದನಿಯಿಲ್ಲ. ವಿಚಿತ್ರ ಶಾಂತಿ ಕವಿದಂತೆ. ಅಯಾಚಿತವಾಗಿ ಪ್ರತಿಭಾ ನಂದಕುಮಾರ್ ಕವಿತೆಯ ಸಾಲು ನೆನಪಾಗತೊಡಗಿತ್ತು.

ಇವಳನ್ನು ನೋಡಿ
ಇವಳೇ ಜಗದಚ್ಚರಿ
ಸುಡುವೆನೆಂದಿರಿ ಸುಡಲಿಲ್ಲ
ಮುಳುಗೆಂದಿರಿ ಮುಳುಗಲಿಲ್ಲ
ಕಳೆದುಹೋಗಲು ಕಾಡಿಗಟ್ಟಿದಿರಿ
ಬದಲಿಗೆ ಕಂಡುಕೊಂಡಳು
ಮರೆತುಬಿಟ್ಟಿರಿ ನೀವು ಮರೆಯಲಿಲ್ಲ ಅವಳು
ತಾಕಲಿಲ್ಲ ಎದೆಗೆ ನಿಮ್ಮ
ಕುಹಕ ತಾತ್ಸಾರದ ಬಾಣ
ಕೆತ್ತಿದಷ್ಟೂ ಮೂಡಿ ಕತ್ತರಿಸಿದಷ್ಟು ಚಿಗುರಿ ...

ಅವಳು ಕಣ್ಣೀರು ಹಾಕಲಿಲ್ಲ. ಕಣ್ಣ ಬೆಳಕಿನಲಿ ಹಾದಿ ಹುಡುಕಿದ್ದಳು. ನಿಜ. ಆವತ್ತು ಬಂಗಡೆ ಫ್ರೈಗೆ ಅದೆಂಥ ರುಚಿ. ಅವಳ ಆತ್ಮವಿಶ್ವಾಸದ ಉಸಿರು ತಾಕಿರಬೇಕು. ●



ಬಿಜೆಪಿಯನ್ನು ಸೋಲಿಸುವತ್ತ ಹೆಚ್ಚುತ್ತಿರುವ ದುಡಿಯುವ ಜನರ ಒಗ್ಗಟ್ಟು

'ಅಯೋಧ್ಯೆಯಲ್ಲ, ಸಾಲ ಮನ್ನಾ" ಎಂಬ ಘೋಷಣೆ ನವಂಬರ್ 29-30 ರಂದು ದಿಲ್ಲಿಯಲ್ಲಿ ಕಿಸಾನ್ ಮುಕ್ತಿ ಮಾರ್ಚ್‌ನಲ್ಲಿ ಅನುರಣಿಸಿತು.

ಇದೀಗ ರೈತರ ಹೋರಾಟದ ನಂತರ, ದೇಶದ ಕಾರ್ಮಿಕ ವರ್ಗ ಜನವರಿ 8 ಮತ್ತು 9 ರಂದು ಎರಡು ದಿನಗಳ ಸಾರ್ವತ್ರಿಕ ಮುಷ್ಕರಕ್ಕೆ ಅಣಿಯಾಗುತ್ತಿದೆ. ಹೋರಾಟಗಳ ಈ ಎಲ್ಲಾ ತೊರೆಗಳು ಒಂದು ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯಕ್ಕಾಗಿ ಒತ್ತಾಯಿಸುತ್ತಿವೆ.

ಅದು ಮಾತ್ರವೇ ಬಿಜೆಪಿ-ಆರ್‌ಎಸ್‌ಎಸ್ ಆಟಾಟೋಪವನ್ನು ಎದುರಿಸಬಲ್ಲದು ಹಾಗೂ ಪರಿಣಾಮಕಾರಿಯಾಗಿ ವಿಫಲಗೊಳಿಸಬಲ್ಲದು.



*** ಪ್ರಕಾಶ್ ಕಾರಟ್**

ನವೆಂಬರ್ 29 ಮತ್ತು 30 ರಂದು ದೆಹಲಿಯಲ್ಲಿ ನಡೆದ ಕಿಸಾನ್ ಮುಕ್ತಿ ಮಾರ್ಚ್, ಮೋದಿ ಸರಕಾರದ ನವ ಉದಾರವಾದಿ ನೀತಿಗಳಿಂದಾಗಿ ನೆಲ ಕಚ್ಚುತ್ತಿರುವ, ದೇಶದೆಲ್ಲೆಡೆಯಿಂದ ಆಗಮಿಸಿದ ರೈತರ ಒಂದು ಅಭೂತಪೂರ್ವ ಪರಿಣಾಮಕಾರಿ ಪ್ರತಿಭಟನೆಯಾಗಿತ್ತು.

ಕಾರ್ಮಿಕರು, ರೈತರು ಮತ್ತು ಕೃಷಿ ಕೂಲಿಗಾರರ ವರ್ಗ ಬೇಡಿಕೆಗಳ ಮೇಲೆ ಬೆಳಕು ಚೆಲ್ಲಿದ ಸೆಪ್ಟೆಂಬರ್ ಐದರಂದು ನಡೆದ ಕಾರ್ಮಿಕ-ರೈತರ ರ್‍ಯಾಲಿಯ ನಂತರ ನಡೆದ, ವಿವಿಧ ರೈತ ಸಂಘಟನೆಗಳು ಆಯೋಜಿಸಿದ್ದ ಈ ನಡೆ ದುಡಿಯುವ ಜನರ ಬೆಳೆಯುತ್ತಿರುವ ಒಗ್ಗಟ್ಟು ಹಾಗೂ ತಮ್ಮ ಮೂಲಭೂತ ಹಕ್ಕುಗಳಿಗಾಗಿ ಹೋರಾಡುವ ಸರ್ವಸಾಮಾನ್ಯ ಉದ್ದೇಶದತ್ತ ಗಮನ ಸೆಳೆಯಿತು.

ಈ ಎರಡು ರ್‍ಯಾಲಿಗಳಲ್ಲಿ ದುಡಿಯುವ ಜನರನ್ನು ಅಣಿನೆರೆಯಿಸಿದ್ದು ಮತ್ತು ದೇಶದಾದ್ಯಂತ ನಡೆದ ಅನೇಕಾನೇಕ ಹೋರಾಟಗಳು ಮತ್ತು ಚಳವಳಿಗಳು ಅಯೋಧ್ಯೆಯಲ್ಲಿ ರಾಮ ಮಂದಿರ ವಿಚಾರದ ಸುತ್ತ ಕೋಮುವಾದದ ಆಧಾರದಲ್ಲಿ ಜನರನ್ನು ಸೇರಿಸಲಾಗುತ್ತಿರುವುದಕ್ಕೆ ತೀರಾ ವ್ಯತಿರಿಕ್ತವಾದವುಗಳಾಗಿವೆ.

ಲೋಕಸಭೆ ಚುನಾವಣೆ ಸಮೀಪಿಸುತ್ತಿರುವಂತೆ, ಅಯೋಧ್ಯೆಯ ವಿವಾದಿತ ಸ್ಥಳದಲ್ಲಿ ರಾಮ ಮಂದಿರ ನಿರ್ಮಿಸಬೇಕೆಂಬ ಬೇಡಿಕೆಗೆ ಆರ್‌ಎಸ್‌ಎಸ್-ಬಿಜೆಪಿ ಕೂಟ ಮತ್ತೆ ಜೀವ ನೀಡಿದೆ. ಸುಪ್ರೀಂ ಕೋರ್ಟ್‌ನ ನಿರ್ದೇಶನವನ್ನು ಉಲ್ಲಂಘಿಸಿ, ಮಂದಿರ ನಿರ್ಮಾಣಕ್ಕೆ ಅನುವಾಗುವಂತೆ ಸುಗ್ರೀವಾಜ್ಞೆ ಹೊರಡಿಸಬೇಕೆಂದು ಆರ್‌ಎಸ್‌ಎಸ್ ಮತ್ತು ಹಿಂದುತ್ವವಾದಿ ಸಂಘಟನೆಗಳು ಒತ್ತಾಯಿಸುತ್ತಿವೆ.

ಛತ್ತಿಸ್‌ಗಢ, ಮಧ್ಯ ಪ್ರದೇಶ ಮತ್ತು ರಾಜಸ್ತಾನಗಳ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ಪ್ರಚಾರ ಒಂದು ರೀತಿಯಲ್ಲಿ ಹಿಂದುತ್ವ ವೇದಿಕೆಗಳ ಒಂದು ಪೇಲವ ಪಡಿಯಚ್ಚಿನಂತೆ ಇತ್ತು. ಕಾಂಗ್ರೆಸ್ ಪಕ್ಷವು ಬಿಜೆಪಿಗಿಂತ ಹೆಚ್ಚು ನೈಜ ಹಿಂದೂ ಎಂಬುದನ್ನು ಸಾಬೀತು ಪಡಿಸಲು ಪ್ರಯತ್ನಗಳನ್ನು ನಡೆಸಲಾಯಿತು. ಮೆದು ಹಿಂದುತ್ವ ತಂತ್ರಗಳ ಮೂಲಕ ಬಿಜೆಪಿಯನ್ನು ಸೋಲಿಸಬಹುದು ಎಂದು ಕಾಂಗ್ರೆಸ್ ಭಾವಿಸಿದ್ದರೆ ಅದು ತಪ್ಪು. ಬಿಜೆಪಿ ಈ ಮೂರೂ ರಾಜ್ಯಗಳಲ್ಲಿ ಚುನಾವಣೆ ಹಿನ್ನಡೆ ಅನುಭವಿಸಲಿದೆ. ಯಾಕೆಂದರೆ ರಾಮ ಮಂದಿರ ಜಪ ದುರಾಡಳಿತದ ವಿರುದ್ಧ ಜನರ ಆಕ್ರೋಶದಿಂದ ಬಿಜೆಪಿಯನ್ನು ಬಚಾವು ಮಾಡದು

ಕಿಸಾನ್ ಮಾರ್ಚ್ ನಡೆಯುವ ಕೇವಲ ಐದು ದಿನಗಳ ಮೊದಲು, ಸುಗ್ರೀವಾಜ್ಞೆ ಬೇಡಿಕೆಗೆ ಬೆಂಬಲ ಕ್ರೋಢೀಕರಿಸಲೆಂದು ಅಯೋಧ್ಯೆಯಲ್ಲಿ ಒಂದು 'ಧರ್ಮ ಸಭೆ' ನಡೆಯಿತು. ನಾಗಪುರ ಮತ್ತು ಬೆಂಗಳೂರುಗಳಲ್ಲಿ ಕೂಡ ಅಂಥದ್ದೇ ಸಭೆಗಳು ನಡೆದವು. ಆದರೆ ಅಯೋಧ್ಯೆಯ ಸಮಾವೇಶಕ್ಕೆ ಸಂಘಟಕರು ನಿರೀಕ್ಷಿಸಿದಷ್ಟು ಜನರು ಸೇರಲಿಲ್ಲ. ಆರ್‌ಎಸ್‌ಎಸ್ ಪ್ರಾಯೋಜಿತ ಸಾಧುಗಳ ವೇದಿಕೆ ಡಿಸೆಂಬರ್ ಒಂಬತ್ತರಂದು ದೆಹಲಿಯಲ್ಲಿ ಒಂದು ರ್‍ಯಾಲಿ ನಡೆಸಲಿದೆ. ಸಂಸತ್ ಅಧಿವೇಶನದ ಸಂದರ್ಭದಲ್ಲಿ ಮೋದಿ ಸರಕಾರದ ಮೇಲೆ ಒತ್ತಡ ಹೇರುವುದು ಅದರ ಉದ್ದೇಶವಾಗಿದೆ.

ಐದು ರಾಜ್ಯಗಳ ವಿಧಾನ ಸಭೆ ಚುನಾವಣೆಗಳ ಹಿನ್ನೆಲೆಯಲ್ಲಿಯೂ ಮಂದಿರ ನಿರ್ಮಾಣ ವಿಚಾರವನ್ನು ಕೆದಕಲಾಗಿದೆ. ಛತ್ತಿಸ್‌ಗಢ, ಮಧ್ಯ ಪ್ರದೇಶ ಮತ್ತು ರಾಜಸ್ತಾನಗಳಲ್ಲಿ ಬಿಜೆಪಿ ಅಧಿಕಾರಸ್ಥ-ವಿರೋಧಿ ಅಲೆಯನ್ನು ಎದುರಿಸುತ್ತಿದೆ. ರೈತರ ಬಿಕ್ಕಟ್ಟು ಹಾಗೂ ನಿರುದ್ಯೋಗ ಸಮಸ್ಯೆ ಈ ಚುನಾವಣೆಗಳಲ್ಲಿ ಜನರ ಗಮನವನ್ನು ಹೆಚ್ಚಾಗಿ ಕಾಡಿದ ಎರಡು ವಿಷಯಗಳಾಗಿವೆ. ಈ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಭ್ರಷ್ಟಾಚಾರ ಹಾಗೂ ದುರಾಡಳಿತ ವಿರುದ್ಧವೂ ಜನರಲ್ಲಿ ಅತೃಪ್ತಿ ಮಡುಗಟ್ಟಿದೆ.

ಇಂಥ ಅತೃಪ್ತಿಯ ಹಿನ್ನೆಲೆಯಲ್ಲಿ ಬಿಜೆಪಿ ಪುನಃ ಕೋಮುವಾದಿ ಮಂತ್ರವನ್ನೇ ಜಪಿಸಬೇಕಾಗಿದೆ. ಅದಕ್ಕೆ ಎದುರಾಗುವ ವಿರೋಧವನ್ನು ದೇಶ-ವಿರೋಧಿ ಎಂದು ಬಿಂಬಿಸುವುದು ಅದರ ಉದ್ದೇಶ. ಸ್ವತಃ ನರೇಂದ್ರ ಮೋದಿ ನೇತೃತ್ವದಲ್ಲಿ ಅಮಿತ್ ಷಾ ಮತ್ತು ಆದಿತ್ಯನಾಥ ಈ ಆಟದಲ್ಲಿ ತೊಡಗಿಸಿಕೊಂಡಿದ್ದಾರೆ. ಬಿಜೆಪಿ ತುಂಬಾ ಸಣ್ಣ ಶಕ್ತಿಯಾಗಿರುವ ತೆಲಂಗಾಣದಲ್ಲಿ ಕೂಡ ಒಂದು ವೇಳೆ ಬಿಜೆಪಿ ಅಧಿಕಾರಕ್ಕೆ ಬಂದರೆ ಅಸಾವುದ್ದಿನ್ ಒವೈಸಿ ಹೈದರಾಬಾದ್‌ನಿಂದ ಕಾಲ್ಕೀಳಬೇಕಾಗುತ್ತದೆ ಎಂದು ಆದಿತ್ಯನಾಥ ಎಚ್ಚರಿಕೆ ನೀಡಿದ್ದಾರೆ. ಉತ್ತರ ಪ್ರದೇಶದಲ್ಲಿ ಊರುಗಳ ಹೆಸರುಗಳನ್ನು ಬದಲಾಯಿಸುವ ತನ್ನ ಕ್ರಮವನ್ನು ಪ್ರಸ್ತಾವಿಸಿದ ಆದಿತ್ಯನಾಥ, ಹೈದರಾಬಾದನ್ನು 'ಭಾಗ್ಯನಗರ' ಎಂಬುದಾಗಿ ಮರುನಾಮಕರಣ ಮಾಡಲಾಗುವುದೆಂದು ಘೋಷಿಸಿದ್ದಾರೆ.

ಮುಸ್ಲಿಂ-ವಿರೋಧಿ ಕೂಗು ಹಾಗೂ ರಾಮ ಮಂದಿರ ಜಪ ಮೂರು ರಾಜ್ಯಗಳಲ್ಲಿ ದುರಾಡಳಿತದ ವಿರುದ್ಧ ಜನರ ಆಕ್ರೋಶದಿಂದ ಬಿಜೆಪಿಯನ್ನು ಬಚಾವು ಮಾಡದು ಅಥವಾ ಅವು ತೆಲಂಗಾಣದಲ್ಲಿ ಹೊಸ ಮತದಾರರನ್ನು ಪಡೆಯಲು ನೆರವು ನೀಡದು.

ಛತ್ತಿಸ್‌ಗಢ, ಮಧ್ಯ ಪ್ರದೇಶ ಮತ್ತು ರಾಜಸ್ತಾನಗಳ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ಪ್ರಚಾರ ಒಂದು ರೀತಿಯಲ್ಲಿ ಹಿಂದುತ್ವ ವೇದಿಕೆಗಳ ಒಂದು ಪೇಲವ ಪಡಿಯಚ್ಚಿನಂತೆ ಇತ್ತು. ಕಾಂಗ್ರೆಸ್ ಪಕ್ಷವು ಬಿಜೆಪಿಗಿಂತ ಹೆಚ್ಚು ನೈಜ ಹಿಂದೂ ಎಂಬುದನ್ನು ಸಾಬೀತು ಪಡಿಸಲು ಪ್ರಯತ್ನಗಳನ್ನು ನಡೆಸಲಾಯಿತು. ಈ ಮೂರೂ ರಾಜ್ಯಗಳಲ್ಲಿ ರಾಹುಲ್ ಗಾಂಧಿ ದೇವಸ್ಥಾನಗಳಿಗೆ ಭೇಟಿ ನೀಡಿದ್ದು, ಪ್ರತಿ ಪಂಚಾಯತ್ ನಲ್ಲಿ ಗೋಶಾಲೆಗಳ ಸ್ಥಾಪನೆ, ಗೋಮೂತ್ರದ ವಾಣಿಜ್ಯಿಕ ಮಾರಾಟ ಹಾಗೂ ರಾಮ ವನ ಗಮನ ಪಥ ಯಾತ್ರೆ ನಿರ್ಮಾಣದ ಬಗ್ಗೆ ಮಧ್ಯ ಪ್ರದೇಶ ಚುನಾವಣೆ ಪ್ರಣಾಳಿಕೆಯಲ್ಲಿ ಭರವಸೆ ನೀಡಿದ್ದು ಇವುಗಳಿಂದ ಕಾಂಗ್ರೆಸ್‌ನ ಈ ಧೋರಣೆ ಸಾಬೀತಾಗುತ್ತದೆ.

ವೈದಿಕ ಮೌಲ್ಯಗಳ ಪ್ರಚಾರಕ್ಕಾಗಿ ಒಂದು ಶಿಕ್ಷಣ ಮಂಡಳಿಯನ್ನು ಸ್ಥಾಪಿಸುವುದಾಗಿ ರಾಜಸ್ತಾನದ ಚುನಾವಣೆ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಆಶ್ವಾಸನೆ ನೀಡಿದೆ. ಪೆಹ್ಲು ಖಾನ್ ಹತ್ಯೆಯಂಥ ಮುಸ್ಲಿಮರನ್ನು ಹೊಡೆದು ಕೊಂದ ಪ್ರಕರಣಗಳ ವಿರುದ್ಧ ಮಾತನಾಡಲು ಕಾಂಗ್ರೆಸ್ ಹಿಂಜರಿದಿರುವುದು ಎದ್ದು ಕಾಣುವ ಅಂಶವಾಗಿದೆ.

ಮೆದು ಹಿಂದುತ್ವ ತಂತ್ರಗಳ ಮೂಲಕ ಬಿಜೆಪಿಯನ್ನು ಸೋಲಿಸಬಹುದು ಎಂದು ಕಾಂಗ್ರೆಸ್ ಭಾವಿಸಿದ್ದರೆ ಅದು ತಪ್ಪು. ಬಿಜೆಪಿ ಈ ಮೂರೂ ರಾಜ್ಯಗಳಲ್ಲಿ ಚುನಾವಣೆ ಹಿನ್ನಡೆ ಅನುಭವಿಸಲಿದೆ. ಯಾಕೆಂದರೆ ಉದ್ಯೋಗ, ರೈತರ ಸಮಸ್ಯೆ ಪರಿಹಾರ, ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ಭ್ರಷ್ಟಾಚಾರ ನಿವಾರಣೆ ಇವೇ ಮೊದಲಾದ ವಿಚಾರಗಳ ಆಧಾರದಲ್ಲಿ ಅಲ್ಲಿನ ಜನರು ಬಿಜೆಪಿಯನ್ನು ಅಧಿಕಾರಕ್ಕೆ ತಂದಿದ್ದವು.

ಜೀವನೋಪಾಯ, ಭೂಮಿ, ರೈತರಿಗೆ ಪರಿಹಾರ, ಕೂಲಿ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಯ ವಿಚಾರಗಳೊಂದಿಗೆ ದುಡಿಯುವ ಜನರನ್ನು ನಿರಂತರವಾಗಿ ಸಂಘಟಿಸಲಾಗುತ್ತಿರುವುದರಿಂದಾಗಿ ಬಿಜೆಪಿ ಮತ್ತು ಮೋದಿ ಸರಕಾರದ ವಿರುದ್ಧದ ಹೋರಾಟ ಮುಂದೆ ಸಾಗುತ್ತಿದೆ.

"ಅಯೋಧ್ಯಾ ನಹೀ, ಕರ್ಜಾ ಮಾಫೀ ಚಾಹಿಯೆ'(ಅಯೋಧ್ಯೆಯಲ್ಲ, ಸಾಲ ಮನ್ನಾ ಬೇಕಾಗಿದೆ) ಎಂಬ ಘೋಷಣೆ ಕಿಸಾನ್ ಮಾರ್ಚ್‌ನಲ್ಲಿ ಅನುರಣಿಸಿತು. ಇದೀಗ ರೈತರ ಹೋರಾಟದ ನಂತರ, ದೇಶದ ಕಾರ್ಮಿಕ ವರ್ಗ 2019ರ ಜನವರಿ 8 ಮತ್ತು 9 ರಂದು ಎರಡು ದಿನಗಳ ಸಾರ್ವತ್ರಿಕ ಮುಷ್ಕರಕ್ಕೆ ಅಣಿಯಾಗುತ್ತಿದೆ. ಹೋರಾಟಗಳ ಈ ಎಲ್ಲಾ ತೊರೆಗಳು ಒಂದು ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯಕ್ಕಾಗಿ ಒತ್ತಾಯಿಸುತ್ತಿವೆ. ಅದು ಮಾತ್ರವೇ ಬಿಜೆಪಿ-ಆರ್‌ಎಸ್‌ಎಸ್ ಆಟಾಟೋಪವನ್ನು ಎದುರಿಸಬಲ್ಲದು ಹಾಗೂ ಪರಿಣಾಮಕಾರಿಯಾಗಿ ವಿಫಲಗೊಳಿಸಬಲ್ಲದು.

ಅನು: ವಿಶ್ವ

ಭಾರತೀಯ ರೈತರ ಪ್ರಣಾಳಿಕೆ

"ರೈತರ ಯೋಗಕ್ಷೇಮವು ಬಹುಪಾಲು ಭಾರತೀಯ ಕುಟುಂಬಗಳ ಆರ್ಥಿಕ ಉಳಿವು ಮಾತ್ರವೇ ಅಲ್ಲ, ಅದು ನಮ್ಮ ರಾಷ್ಟ್ರೀಯ ಘನತೆಯನ್ನು ಮತ್ತು ನಮ್ಮ ನಾಗರಿಕತೆಯ ಪರಂಪರೆಯನ್ನು ಉಳಿಸಿಕೊಳ್ಳುವುದೂ ಆಗಿದೆ, ಎಂದು ನಮಗೆ , ಭಾರತದ ರೈತರಿಗೆ, ಮನದಟ್ಟಾಗಿದೆ; ರೈತರು ನಮ್ಮ ಭೂತಕಾಲದ ಉಳಿಕೆಗಳಲ್ಲ; ರೈತರು, ಕೃಷಿ ಮತ್ತು ಗ್ರಾಮ ಸಮುದಾಯವು ಭಾರತದ ಮತ್ತು ಜಗತ್ತಿನ ಭವಿಷ್ಯದ ಸಮಗ್ರ ಅಂಶಗಳಾಗಿವೆ; ಮತ್ತು ರೈತರ ಆಂದೋಲನಗಳು ಹಕ್ಕೊತ್ತಾಯಗಳು ನಮ್ಮ ಸಂವಿಧಾನಿಕ ಕಣ್ಣೋಟ, ಮೂಲಭೂತ ಹಕ್ಕುಗಳು ಮತ್ತು ಪ್ರಭುತ್ವ ಧೋರಣೆಯ ನಿರ್ದೇಶಕ ಸೂತ್ರಗಳಿಗೆ ಪೂರ್ಣವಾಗಿ ಅನುಗುಣವಾಗಿವೆ.

ಆದ್ದರಿಂದ, ನಾವು, ಸಂಸತ್ತಿನ ವಿಶೇಷ ಅಧಿವೇಶನವನ್ನು, ಕರ್ಷಕ ಬಿಕ್ಕಟ್ಟನ್ನು ಎದುರಿಸಲು ಮತ್ತು ಭಾರತೀಯ ರೈತರು, ರೈತರಿಂದ ಮತ್ತು ರೈತರಿಗಾಗಿ ಇರುವ

1. ರೈತರ, ;ಸಾಲಗ್ರಸ್ತತೆಯಿಂದ ಸ್ವಾತಂತ್ರ್ಯ' ಮಸೂದೆ, 2018 ಮತ್ತು
2. ರೈತರ 'ಕೃಷಿ ಸರಕುಗಳಿಗೆ ಖಾತ್ರಿ ಪ್ರತಿಫಲದಾಯಕ ಕನಿಷ್ಟ ಬೆಂಬಲ ಬೆಲೆಗಳು' ಮಸೂದೆ, 2018

ಈ ಎರಡು ಕಿಸಾನ್ ಮುಕ್ತಿ ಮಸೂದೆಗಳನ್ನು, ಅಂಗೀಕರಿಸಲು ತಕ್ಷಣವೇ ನಡೆಸಬೇಕು ಎಂದು ಕೇಳುತ್ತೇವೆ.

ಮತ್ತು ಭಾರತ ಸರಕಾರ ಈ ಕೆಳಗಿನ ಬೇಡಿಕೆಗಳನ್ನು ಕೂಡ ಈಡೇರಿಸಬೇಕು _.......... _"

ಎನ್ನುತ್ತ ರೈತರ 19 ಬೇಡಿಕೆಗಳನ್ನು ಭಾರತೀಯ ರೈತರ ಈ ಪ್ರಣಾಳಿಕೆಯಲ್ಲಿ ಪಟ್ಟಿ ಮಾಡಲಾಗಿದೆ.






ಡಿಸೆಂಬರ್ 1,2 ರಂದು ಮಂಗಳೂರಿನಲ್ಲಿ ನಡೆದ ಜನನುಡಿ 5ನೇ ಆವೃತ್ತಿ ಹಲವು ಕಾರಣಗಳಿಗೆ ವಿಶಿಷ್ಟವಾಗಿತ್ತು. ನೇರವಾಗಿಯೂ, ಸಾಮಾಜಿಕ ಮಾಧ್ಯಮಗಳ ಮೂಲಕ ಪರೋಕ್ಷವಾಗಿಯೂ ಅತ್ಯಂತ ಹೆಚ್ಚಿನ ಪಾಲುಗೊಳ್ಳುವಿಕೆ, ಕೋಮುವಾದ ಎದುರಿಸುವಲ್ಲಿ ಸಿದ್ಧಾಂತದ ಪಾತ್ರದ ಬಗ್ಗೆ ಚರ್ಚೆ, ಕೋಮುವಾದಿ ಶಕ್ತಿಗಳ ವಿರುದ್ಧ ಪ್ರಚಾರವನ್ನು ಸಂಘ ಪರಿವಾರದ ಅಂಗಳಕ್ಕೆ ತೆಗೆದುಕೊಂಡು ಹೋಗಿದ್ದು, ಬಹುಭಾಷಾ ಕವಿಗೋಷ್ಟಿ – ಇವು ಈ ಬಾರಿಯ ಕೆಲವು ವಿಶಿಷ್ಟತೆಗಳು. ಜನನುಡಿ ಈ ಬಾರಿ ಇನ್ನೊಂದು ದಾಪುಗಾಲ ಹೆಜ್ಜೆಯನಿಟ್ಟು ಫ್ಯಾಸಿಸ್ಟ್–ಮಾದರಿಯ ಕೋಮುವಾದಿ ವಿರೋಧಿ ಶಕ್ತಿಗಳನ್ನು ಒಂದುಗೂಡಿಸಿ ಅಣಿನೆರೆಸುವ, ಅದಕ್ಕಾಗಿ ಗಟ್ಟಿ ಬದಲಿ ರೂಪಿಸುವ ಕಾಯಕದಲ್ಲಿ ದೊಡ್ಡ ಕಾಣಿಕೆ ನೀಡುವ ಭರವಸೆ ಮೂಡಿಸಿದೆ.

‘ಸಂಘಪರಿವಾರ ಎದುರಿಸಲು ಗಟ್ಟಿ ಸಿದ್ಧಾಂತ ಬೇಕು’

ವಸಂತರಾಜ ಎನ್.ಕೆ.

‘ಸಂಘಪರಿವಾರ ಎದುರಿಸಲು ಗಟ್ಟಿ ಸಿದ್ಧಾಂತ ಬೇಕು’ ಎಂಬುದು ಬಹುಶಃ ಈ ಬಾರಿಯ ಜನನುಡಿಯಲ್ಲಿ ಮೂಡಿಬಂದ ಅನಿರೀಕ್ಷಿತ ಗಟ್ಟಿ ದನಿ. ಒಂದು ವರ್ಷದ ಗೈರು ಮತ್ತು ಹಲವು ಅಪಪ್ರಚಾರಗಳ ನಂತರ ಸಂಘಟಿತವಾದ ಜನನುಡಿ 5ನೇ ಆವೃತ್ತಿ ಇನ್ನೂ ಹಲವು ಕಾರಣಗಳಿಗೆ ವಿಶಿಷ್ಟವಾಯಿತು. ಫ್ಯಾಸಿಸ್ಟ್–ಮಾದರಿಯ ಕೋಮುವಾದಿ ವಿರೋಧಿ ಶಕ್ತಿಗಳ ರಾಜ್ಯ ಮಟ್ಟದ ವೇದಿಕೆಯಾಗಿ ಜನನುಡಿ ಇನ್ನಷ್ಟು ಕ್ರೋಢೀಕರಣಗೊಂಡಿದೆ. ಈ ಶಕ್ತಿಗಳ ನಡುವಣ ಭಿನ್ನಾಭಿಪ್ರಾಯಗಳನ್ನು ಸಂವಾದಕ್ಕೆ ಒಳಪಡಿಸಿಕೊಳ್ಳುತ್ತಾ,ಬಹುತ್ವವನ್ನುಕಾಪಾಡಿಕೊಳ್ಳುತ್ತಾ, ಎಲ್ಲರನ್ನೂ ಒಳಗೊಳ್ಳುತ್ತಾ, ಈ ಶಕ್ತಿಗಳನ್ನು ಒಂದುಗೂಡಿಸುವ ಕೆಲಸ ಮುಂದುವರೆಸಿದೆ. ಫ್ಯಾಸಿಸ್ಟ್–ಮಾದರಿಯ ಕೋಮುವಾದಿ ಶಕ್ತಿಗಳನ್ನು ಸೋಲಿಸಲು ಮತ್ತು ಗಟ್ಟಿ ಬದಲಿ ರೂಪಿಸಲು ಗರಿಷ್ಠ ಶಕ್ತಿಗಳನ್ನು ಅಣಿ ನೆರೆಸುತ್ತಿದೆ.





ಜನನುಡಿ 5ನೇ ಆವೃತ್ತಿಗೆ ರಾಜ್ಯದ ಮೂಲೆ ಮೂಲೆಗಳಿಂದ ಹಿಂದೆಂದೂ ಕಾಣದಷ್ಟು ಜನ ಬಂದರು. ಮೊದಲ ದಿನ ಉದ್ಘಾಟನೆ ಆರಂಭವಾಗುವ ಮೊದಲೇ ಮಂಗಳೂರಿನ ನಂತೂರಿನ ‘ಶಾಂತಿಕಿರಣ’ದ ಹಾಲ್ ತುಂಬಿ ತುಳುಕಿದ್ದಲ್ಲದೆ ಬರುತ್ತಲೇ ಇದ್ದ ಹೆಚ್ಚುವರಿ ಜನರಿಗೆ ಕೇಳಲು/ನೋಡಲು ಅನುವಾಗುವಂತೆ ಕೆಳಗೆ ಅಂಗಣದಲ್ಲಿ ಶಾಮಿಯಾನಾ ಹಾಕಿ ದೊಡ್ಡ ಟಿವಿ ವ್ಯವಸ್ಥೆ ಮಾಡಲಾಗಿತ್ತು. ಇನ್ನೂ ವಿಶೇಷ ಮತ್ತು ಸ್ಫೂರ್ತಿದಾಯಕ ಅಂಶವೆಂದರೆ ಸಭಿಕರಲ್ಲಿ ಯುವಜನರ ಸಂಖ್ಯೆ ಮತ್ತು ಪ್ರಮಾಣ ಹಿಂದಿಗಿಂತ ಹೆಚ್ಚಿತ್ತು. ಪ್ರಗತಿಪರ ಸಂಘಟನೆಗಳ ಕಾರ್ಯಕ್ರಮಗಳು ಯುವಜನರನ್ನು ಆಕರ್ಷಿಸುವಲ್ಲಿ ಸತತವಾಗಿ ಸೋಲುತ್ತಿವೆ ಎನ್ನುವ ಸಿನಿಕರ ಟೀಕೆಗಳಿಗೆ ಗಟ್ಟಿ ಉತ್ತರ ಕೊಡುವಂತೆ ಇತ್ತು. ‘ಶಾಂತಿಕಿರಣ’ದಲ್ಲಿರುವ ವಸತಿ ವ್ಯವಸ್ಥೆ ಸಾಕಾಗದೆ ನಗರದ ಇನ್ನೂ 3–4 ಕಡೆ ವಸತಿ ವ್ಯವಸ್ಥೆ ಮಾಡಬೇಕಾಯಿತು. ಒಂದು ಅಂದಾಜಿನ ಪ್ರಕಾರ ಒಟ್ಟು 2.5 ಸಾವಿರ ಜನ ಜನನುಡಿಯಲ್ಲಿ ಭಾಗವಹಿಸಿದ್ದಾರೆ.

ಮಂಗಳೂರಿಗೆ ಬಂದು ನೇರವಾಗಿ ಭಾಗವಹಿಸಿದವರಲ್ಲದೆ ವಿವಿಧ ಕಾರಣಗಳಿಗೆ ಬರಲು ಸಾಧ್ಯವಿಲ್ಲದ ಹತ್ತಾರು ಸಾವಿರಾರು ಜನ ಸಾಮಾಜಿಕ ಮಾಧ್ಯಮಗಳ (ಫೇಸ್ ಬುಕ್, ಯೂ ಟ್ಯೂಬ್ ಇತ್ಯಾದಿ) ಮೂಲಕ ‘ಲೈವ್’ ಮತ್ತು ಆ ಮೇಲೂ ಕೇಳಿದರು, ವೀಕ್ಷಿಸಿದರು. ಜನನುಡಿಗೆ ಮೊದಲು, ನಡೆಯುವ 2 ದಿನಗಳಲ್ಲೂ ಮತ್ತು ಆ ಮೇಲೂ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟರುಗಳು, ವಿಡಿಯೋಗಳ ಮೂಲಕ ಕವರೇಜ್ ಹಿಂದೆಂದಿಗಿಂತಲೂ ಉತ್ತಮ ಗುಣಮಟ್ಟದ್ದೂ, ವ್ಯಾಪಕವೂ, ಪರಿಣಾಮಕಾರಿಯಾಗಿಯೂ ಆಗಿತ್ತು. ಹಲವು ದಿನಗಳವರೆಗೆ ಜನನುಡಿಯಲ್ಲಿ ನಡೆದ ಚರ್ಚೆ ರಾಜ್ಯದ ತುಂಬಾ ಮಾರ್ದನಿಸುತ್ತಿತ್ತು. ಆ ಮೂಲಕ ನೇರವಾಗಿ ಭಾಗವಹಿಸಿದವರ ಹಲವಾರು ಪಟ್ಟು ಜನರನ್ನು ಜನನುಡಿ ಸಾಮಾಜಿಕ ಮಾಧ್ಯಮಗಳ ಮೂಲಕ ಮುಟ್ಟಿದ್ದು ಈ ಬಾರಿಯ ದಾಖಲೆಯಾಗಿತ್ತು.

ಜನನುಡಿ 5ನೇ ಆವೃತ್ತಿಗೆ ಒಂದು ಸಮಗ್ರ ಥೀಮ್ ಎಂಬುದು ಇಲ್ಲವಾದರೂ ಫ್ಯಾಸಿಸ್ಟ್–ಮಾದರಿಯ ಕೋಮುವಾದಿ ಶಕ್ತಿಗಳಿಗೆ ಗಟ್ಟಿ ವ್ಯಾಪಕ ನೆಲೆ ಇರುವ ಬದಲಿ ರೂಪಿಸುವ ದಿಕ್ಕಿನಲ್ಲಿ ಸಿದ್ಧಾಂತದ ಪಾತ್ರದ ಕುರಿತು ಸಂವಾದ ಹಲವು ಗೋಷ್ಟಿಗಳಲ್ಲಿ ಮತ್ತು ಉದ್ಘಾಟನೆ ಸಮಾರೋಪಗಳಲ್ಲೂ ಮೂಡಿಬಂತು. ಈ ಕುರಿತೇ ಇದ್ದ ‘ಭವಿಷ್ಯದ ಭಾರತದಲ್ಲಿ ಮಾರ್ಕ್ಸ್, ಗಾಂಧಿ, ಲೋಹಿಯಾ, ಅಂಬೇಡ್ಕರ್’ ಗೋಷ್ಟಿಯಲ್ಲದೆ, ‘ಮಹಿಳಾ ಭಾರತ’ ಗೋಷ್ಟಿಯಲ್ಲಿ ಡಾ ಎಚ್.ಎಸ್. ಅನುಪಮ ಮತ್ತು ಸಮಾರೋಪದಲ್ಲಿ ದಿನೇಶ್ ಅಮೀನ್ ಮಟ್ಟು, ಪ್ರೊ. ವಲೇರಿಯನ್ ರೊಡ್ರಿಗಸ್ ಅವರುಗಳೂ ಈ ವಿಷಯವನ್ನು ಎತ್ತಿಕೊಂಡರು. ಉದ್ಘಾಟನಾ ಗೋಷ್ಟಿಯಲ್ಲಿ ನ್ಯಾ. ನಾಗಮೋಹನ ದಾಸ್ ಸಂವಿಧಾನ ಪ್ರತಿನಿಧಿಸುವ ಮೌಲ್ಯಗಳ ಮೇಲೆ ಆಧಾರಿತ ಎಲ್ಲರೂ ಒಪ್ಪುವ ಬದಲಿಯನ್ನು ಬಲವಾಗಿ ಪ್ರತಿಪಾದಿಸಿದರು.

ಸಂಘ ಪರಿವಾರದ ನಾಯಕರೂ ಕಾರ್ಯಕರ್ತರೂ ಆಗಿದ್ದು ಭ್ರಮನಿರಸನವಾಗಿ ಬಿಟ್ಟು ಬಂದ ಮೂವರು ಪ್ರಮುಖರ – ಮಹೇಂದ್ರ ಪ್ರಸಾದ್, ಸುಧೀರ್ ಮರೊಳ್ಳಿ ಮತ್ತು ನಿಕೇತ್ ರಾಜ್ ಮೌರ್ಯ – ಅವರುಗಳ ಪೂರ್ವಾಶ್ರಮ’ದ ಜೀವನದ ‘ಹೊರಳು ನೋಟ’ ಈ ಬಾರಿಯ ಅತ್ಯಂತ ಹೆಚ್ಚು ಗಮನ ಸೆಳೆದ ಟಾಪ್ ಗೋಷ್ಟಿಯಾಗಿತ್ತು. ಸಂಘ ಪರಿವಾರದ ಭೀಕರತೆಗಳನ್ನು ತೆರೆದಿಟ್ಟ ಅವರ ‘ಹೊರಳು ನೋಟ’ದ ಮೂಲಕ ಕೋಮುವಾದಿ ಶಕ್ತಿಗಳ ವಿರುದ್ಧ ಪ್ರಚಾರವನ್ನು ಸಂಘ ಪರಿವಾರದ ಅಂಗಳಕ್ಕೆ ತೆಗೆದುಕೊಂಡು ಹೋದಂತಾಗಿದೆ.

ದಟ್ಟವಾಗಿ ಪ್ಯಾಕ್ ಆದ ಗೋಷ್ಟಿ ಮತ್ತು ಕಾರ್ಯಕ್ರಮಗಳ ಮೂಲಕ ಜನನುಡಿಯಲ್ಲಿ ಗೋಷ್ಟಿಯ ನಂತರದ ಸಂವಾದ ಹೆಚ್ಚಾಗಿ ಬಲಿಯಾಗುವುದು ಸಾಮಾನ್ಯ ಮತ್ತು ಸಹಜ. ಆದರೆ ಈ ಬಾರಿ ಮೊದಲ ದಿನದ ಗೋಷ್ಟಿಗಳಲ್ಲಿ ಸಾಕಷ್ಟು ಸಂವಾದ ನಡೆಯಿತು. ಅದರಲ್ಲೂ ‘ಭಾರತೀಯ ಮುಸ್ಲಿಮರು’ ಗೋಷ್ಟಿಯಲ್ಲಿ ಸಂವಾದ ವಿಸ್ತೃತವಾಗಿತ್ತು. ಎರಡನೇ ದಿನದಲ್ಲಿ ಅತ್ಯಂತ ಕುತೂಹಲ ಕೆರಳಿಸಿದ ‘ಹೊರಳು ನೋಟ’ ಗೋಷ್ಟಿ ಸಮಯವನ್ನು ಬಹಳವಾಗಿ ಮೀರಿದ್ದರಿಂದ ಸಂವಾದಕ್ಕೆ ತೊಡಕಾಯಿತು.

ವರ್ಷದಿಂದ ವರ್ಷಕ್ಕೆ ವಿಭಿನ್ನ ಪ್ರಸಿದ್ಧರಲ್ಲದ ಹೊಸ ಯುವ ಕವಿಮನಸುಗಳ ವೇದಿಕೆಯಾಗಿರುವ ಜನನುಡಿಯ ಕವಿಗೋಷ್ಟಿ ವಿಷಯ ವೈವಿಧ್ಯತೆ, ಗಟ್ಟಿ ಅಭಿವ್ಯಕ್ತಿಯ ಕಾವ್ಯಗುಣಗಳಿಂದ ಮಿಂಚಿತು. ಬ್ಯಾರಿ ಭಾಷೆ ಮತ್ತು ಕೊಂಕಣಿ ಕವಿ–ಕವನಗಳನ್ನು ಒಳಗೊಳ್ಳುವ ಮೂಲಕ ಮೊದಲ ಬಾರಿಗೆ ಬಹುಭಾಷಾ ಕವಿಗೋಷ್ಟಿಯಾಯಿತು. ದಕ್ಷಿಣ ಕನ್ನಡಕ್ಕೆ ವಿಶಿಷ್ಟವಾದ ಬ್ಯಾರಿ ಸಮುದಾಯದ ದಪ್ಪು ಕುಣಿತ ಮತ್ತು ಕೊರಗ ಸಮುದಾಯದ ಗಜಮೇಳದ ಸಾಂಸ್ಕೃತಿಕ ಕಾರ್ಯಕ್ರಮಗಳು ಎಂದಿನಂತೆ ಸ್ಥಳೀಯ ಸೊಗಡನ್ನು ಕೊಟ್ಟು, ಜಾನಪದ ಕುಣಿತಕ್ಕೆ ನೆರೆದಿದ್ದ ಯುವಜನ ಹೆಜ್ಜೆ ಹಾಕಿ ಭಾಗವಹಿಸುವಂತೆ ಮಾಡಿತು.

ಜನನುಡಿ ಕಾರ್ಯಕ್ರಮದ ಸಭಾಂಗಣಕ್ಕೆ ಪ್ರವೇಶಿಸಲು ಯತ್ನಿಸಿದ ಹಿಂದೂ ಜಾಗರಣ ವೇದಿಕೆಯ ನಾಲ್ವರು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿದ್ದು ಸಹ ಬಹುಶಃ ಮೊದಲ ಸಲ. ಸಂಶಯಾಸ್ಪದ ರೀತಿಯಲ್ಲಿ ಕಾರ್ಯಕ್ರಮ ಸ್ಥಳಕ್ಕೆ ತೆರಳಲು ಯತ್ನಿಸುತ್ತಿದ್ದ ಆರೋಪಿಗಳು ನಟ ಪ್ರಕಾಶ್ ರೈ ವಿರುದ್ಧ ಪ್ರತಿಭಟಿಸಲು ಸಜ್ಜಾಗಿ ಬಂದಿದ್ದರು ಎನ್ನಲಾಗಿದೆ.

ಒಟ್ಟಂದದಲ್ಲಿ ಹೇಳುವುದಾದರೆ ಜನನುಡಿ 5 ನೇ ಆವೃತ್ತಿಯ ಮೂಲಕ ಇನ್ನೊಂದು ದಾಪುಗಾಲ ಹೆಜ್ಜೆಯನ್ನಿಟ್ಟಿದೆ. ಫ್ಯಾಸಿಸ್ಟ್–ಮಾದರಿಯ ಕೋಮುವಾದಿ ವಿರೋಧಿ ಶಕ್ತಿಗಳನ್ನು ಒಂದುಗೂಡಿಸಿ ಅಣಿನೆರೆಸುವ, ಅದಕ್ಕೆ ಗಟ್ಟಿ ಬದಲಿ ರೂಪಿಸುವ ಕಾಯಕದಲ್ಲಿ ದೊಡ್ಡ ಕಾಣಿಕೆ ನೀಡುವ ಭರವಸೆ ಮೂಡಿಸಿದೆ. ●

ಲಕ್ಷ ಜನರನ್ನು ಮುಟ್ಟಿದ ‘ಜನನುಡಿ’

ಈ ಬಾರಿಯ ಜನನುಡಿ ಕಾರ್ಯಕ್ರಮವನ್ನು ಸಾಮಾಜಿಕ ಮಾಧ್ಯಮಗಳ ಹಲವು ‘ಚಾನೆಲ್’ಗಳ ಮೂಲಕ ‘ಲೈವ್’ ಆಗಿ ತೋರಿಸಲಾಯಿತು. ವಾರ್ತಾಭಾರತಿ, ಜನಶಕ್ತಿ ಮೀಡಿಯಾ, ಮುನೀರ್ ಕಾಟಿಪಳ್ಳ ಫೇಸ್ ಬುಕ್ ಪುಟದ ಮೂಲಕ; ಮಂಗಳೂರಿನ ಸಿಸಿಎನ್ ನ ಕೇಬಲ್ ಚಾನೆಲ್ ಮತ್ತು ಯೂ ಟ್ಯೂಬ್ ಮೂಲಕ ‘ಲೈವ್’ಆಗಿ ತೋರಿಸಲಾಯಿತು. ಜನಶಕ್ತಿ ಮೀಡಿಯಾದ ಫೇಸ್ ಬುಕ್ ಮೂಲಕ ಪ್ರಸಾರವಾದ ‘ಜನನುಡಿ’ ಕಾರ್ಯಕ್ರಮದ ತಲುಪುವಿಕೆಯ (ಫೇಸ್ ಬುಕ್ ಕೊಟ್ಟಿರುವ) ಅಂಕಿ ಅಂಶಗಳು ಲಭ್ಯವಿದ್ದು ಈ ರೀತಿ ಇವೆ:

ಡಿ.1, 2 ರಂದು ಮಾಡಿದ ಎಲ್ಲಾ ಜನನುಡಿ ಪೋಸ್ಟ್ ಗಳ (ಡಿ.6 ರವರೆಗೆ)

ಒಟ್ಟು ಪೋಸ್ಟ್ ರೀಚ್	: 2 ಲಕ್ಷ
ಒಟ್ಟು ಪ್ರತಿಕ್ರಿಯೆಗಳು (ಲೈಕ್, ಕಮೆಂಟ್, ಶೇರ್)	: 5 ಸಾವಿರ
ಜನನುಡಿಯ ಎಲ್ಲಾ ವಿಡಿಯೊಗಳ ನೋಟ (ವ್ಯೂಸ್)	: 62 ಸಾವಿರ (ಡಿ.6 ರವರೆಗೆ)

ಇದು ಜನಶಕ್ತಿ ಮೀಡಿಯಾದ ಫೇಸ್ ಬುಕ್ ಪುಟದ ಮೂಲಕ ಕಾರ್ಯಕ್ರಮದ ತಲುಪುವಿಕೆಯ ಅಂಕಿ ಅಂಶಗಳು ಮಾತ್ರ ಎಂದು ಗಮನಿಸಬೇಕು. ಉಳಿದೆಲ್ಲ ಚಾನೆಲ್ ಗಳ ಮೂಲಕ ಒಟ್ಟು ತಲುಪುವಿಕೆ ಮೇಲಿನ ಅಂಕಿ ಅಂಶಗಳ 5 ರಿಂದ 10 ಪಟ್ಟು ಇರಬಹುದು.

ಈ ಬಾರಿಯ ಜನನುಡಿ ಕಾರ್ಯಕ್ರಮ ಸಾಮಾಜಿಕ ಮಾಧ್ಯಮಗಳ ಮೂಲಕ ಕನಿಷ್ಟ 1 ಲಕ್ಷ ಜನರನ್ನು ಮೀರಿ ತಲುಪಿದೆ ಎಂಬುದು ನಿರ್ವಿವಾದಿತ.

ಬಂಗುಡೆಯ ‘ಆಹಾರದ ರಾಜಕೀಯ’

“ಜನನುಡಿಯಲ್ಲಿ ಊಟದ ಮೆನುವಿಲ್ಲಿ ಮೀನು ಇದ್ದದ್ದು ಈಗ ಕೆಲವರಿಗೆ ಒಂದು ಚರ್ಚೆ. ಕೆಲವರಿಗೆ ಅದೊಂದು ಸಂಭ್ರಮವಾದರೆ, ಇನ್ನು ಕೆಲವರಿಗೆ "ಬಹಳ ದುಬಾರಿ ಖರ್ಚು ಮಾಡುತ್ತೀರಿ" ಎಂಬ ಆಕ್ಷೇಪ. ಜನನುಡಿಯಲ್ಲಿ ಮೂರುಹೊತ್ತು ಬಾಯಿ ರುಚಿ ತಣಿಸುವ ಬಂಗುಡೆ ಕರಾವಳಿಯ ಜನಪ್ರಿಯ ಮೀನುಗಳಲ್ಲಿ ಒಂದು. ರುಚಿಗೆ ಖ್ಯಾತವಾದಷ್ಟೆ ದರವೂ ಅಗ್ಗ. ನೇರವಾಗಿ ಮೀನುಗಾರರಿಂದ ಖರೀದಿಸಿದರೆ ಮಧ್ಯಮ ಗಾತ್ರದ ಬಂಗುಡೆ ಹತ್ತು ರೂಪಾಯಿಗೆ ಒಂದರಂತೆ ದೊರಕುತ್ತದೆ. ಈ ಬಾರಿಯ ಜನನುಡಿಯ ಬಂಗುಡೆಯೂ ತಲಾ ಹತ್ತು ರೂಪಾಯಿಗಿಂತ ಕಡಿಮೆಯದ್ದು. ಅದೂ ಸಹ ಸ್ಥಳೀಯ ಸಹೃದಯಿಯಾದ ಸಣ್ಣ ಮಟ್ಟಿಗಿನ ಮೀನು ವ್ಯಾಪಾರದ ಗೆಳೆಯ ಉಚಿತವಾಗಿ ಕೊಟ್ಟಿರುವಂತದ್ದು. ಅಷ್ಟಕ್ಕೂ ಜನನುಡಿಯ ಆಹಾರ ಪಟ್ಟಿಯಲ್ಲಿ ಮೀನು, ಕೋಳಿ ಯಾಕೆ ಅಂತೀರಾ ? ಅದು ನಮ್ಮ ಆಹಾರದ ರಾಜಕೀಯ. ಮೀನು, ಮಾಂಸ ಅಪವಿತ್ರ ಎಂದು ಚಿತ್ರಿಸುವ, ಕಾರ್ಯಕ್ರಮಗಳಲ್ಲಿ ಸಸ್ಯಾಹಾರವನ್ನೇ ಕಡ್ಡಾಯವಾಗಿಸಿ ಶ್ರೇಷ್ಟವಾಗಿಸುವ ಹುನ್ನಾರಕ್ಕೆದುರಾದ ಒಂದು ದಿಟ್ಟ ನಡೆ. ಜನನುಡಿ ಎಂದರೆ ಹೀಗೆ. ಅದು ಜನಾಹಾರದ ಪರವೂ ಕೂಡ.” ಎಂದು ಬಂಗುಡೆಯ ‘ಆಹಾರ ರಾಜಕೀಯ’ ವಿವರಿಸಿದವರು ಸಂಘಟಕರಲ್ಲಿ ಒಬ್ಬರಾದ ಮುನೀರ್ ಕಾಟಿಪಳ್ಳ.

ಉದ್ಘಾಟನಾ ಗೋಷ್ಠಿ

'ಆರ್ಥಿಕ ಮತ್ತು ಸಾಮಾಜಿಕ ಭಯೋತ್ಪಾದನೆಗೆ ಕಡಿವಾಣ ಹಾಕಬೇಕು': ನ್ಯಾ. ದಾಸ್

'ದೇಶದ ಮುಂದೆ ಈಗ ಬಲವಾದ ಸವಾಲುಗಳಿವೆ. ಅವುಗಳನ್ನು ಹಿಮ್ಮೆಟ್ಟಿಸದಿದ್ದರೆ ದೇಶವೇ ನಾಶವಾಗಿ ಹೋಗುತ್ತದೆ. ಯಾರೂ ಉಳಿಯಲು ಸಾಧ್ಯವಿಲ್ಲ' ಎಂದು ಜನನುಡಿ ಸಮಾವೇಶವನ್ನು ಉದ್ಘಾಟಿಸುತ್ತಾ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಹೇಳಿದರು.

'ಭ್ರಷ್ಟಾಚಾರ, ಕೋಮುವಾದ, ಭಯೋತ್ಪಾದನೆ, ಅಪರಾಧೀಕರಣ ದಂತಹ ದೊಡ್ಡ ಸಮಸ್ಯೆಗಳಿವೆ. ಇದಕ್ಕೆ ಸಂವಿಧಾನ ಕಾರಣವಲ್ಲ. ಸಂವಿಧಾನ ವನ್ನು ಅನುಷ್ಠಾನಗೊಳಿಸುವ ಹೊಣೆ ನಿಭಾಯಿಸಿದವರ ವೈಫಲ್ಯಗಳೇ ಕಾರಣ' ಎಂದು ಪ್ರತಿಪಾದಿಸಿದರು.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ನೆರೆಯ ಪಾಕಿಸ್ತಾನಕ್ಕೆ ಶ್ರೀಲಂಕಾಕ್ಕೆ, ಮಯನ್ಮಾರ್ ಗೆ ಸ್ವಾತಂತ್ರ್ಯ ಬಂತು. ಆ ನೆರೆ ರಾಜ್ಯಗಳಲ್ಲಿ ಹತ್ತಾರು ಬಾರಿ ಸಂವಿಧಾನ ಕಿತ್ತು ಹಾಕಿದರು. ಸರ್ವಾಧಿಕಾರ ಮಿಲಿಟರಿ ಆಳಿತ ಬಂದು. ಅಂತರ್ಯುದ್ಧ ನಡೆಯಿತು. ಆದರೆ ಭಾರತದ ಅನೇಕ ಜಾತಿ, ಭಾಷೆ, ಸಂಸ್ಕೃತಿ, ಉಪಸಂಸ್ಕೃತಿಗಳನ್ನು ಇವತ್ತಿಗೂ ಕಟ್ಟಿಹಾಕಿರುವುದು ಭಾರತದ ಸಂವಿಧಾನ, ಎಂದು ಸಂವಿಧಾನದ ಮಹತ್ವವನ್ನು ವಿವರಿಸಿದರು.

ಪ್ರಜಾಪ್ರಭುತ್ವದ ಆಧಾರ ಸ್ತಂಭ ಗಳಂತೆ ಇರುವ ಸಂಸ್ಥೆಗಳನ್ನು ನಾಶ ಮಾಡುವ ಪ್ರಯತ್ನ ಆರಂಭವಾಗಿದೆ. ಭಿನ್ನ ಧ್ವನಿಗಳನ್ನು ಅಡಗಿಸಲು ಅಧಿಕಾರವನ್ನು ದುರ್ಬಳಕೆ ಮಾಡಲಾಗುತ್ತಿದೆ. ಆರ್ಥಿಕ ಮತ್ತು ಸಾಮಾಜಿಕ ಭಯೋತ್ಪಾದನೆಗೆ ಕಡಿವಾಣ ಹಾಕದಿದ್ದರೆ ದೇಶ ಅರಾಜಕತೆಯತ್ತ ಸಾಗುವ ಸಂಭವವಿದೆ. ಆಗ ಇಡೀ ರಾಷ್ಟ್ರ ಮೂಲಭೂತವಾದಿಗಳ ಮತ್ತು ಕೋಮುವಾದಿಗಳ ಕೈಗೆ ಸಿಲುಕುತ್ತದೆ. ಇಂತಹ ಅಪಾಯ ಎದುರಾಗದಂತೆ ಜನರು ಎಚ್ಚರ ವಹಿಸಬೇಕು ಎಂದು ಕರೆ ನೀಡಿದರು.

'ಸಂವಿಧಾನದ ಜಾರಿ ಮತ್ತು ರಕ್ಷಣೆಯ ಹೊಣೆ ಹೊತ್ತಿರುವ ಸಂಸತ್ತಿನಲ್ಲಿ ಅಪರಾಧಿ ಹಿನ್ನೆಲೆಯವರು, ವಂಶಪಾರಂಪರ್ಯ ರಾಜಕೀಯದವರು ಬಂದು ಕುಳಿತಿದ್ದಾರೆ. ಚರ್ಚೆಗಳೇ ಇಲ್ಲದೆ ಮಸೂದೆಗಳಿಗೆ ಒಪ್ಪಿಗೆ ನೀಡಲಾಗುತ್ತಿದೆ. ರೈತರ ಹಿತ ಕಾಯಲು 2006ರಲ್ಲಿ ಸ್ವಾಮಿನಾಥನ್ ಆಯೋಗ ನೀಡಿರುವ ವರದಿಯ ಕುರಿತು ಚರ್ಚೆ ನಡೆಸಲು 12 ವರ್ಷ ಕಳೆದರೂ ಸಮಯ ಸಿಕ್ಕಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಹುಭಾಷಾ ಪ್ರಗತಿಪರ ನಟ ಪ್ರಕಾಶ ರೈ ಎಂದಿನಂತೆ ಚುಟುಕಾಗಿ ಮಾತನಾಡಿ 'ಜನನುಡಿಯಂತಹ ವೇದಿಕೆಗಳು ಯಾಕೆ ಹುಟ್ಟುತ್ತವೆ ಗೊತ್ತೇ.. ಪ್ರಕೃತಿಯನ್ನು ಕಾಪಾಡುವಷ್ಟು ಮನುಷ್ಯ ದೊಡ್ಡವನಲ್ಲ. ಮನುಷ್ಯ ಇಲ್ಲದೇ ಕೂಡ ಪ್ರಕೃತಿ ಇರುತ್ತೆ. ಹಾಗೆಯೇ ಒಂದು ಸಮಾಜ ಈ ರೀತಿಯ ಕಿಡಿಗೇಡಿಗಳಿಂದ ಹಾಳಾಗುತ್ತಾ ನಮ್ಮನ್ನು ಅಳಿಸುತ್ತೆ. ಅಂತಹ ಅಳಿವಿನ ಅಳಿಸುವ ಶಕ್ತಿಗಳು ದೊಡ್ಡದಾಗಾಗ ಪ್ರಕೃತಿಯ ನಮ್ಮಂಥವರನ್ನ ಒಂದು ಮಾಡುತ್ತೆ. ಅಂತಹ ಹುಳುಗಳನ್ನ, ಕಿಡಿಗೇಡಿಗಳನ್ನ ಎದುರಿಸುವಂತಹ, ಅಳಿಸುವಂತಹ ಮತ್ತು ಮನುಷ್ಯತ್ವವನ್ನ ಉಳಿಸುವುದಕ್ಕೆ' ಎಂದರು.

ಹಿರಿಯ ದಲಿತ ಹೋರಾಟಗಾರ ಎಂ. ವಾಸುದೇವ್ ಮಾತನಾಡಿ, 'ಸಮಾಜದ ಕೆಳಸ್ತರದ ಸಮುದಾಯಗಳಿಗೆ ಶಿಕ್ಷಣ ಮತ್ತು ಗೌರವವನ್ನು ನಿರಾಕರಿಸಿದ್ದ ಮನುಸ್ಮೃತಿಯನ್ನು ಸಂವಿಧಾನದೊಳಗೆ ತೂರಿಸುವ ಯತ್ನ ಆರಂಭದಲ್ಲೇ ನಡೆದಿತ್ತು. ಆಗ ಡಾ.ಬಿ.ಆರ್.ಅಂಬೇಡ್ಕರ್ ಅದನ್ನು ನಿರಾಕರಿಸಿ, ದೂರವಿಟ್ಟಿದ್ದರು. ಈಗ ಅದೇ ಶಕ್ತಿಗಳು ಸಂವಿಧಾನವನ್ನು ನಗಣ್ಯ ಮಾಡಲು ಬೇರೆ ಬೇರೆ ಮಾರ್ಗಗಳಲ್ಲಿ ಪ್ರಯತ್ನ ಮಾಡುತ್ತಿವೆ' ಎಂದರು. 'ಬಲಪಂಥೀಯ ಶಕ್ತಿಗಳಿಗೆ ಜನಪರ ಕಾರ್ಯಸೂಚಿಗಳೇ ಇಲ್ಲ. ಶಬರಿಮಲೆ ವಿವಾದವನ್ನು ಚುನಾವಣೆಯವರೆಗೂ ಕಾಯ್ದಿಟ್ಟುಕೊಳ್ಳುವಂತೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾ ಕೇರಳದ ಬಿಜೆಪಿ ಮುಖಂಡರಿಗೆ ಸೂಚನೆ ನೀಡಿರುವುದು ಇದಕ್ಕೆ ಸಾಕ್ಷಿ' ಎಂದರು.

ಲೇಖಕಿ ಡಾ.ಹಸೀನಾ ಖಾದ್ರಿ ಮಾತನಾಡಿ, 'ದೇಶದಲ್ಲಿ ಸರಿ ಮತ್ತು ತಪ್ಪುಗಳ ವಿಚಾರದಲ್ಲಿ ಒಂದು ಬಗೆಯ ಸಾಮೂಹಿಕ ಸನ್ನಿ ಆವರಿಸಿಕೊಂಡಿದೆ. ಶೌಚಾಲಯ ಬಳಕೆ ಕಡ್ಡಾಯ ಮಾಡುವ ಹೊತ್ತಿನಲ್ಲಿ ಎಲ್ಲರಿಗೂ ಹೊಟ್ಟೆ ತುಂಬುವಷ್ಟು ಅನ್ನವನ್ನೂ ಒದಗಿಸಬೇಕು ಎಂಬ ಬೇಡಿಕೆ ಮುಂದಿಡುವವರನ್ನು ಟೀಕಿಸುವ ಕೆಟ್ಟ ಮನಸ್ಥಿತಿ ಹೆಚ್ಚುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಲೇಖಕಿ ಡಾ.ವಿನಯಾ ಒಕ್ಕುಂದ ಮಾತನಾಡಿ, 'ಹಿಂದಿನ ದಿನಗಳಲ್ಲಿ ಭಿನ್ನ ಧ್ವನಿಗಳನ್ನು ಅಡಗಿಸುವ ಬೆದರಿಕೆ ಖಾಸಗಿ ಸಂಘಟನೆಗಳಿಂದ ಬರುತ್ತಿತ್ತು. ಈಗ ಸರ್ಕಾರದ ಸಂಸ್ಥೆಗಳಿಂದಲೇ ಇಂತಹ ಬೆದರಿಕೆ ಬರತೊಡಗಿದೆ' ಎಂದು ಆತಂಕ ವ್ಯಕ್ತಪಡಿಸಿದರು.



ಕೇಳಿದ್ದು, ಮರೆಯದ್ದು

"ಆಹಾರ, ಶಿಕ್ಷಣ, ಉದ್ಯೋಗ, ವಸತಿ, ಆರೋಗ್ಯದಂತಹ ಮೂಲಭೂತ ಹಕ್ಕುಗಳನ್ನು ನೀಡಬೇಕಾದವರು ಈಗ ಎಲ್ಲದಕ್ಕೂ ಧರ್ಮವನ್ನು ಮುನ್ನೆಲೆಗೆ ತಂದು ನಿಲ್ಲಿಸಿದ್ದಾರೆ. ಆಳುವ ವರ್ಗ ಮೂಲಭೂತವಾದವನ್ನು ಗುರಾಣಿಯಾಗಿ ಬಳಸಿಕೊಂಡು ಜನರನ್ನು ವಂಚಿಸುತ್ತಿದೆ"

– ನ್ಯಾ. ನಾಗಮೋಹನ ದಾಸ್

"ಹೆಣ್ಣು ಮಕ್ಕಳು ಇಂದು ಮತ ಮಾನ್ಯಗಳ ಮೌಲ್ಯಗಳನ್ನು ಕಾಯುವ ಕಾವಲು ಗೇಟುಗಳಾಗಿದ್ದಾರೆ. ಶಬರಿಮಲೆ ವಿಚಾರ ಅದಕ್ಕೊಂದು ನಿದರ್ಶನ".

"ಭಾರತದ ಆತ್ಮ ಇಂದು ಗಾಯಗೊಂಡಿದೆ ಅದನ್ನು ಮಾಯಿಸುವ ನುಡಿ ಸಂಕಥನವನ್ನು ನಾವು ಜನನುಡಿಯಲ್ಲಿ ಹುಡುಕುತ್ತಿದ್ದೇವೆ....

– ಡಾ. ವಿನಯಾ ಒಕ್ಕುಂದ

"ನನ್ನ ಚಾಲಕ ನಿಮ್ಮ ಧೈರ್ಯ ಮೆಚ್ಚುತ್ತೇನೆ ಅಂದ. ಧೈರ್ಯ ಇರೋದು ನನಗಲ್ಲ, ಸುಳ್ಳು ಹೇಳಿಕೊಂಡು ದೇಶವನ್ನ ಆಳಬಹುದು ಅಂದ್ಕೊತಾರಲ್ಲಾ ಅವರಿಗೆ ಧೈರ್ಯ ಬೇಕು."

– ಪ್ರಕಾಶ ರೈ

ಹಿಂದೂ ಧರ್ಮದ ಒಳಗಿರುವ ಅಸ್ಪೃಶ್ಯತೆ, ಮಹಿಳಾ ಶೋಷಣೆ, ಅಸಮಾನತೆಯನ್ನು ವಿರೋಧಿಸದ ಜನರಿಗೆ 2019ರ ಚುನಾವಣೆಗೆ ಧರ್ಮವನ್ನು ಹಿಡಿದು ಮತ ಕೇಳುವ ಯಾವ ಹಕ್ಕಿದೆ....

– ಎಂ.ದೇವದಾಸ್

ಧರ್ಮದ ಹೋರಾಟದಲ್ಲಿ ಮಹಿಳೆಯ ದೇಹವನ್ನು ಯುದ್ಧಭೂಮಿಯಂತೆ ನೋಡುವ ಕ್ರಮವನ್ನು ನಾವು ವಿರೋಧಿಸಬೇಕಿದೆ....

– ಡಾ.ಹಸೀನಾ ಖಾದ್ರಿ

'ಹೊರಳು ನೋಟ' ಗೋಷ್ಠಿ

ಮುಗ್ಧ ಬಾಲ್ಯದಲ್ಲಿ ಆರ್.ಎಸ್.ಎಸ್. ಶಾಖೆಗೆ ಸೆಳೆಯಲ್ಪಟ್ಟು ಬ್ರೈನ್ ವಾಶ್ ಆಗಿ, ಸಂಘ ಪರಿವಾರದ ಸಂಘಟನೆಗಳಲ್ಲಿ ದೀರ್ಘ ಕಾಲ ದುಡಿದು, ಕ್ರಮೇಣ ಭ್ರಮನಿರಸನವಾಗಿ ಹೊರ ಬಂದು, ಕೋಮುವಾದಿ–ವಿರೋಧಿ ಚಳುವಳಿಯಲ್ಲಿ ತೊಡಗಿಸುವಷ್ಟು ಧೈರ್ಯ, ಸ್ಥೈರ್ಯ, ಬದ್ಧತೆ ಇರುವವರು ಬೆರಳೆಣಿಕೆಯಷ್ಟು, ಅಂತಹ ಮೂರು ಪ್ರಮುಖ ನಾಯಕರ ಅನುಭವ ಕಥನದ 'ಹೊರಳು ನೋಟ' ಗೋಷ್ಠಿ ಜನನುಡಿಯ ಟಾಪ್ ಗೋಷ್ಠಿ ಆಗಿತ್ತು. ಕರ್ನಾಟಕ ರಾಜ್ಯಾಧ್ಯಕ್ಷರಾಗಿ ಮಂಗಳೂರು ಚರ್ಚ್ ದಾಳಿ ಪ್ರಕರಣಗಳಲ್ಲಿ ಜೈಲಿಗೂ ಹೋಗಿ ಬಂದ ಮಹೇಂದ್ರ ಕುಮಾರ್, ಪ್ರಗತಿಪರ ವಕೀಲ ಸುಧೀರ್ ಮರೊಳ್ಳಿ ಮತ್ತು ನಮೋ ಬ್ರಿಗೇಡ್ ನ ಪ್ರಭಾವಿ ಭಾಷಣಕಾರರಾಗಿದ್ದ ನಿಕೇತ್ ರಾಜ್ ಮೌರ್ಯ ಅವರುಗಳು ಸಂಘ ಪರಿವಾರದಿಂದ ದೂರವಾದ ಕಾರಣಗಳು, ಅವರು ಬಿಚ್ಚಿಟ್ಟ ಸಂಘ ಪರಿವಾರದ ಭೀಕರ ಸಂಗತಿಗಳು ಎಲ್ಲರ ಕಣ್ಣು ತೆರೆಸುವಂತಿತ್ತು.



ಜಾತಿ–ಅಸ್ಪೃಶ್ಯತೆ ವಿಮುಖನಾಗಲು ಕಾರಣ

ಸಂಘ ಪರಿವಾರದಿಂದ ದೂರವಾದ ಬಗ್ಗೆ ಹಲವು ಘಟನೆಗಳನ್ನು ಪ್ರಸ್ತಾಪಿಸಿದ ಅವರು, ಸಂಘಪರಿವಾರದಲ್ಲಿರುವ ಜಾತಿ ಅಸ್ಪೃಶ್ಯತೆ ನಾನು ಸಂಘ ಪರಿವಾರದಿಂದ ವಿಮುಖನಾಗಲೊಂದು ಕಾರಣ ಎಂದರು. ದಲಿತರು ಕೇವಲ ದಾಳಗಳಾಗಿ ಸಂಘ ಪರಿವಾರಕ್ಕೆ ಬೇಕು. ಗಲಾಟೆ ಮಾಡಲು, ಜೈಲಿಗೆ ಹೋಗಲು ಹಿಂದುಳಿದವರು ಬೇಕು. ಜನರನ್ನು ಉದ್ರೇಕಿಸಿ ತೆರಳುವ ಮುಖಂಡರು ಗಲಾಟೆ ನಡೆಸುವ ಸಂದರ್ಭದಲ್ಲಿ ಅಲ್ಲಿರುವುದೇ ಇಲ್ಲ. ಜೈಲಿಗೆ ಹೋಗುವವರು ಇದೇ ಹಿಂದುಳಿದ, ದಲಿತ ಹುಡುಗರೇ ಆಗಿರುತ್ತಾರೆ. ಮುಸ್ಲಿಂ ಹುಡುಗನಿಂದ ಹಿಂದೂ ಹುಡುಗಿ ಅತ್ಯಾಚಾರಕ್ಕೊಳಗಾದರೆ ಸಂಘಕ್ಕೆ ಆಗುವಷ್ಟು ಖುಷಿ ಯಾರಿಗೂ ಆಗಲ್ಲ. ಕಾರಣ ಇದರಿಂದ ಸಂಘಕ್ಕೆ ಬೇಳೆ ಬೇಯಿಸಲು ಅನುಕೂಲವಾಗುತ್ತದೆ ಎಂದರು

ದಲಿತರಿಗೆ ದತ್ತ ಮಾಲೆ ಹಾಕಲು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿದ್ದೆ. ಅಲ್ಲಿ ದಲಿತರಿಗೆ ದೇವಸ್ಥಾನದೊಳಗೆ ಪ್ರವೇಶ ನೀಡುವುದಿಲ್ಲ. ದಲಿತರು ಅಲ್ಲಿಗೆ ಬರಲು ಒಪ್ಪಲಿಲ್ಲ. ಬಲವಂತ ಮಾಡಿ ಕರೆದುಕೊಂಡು ಹೋಗಿದ್ದೆ. ಆಗ ಹಳ್ಳಿಯ ಜನರು ದಂಡ ಕಟ್ಟಿಸಿಕೊಂಡಿದ್ದರು. ಇದನ್ನು ಸಂಘದ ವೇದಿಕೆಯಲ್ಲಿ ಪ್ರಶ್ನಿಸಿದ್ದಕ್ಕೆ, ಅದು ನಿಧಾನಕ್ಕೆ ಬದಲಾಗುತ್ತದೆ ಎಂದಿದ್ದರು. ಬದಲಾಗಲೇ ಇಲ್ಲ ಎಂದರು. ಮತ್ತೊಂದು ದತ್ತಮಾಲೆ ಸಂದರ್ಭದಲ್ಲಿ ದೇವಸ್ಥಾನದಲ್ಲಿ ಸಭೆ ಮಾಡಲು ಬ್ರಾಹ್ಮಣರು ಅವಕಾಶ ನೀಡಲಿಲ್ಲ. ದೂರದಲ್ಲಿ ಮರದ ಕೆಳಗೆ ಸಭೆ ಮಾಡಿ ಎಂದರು. ನನಗೆ 10 ಸಭೆಗಳು ನಡೆಯುವವರೆಗೂ ಗೊತ್ತಾಗಲಿಲ್ಲ. ನಮ್ಮ ಜತೆ ದಲಿತರು ಇದ್ದರು. ಅವರನ್ನು ದೂರ ಇಡಲು ಈ ಸೂಚನೆ ಬಂದಿತ್ತು. ದಲಿತರೂ ನಮ್ಮಜತೆಗೆ ಹೋರಾಟ ಮಾಡುತ್ತಾರೆ. ಅವರನ್ನು ಯಾಕೆ ದೂರವಿಡಬೇಕು. ಹಿಂದೂ ನಾವೆಲ್ಲಾ ಒಂದು ಅಂತಾರೆ. ಆದರೆ ಮನಸಿನೊಳಗೆ ಮಾತ್ರ ದಲಿತರನ್ನು ಹತ್ತಿರ ಬಿಟ್ಟುಕೊಳ್ಳುವ ವಿಚಾರವೇ ಅವರಲ್ಲಿ ಇಲ್ಲ ಎಂದರು.

ಪುಟ 10 ಕ್ಕೆ

ಜನವಾದಿ ಮಹಿಳಾ ಸಂಘಟನೆಯ ಕಲಬುರಗಿ ತಾಲ್ಲೂಕು ಸಮಾವೇಶ



ದಿನಾಂಕ 07.12.2018 ರಂದು ಕಲಬುರಗಿ ತಾಲ್ಲೂಕು ಸಮಾವೇಶವು ತಾಜಸುಲ್ತಾನಪುರ ಗ್ರಾಮದಲ್ಲಿ ನಡೆಯಿತು. ಸಮಾವೇಶದಲ್ಲಿ ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಅಧ್ಯಕ್ಷರಾದ ಚಂದಮ್ಮ ಗೋಳಾ, ರಾಜ್ಯ ಉಪಾಧ್ಯಕ್ಷರಾದ ಕೆ ನೀಲಾ, ಜಿಲ್ಲಾ ಮುಖಂಡರಾದ ಅಶ್ವಿನಿ ಮದನಕರ್, ಪೂಜಾ ಸಿಂಘೆ ಹಾಗೂ ಗ್ರಾಮ ಪಂಚಾಯತನ ಅಧ್ಯಕ್ಷರಾದ ಸುನೀತಾ ಮದನಕರ್, ಪಿಡಿಪಿ ಸಿದ್ರಾಮ ಚಿಂಚೋಳಿ, ಹಾಗೂ ಸಾವಿತ್ರಿ ಕಲ್ಕೋರಿ, ಚೌಡಮ್ಮ, ಮಲ್ಲಮ್ಮ ಕಟ್ಟಿಮನಿ ಅತಿಥಿಗಳಾಗಿ ಭಾಗವಹಿಸಿದರು. ಸಮಾವೇಶದಲ್ಲಿ ಪ್ರಾಸ್ತಾವಿಕವಾಗಿ ಅಶ್ವಿನಿ ಮದನಕರ್ ಮಾತಾಡನಾಡಿ "ಜನವಾದಿ ಮಹಿಳಾ ಸಂಘಟನೆಯು ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಟ್ಟಲಿಕ್ಕಾಗಿ ಸಮತೆಯ ಹಾಗೂ ಘನತೆಯ ಬದುಕಿಗಾಗಿ ನಿರಂತರ ಶ್ರಮಿಸುತ್ತಿದೆ. ಹಾಗೆಯೇ ಜಿಲ್ಲೆಯಲ್ಲಿ ಉದ್ಯೋಗ ಖಾತ್ರಿ ಕಾಯ್ದೆಯನ್ನು ಜಾರಿಗೊಳಿಸಲು ಅಭಿಯಾನ ಆಂದೋಲನ ನಡೆಸುತ್ತ ಬಂದಿದೆ. ಉದ್ಯೋಗವೇ ಇಲ್ಲವಾಗುತ್ತಿರುವ ಈ ದಿನಗಳಲ್ಲಿ ಉದ್ಯೋಗ ಖಾತ್ರಿ ಕಾಯ್ದೆಯು ಆಸರೆಯಾಗಿದೆ. ಮಹಿಳೆಯರು ಉದ್ಯೋಗ ಖಾತ್ರಿಯ ಸಂಪೂರ್ಣ ಪ್ರಯೋಜನ ಪಡೆದು ರಾಷ್ಟ್ರೀಯ ಸಂಪತ್ತು ನಿರ್ಮಾಣ ಮಾಡಬೇಕು. ಮಹಿಳೆಯರು ಆರ್ಥಿಕ ಸಾಮಾಜಿಕ ಹಾಗು ರಾಜಕೀಯವಾಗಿ ಮುಂದೆ ಬರಲು ಸಾಧ್ಯವಾಗಬೇಕು. ಈ ಹಿನ್ನೆಲೆಯಲ್ಲಿ ಜನವಾದಿ ಮಹಿಳಾ ಸಂಘಟನೆಯು ನಿರಂತರ ಶ್ರಮಿಸುತ್ತಿದೆ" ಎಂದು ಹೇಳಿದರು.

ಅತಿಥಿಯಾಗಿ ಭಾಗವಹಿಸಿದ ಕೆ ನೀಲಾ ಇವರು ಮಾತನಾಡುತ್ತ "ಮಹಿಳಾ ವಿರೋಧಿ ಮೌಲ್ಯಗಳಿಗೆ ಪ್ರಭುತ್ವವೇ ಕುಮ್ಮಕ್ಕು ಕೊಡುತ್ತಿದೆ. ಶಬರಿಮಲೆ ದೇವಸ್ಥಾನದಲ್ಲಿ ಋತುಮತಿ ಮಹಿಳೆಯರು ಬರದಂತೆ ತಡೆಯೊಡ್ಡುವ ಕೋಮುವಾದಿ ಶಕ್ತಿಗಳು ಹೆಚ್ಚುತ್ತಿದ್ದಾರೆ. ಮಹಿಳೆ ಗರ್ಭದಿಂದಲೆ ಜನಿಸಿ ಮಹಿಳೆಯನ್ನೇ ತುಚ್ಛೀಕರಿಸುವ ಮನಸ್ಥಿತಿಯು ಅಪಾಯಕಾರಿಯಾದದ್ದು. ಮಹಿಳೆಯರು ದೇವಸ್ಥಾನದ ಬದಲಿಗೆ ವಾಚನಾಲಯದ ಮುಂದೆ ಕ್ಯೂ ಹಚ್ಚಬೇಕೆಂಬುದು ಬಾಬಾಸಾಹೇಬರ ಕನಸಾಗಿತ್ತು. ದೇಶದಲ್ಲಿನ ಭಾವೈಕ್ಯ ಪರಂಪರೆಯನ್ನು ನಾಶಗೊಳಿಸಲು ನಡೆಯುತ್ತಿರುವ ಹುನ್ನಾರಕ್ಕೆ ಮಹಿಳೆಯರು ಬಲಿ ಬೀಳಬಾರದು. ಸರ್ವಜನಾಂಗದ ಶಾಂತಿಯ ತೋಟ ನಮ್ಮದು. ಎಲ್ಲ ಜಾತಿ ಧರ್ಮದ ಮಹಿಳೆಯರು ಐಕ್ಯತೆಯಿಂದ ಸಮಾನತೆಯ ಬದುಕಿಗಾಗಿ ಮುನ್ನುಗ್ಗಬೇಕು. ಕೇಂದ್ರ ಸರಕಾರವು ಕಪ್ಪು ಹಣ ತಂದು ಪ್ರತಿಯೊಬ್ಬರ ಅಕೌಂಟಿಗೆ ಹದಿನೈದು ಲಕ್ಷ ಹಾಕುವುದಾಗಿ ಸುಳ್ಳು ಹೇಳಿದೆ. ಇಂತಹ ಸುಳ್ಳನ್ನು ನಂಬಬಾರದು. ನಮ್ಮ ಶ್ರಮಕ್ಕೆ ತಕ್ಕ ಫಲ ಪಡೆಯಲು ವಲಸೆ ತಡೆಗಟ್ಟಲು, ನೀರಿನ ಅಂತರ್ಜಲಮಟ್ಟ ಹೆಚ್ಚಿಸಲು ಉದ್ಯೋಗ ಖಾತ್ರಿ ಕಾಯ್ದೆಯ ಪ್ರಯೋಜನ ಪಡೆಯಲು ಹೋರಾಡಬೇಕಿದೆ. ಕೇಂದ್ರ ಸರಕಾರವು ರೇಗಾಕ್ಕಾಗಿ ಹೆಚ್ಚಿನ ಅನುದಾನ ಬಿಡುಗಡೆಗೊಳಿಸಬೇಕು. ಬರಗಾಲದ ಈ ಹೊತ್ತಿನಲ್ಲಿ ಹಳ್ಳಿಗಳಲ್ಲಿನಂತೆ ನಗರಗಳಲ್ಲಿಯೂ ಉದ್ಯೋಗ ಬೇಕಿದೆ. ರೇಗದಂತೆ ಉದ್ಯೋಗ ಒದಗಿಸಿ ಕೂಲಿ ಕೊಡುವ ಯೋಜನೆಯೊಂದನ್ನು ಸರಕಾರ ತರಬೇಕೆಂದು' ಆಗ್ರಹಿಸಿದರು.

ಸಮಾವೇಶದಲ್ಲಿ ಅತಿಥಿಯಾಗಿ ಮಾತನಾಡಿದ ಪಿಡಿಪಿ ಸಿದ್ರಾಮ ಚಿಂಚೋಳಿ ಇವರು 'ಭಾರತವು ಪಾಳೇಗಾರಿ ವ್ಯವಸ್ಥೆ ಹೊಂದಿದ್ದು ಪುರುಷ ಪ್ರಧಾನ್ಯತೆಯಲ್ಲಿರುವುದರಿಂದ ಮಹಿಳೆಯರು ಪರಾವಲಂಬಿಯಾಗಿದ್ದರು. ಆದರೀಗ ಮಹಿಳಾ ಸಂಘಟನೆಗಳ ಹೋರಾಟ ಮತ್ತು ಪ್ರಜ್ಞಾವಂತರ ಪ್ರಯತ್ನದ ಭಾಗವಾಗಿ ಪರಿಸ್ಥಿತಿಯು ಬದಲಾಗುತ್ತಿದೆ. ಉದ್ಯೋಗ ಖಾತ್ರಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸುತ್ತಿದ್ದು ಪರಿಸರ ಮತ್ತು ನಿಸರ್ಗ ಉಳಿಸುವ ದಿಕ್ಕಿನಲ್ಲಿ ಇನ್ನಷ್ಟು ತೊಡಗಬೇಕಿದೆ. ಕೂಲಿಗಾಗಿ ಮಾತ್ರವಲ್ಲ ಪರಿಸರ ಸಂರಕ್ಷಣೆ ಸಹ ಆದ್ಯತೆಯಾಗಬೇಕು. ಎಲ್ಲ ಕುಟುಂಬಕ್ಕೂ ನೂರೈವತ್ತು ದಿನಗಳ ಕೆಲಸ ಇದೆ. ಇದರ ಪ್ರಯೋಜನ ಪಡೆಯಿರಿ' ಎಂದು ಹೇಳಿದರು.

ಚಂದಮ್ಮ ಗೋಳಾ ಇವರು ಮಾತನಾಡುತ್ತ 'ಜನವಾದಿ ಮಹಿಳಾ ಸಂಘಟನೆಯು ಉದ್ಯೋಗ, ಮಹಿಳಾ ಸಮಾನತೆಗಾಗೂ ನಿರಂತರ ಕೆಲಸ ಮಾಡುತ್ತಿದೆ. ಸದಸ್ಯ, ಘಟಕ ರಚನೆಯೊಂದಿಗೆ ಪ್ರತಿ ಮೂರು ವರ್ಷಕ್ಕೊಮ್ಮೆ ಸಮ್ಮೇಳನ ನಡೆಯುವುದು. ಪ್ರಜಾಪ್ರಭುತ್ವದ ದಿಕ್ಕಿನಲ್ಲಿ ಸಂಘಟನೆ ಮುನ್ನಡೆಯುತ್ತಿದೆ. ಎಲ್ಲ ಮಹಿಳೆಯರು ಸಂಘಟಿತರಾಗಬೇಕೆಂದು' ಹೇಳಿದರು.

ಸಾವಿತ್ರಿ ಕಲ್ಕೋರಿ, ಗ್ರಾಮ ಪಂಚಾಯತ ಸಭೆಯ ಅಧ್ಯಕ್ಷೆ ಸುನೀತಾ ಮದನಕರ್ ಇವರು ಸಹ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಆರಂಭದಲ್ಲಿ ಹೇಮಾ ಸ್ವಾಗತಿಸಿದರು. ಸಮಾವೇಶದಲ್ಲಿ ಇಪ್ಪತ್ತೈದು ಜನರ ತಾಲ್ಲೂಕು ಸಮಿತಿ ಆಯ್ಕೆ ಮಾಡಲಾಯಿತು. ಹೇಮಾ ಅಧ್ಯಕ್ಷೆ, ಸೋನಿ ಕಾರ್ಯದರ್ಶಿ, ಜಯಶ್ರೀ, ಮಹಾದೇವಿ ಉಪಾಧ್ಯಕ್ಷ, ಸಪ್ನಾ, ರುಕ್ಮಿಣಿ ಸಹಕಾರ್ಯದರ್ಶಿಯಾಗಿ ಆಯ್ಕೆಯಾದರು.

ಗ್ರಾಮದ ಮುಖ್ಯ ರಸ್ತೆಯಿಂದ ಮೆರವಣಿಗೆ ಮಾಡಲಾಯಿತು. ಎಂಟುನೂರಕ್ಕೂ ಹೆಚ್ಚು ಮಹಿಳೆಯರು ಮೆರವಣಿಗೆಯಲ್ಲಿ ಭಾಗವಹಿಸಿದರು.

'ಹೊರಳು ನೋಟ' ಗೋಷ್ಠಿ ...... ಪುಟ 9 ರಿಂದ

'ಯಾಕೆ ಆರೆಸ್ಸೆಸ್ ಬಿಟ್ಟೆ?' ಐಟಿ ಅಧಿಕಾರಿಯ ಪ್ರಶ್ನೆ

ವಕೀಲ ಸುಧೀರ್ ಮರೊಳ್ಳಿ ಅವರು ಮಾತನಾಡಿ, ಕೆಲ ದಿನಗಳ ಹಿಂದೆ ನನ್ನ ಮನೆಯ ಮೇಲೆ ಐಟಿ ದಾಳಿ ನಡೆದಿತ್ತು. ಇಡೀ ಮನೆ ಹುಡುಕಿದರು. ಏನೂ ಸಿಗಲಿಲ್ಲ. ಕೊನೆಗೆ ಪುಸ್ತಕದ ಕೊನೆಯ ಪುಟ ತೆಗೆದು, ಇವರು ಹೇಗೆ ಪರಿಚಯ ಎಂದು ಕೇಳುತ್ತಿದ್ದರು. ಆಗ ಒಬ್ಬ ಐಟಿ ಅಧಿಕಾರಿ ನೀನು ಯಾಕೆ ಆರೆಸ್ಸೆಸ್ ಮತ್ತು ಎಬಿವಿಪಿ ಯಾಕೆ ಬಿಟ್ಟೆ ಎಂದೂ ಕೇಳಿದ್ದರು. ಇದರಿಂದಲೇ ಗೊತ್ತಾಗುತ್ತದೆ ಅವರು ಏನು ಎಂಬುದು ಎಂದರು. ಸುಧೀರ್ ಆರೆಸ್ಸೆಸ್ ತೊರೆದ ಮೇಲೆ ಅವರಿಗೆ ಸಂಘ ಪರಿವಾರ ನಡೆಸಿದ ಕುತ್ಸಿತ ಅಪಪ್ರಚಾರ, ಕೊಟ್ಟ ಕಿರುಕುಳ, ಹಿಂಸೆ ಮತ್ತು ಅವನ್ನು ಅವರು ದಿಟ್ಟವಾಗಿ ಎದುರಿಸಿದ ಬಗೆ ಕುರಿತು ಹೇಳಿದ್ದು ಸ್ಫೂರ್ತಿದಾಯಕವಾಗಿತ್ತು.

ಸಂಘ ಪರಿವಾರದ ದಿನಗಳನ್ನು ನೆನಪಿಸಿಕೊಂಡ ಅವರು, ಇವರ ಬಳಿ ಇದ್ದುದೆಲ್ಲವು ಧ್ವಂಸದ ಯೋಚನೆಗಳೇ. ಸಂಘಿಗಳ ಭ್ರಷ್ಟಾಚಾರದ ಬಗ್ಗೆ ಎತ್ತಿದರೆ, ಅದಕ್ಕೂ ಕೋಮುಬಣ್ಣ ಹಚ್ಚಿ ಜಾಫರ್ ಶರೀಫ್, ಅಬ್ಬಾಸ್ ಮಾತ್ರ ತಿನ್ನಬೇಕಾ ನಮ್ಮವರೂ ತಿನ್ನಲಿ ಬಿಡಿ ಎನ್ನುತ್ತಿದ್ದರು, ಎಂದರು.

ಸಂಘ ಪರಿವಾರದವರಲ್ಲಿರುವುದು ಖಾಲಿ ಬುರುಡೆ. ವಿಚಾರಗಳು ಏನೂ ಇಲ್ಲ. ಬೀದಿಯ ಜಗಳ, ಕುಸ್ತಿಯಿಂದ ಇವರನ್ನು ಎದುರಿಸಲು ಆಗೋಲ್ಲ. ಸುಲಭವಾಗಿ ಬಿತ್ತಬಹುದಾದ ಸಿದ್ಧಾಂತವಿದು. ಅದನ್ನು ಮತ್ತೊಂದು ಸಿದ್ಧಾಂತದಿಂದ ಮಾತ್ರ ಎದುರಿಸಲು ಸಾಧ್ಯ. ಕುವೆಂಪು ಜಯಂತಿ, ನಾರಾಯಣ ಗುರು, ವಿವೇಕಾನಂದ ಎಲ್ಲರ ಜಯಂತಿಯನ್ನೂ ನಾವು ಮಾಡಬೇಕು. ಇಲ್ಲದಿದ್ದರೆ ಎಲ್ಲರನ್ನೂ ಸಂಘ ಪರಿವಾರ ಹೈಜಾಕ್ ಮಾಡುತ್ತಾರೆ ಎಂದರು.

ಸಂಘ ಪರಿವಾರದ ವ್ಯಾಪಕ ಸಂಘಟನಾ ಕೆಲಸಗಳ ವಿವರ ನೀಡುತ್ತಾ, ಈಗಾಗಲೇ ನಿವೃತ್ತ ನ್ಯಾಯಾಧೀಶರ, ವಕೀಲರ ಸಮಾವೇಶಗಳನ್ನು ಉದ್ಘಾಟಿಸಿದ್ದಾರೆ. ಮುಂದೆ ಹಿಂದೂ ಪ್ರೇಮಿ ಪೊಲೀಸರ, ನ್ಯಾಯಾಧೀಶರ ಸಂಘ ಕಟ್ಟುತ್ತಾರೆ ಎಂದು ಎಚ್ಚರಿಸಿದರು.

ಗುಜರಾತ್ ನೋಡದೆ ಆ ಬಗ್ಗೆ ಭಾಷಣ

ನಿಕೇತ್ ರಾಜ್ ಮೌರ್ಯ ಅವರು ಮಾತನಾಡಿ, ಸಂಘ ಪರಿವಾರದವರು ತುಂಬಾ ಚೆನ್ನಾಗಿ ಮಾತನಾಡುತ್ತಿದ್ದರು. ಆದರೆ ಮಾಡುವುದು ಮಾತ್ರ ಬೆಂಕಿ ಹಚ್ಚುವ ಕೆಲಸ. ಇತಿಹಾಸದ ಗಾಳಿ ಗಂಧ ಗೊತ್ತಿಲ್ಲದ ಸಂದರ್ಭದಲ್ಲಿ ಆರೆಸ್ಸೆಸ್ ನವರು ಹೇಳುತ್ತಿದ್ದ ಕಥೆಗಳೇ ಇತಿಹಾಸ. ಈಗಂತೂ ವಾಟ್ಸಾಪ್, ಫೇಸ್ ಬುಕ್ ವಿವಿಗಳೇ ಸೃಷ್ಟಿಯಾಗಿವೆ ಎಂದರು.

ನಮಗೆ ಅಂದು ನಡೆಯುವ ಧಾರ್ಮಿಕ ಸಭೆಗಳಲ್ಲಿ ರಾಮಕೃಷ್ಣ ಪರಮಹಂಸ, ವಿವೇಕಾನಂದ ಸೇರಿದಂತೆ ಮತ್ತಿತರೆ ವಿಷಯಗಳ ಬಗ್ಗೆ ಮಾತನಾಡಿ ಎನ್ನುತ್ತಿರಲಿಲ್ಲ. ಮೊನ್ನೆ ಅಲ್ಲಿ ಕತ್ತು ಕುಯ್ದ ವಿಷಯದ ಬಗ್ಗೆ ಮಾತನಾಡು ಎನ್ನುತ್ತಿದ್ದರು ಎಂದು ನೆನಪಿಸಿಕೊಂಡರು.

ಚುನಾವಣೆ ವೇಳೆ ನರೇಂದ್ರ ಮೋದಿ ಪರವಾಗಿ ಹಳ್ಳಿ ಹಳ್ಳಿಗಳಲ್ಲಿ ಭಾಷಣ ಮಾಡಿದ್ದೆ. ನಾವು ನೈಜವಾಗಿ ಗುಜರಾತ್ ನೋಡಿಲ್ಲ. ಆದರೂ, ಅದರ ಬಗ್ಗೆ ಗಂಟೆಗಟ್ಟಲೇ ಭಾಷಣ ಮಾಡುತ್ತಿದ್ದೆವು. ಇವರು ಮಾಡುತ್ತಿದ್ದ ಭಾಷಣ ಕೇಳುತ್ತಿದ್ದೆವು. ಎಡಿಟ್ ಫೋಟೋ, ವಿಡಿಯೋಗಳನ್ನೇ ಸತ್ಯಅಂತ ನಂಬಿಸುತ್ತಿದ್ದರು. ಸತ್ಯಏನೆಂದು ತಿಳಿಸುತ್ತಿರಲಿಲ್ಲ. ಚುನಾವಣಾ ಸಂದರ್ಭದಲ್ಲಿ ಸುಳ್ಳನ್ನೇ ಸತ್ಯವನ್ನಾಗಿಸಿದ್ದು. ಅದನ್ನೇ ನಾವು ನಂಬಿದ್ದೆವು. ಈಗ ನಿಜ ಸ್ಥಿತಿಯ ಅರಿವು ಆಗಿದೆ. ಹಾಗಾಗಿ ಬಿಟ್ಟು ಬಂದೆ ಎಂದರು.

ನಾಲ್ಕು ವರ್ಷದಿಂದ ಸುಮ್ಮನಿದ್ದವರು ಈಗ ರಾಮಮಂದಿರವನ್ನು ಕಟ್ಟುತ್ತೇವೆ ಎನ್ನುತ್ತಿದ್ದಾರೆ ಎಂದ ಅವರು, ಗಾಂಧಿಗಿದ್ದುದೇ ಸತ್ಯವಾದ ರಾಮಭಕ್ತಿ. ರಾಜಕೀಯ ರಾಮಭಕ್ತಿಯನ್ನು ಯಾರೂ ಒಪ್ಪಲು ಸಾಧ್ಯವಿಲ್ಲ ಎಂದರು.

ಈಗ ರಾಮನನ್ನು ಬಿಟ್ಟು, ಆಂಜನೇಯ ದಲಿತ ಎಂದು ಹೇಳಲು ಆರಂಭಿಸಿದ್ದಾರೆ. ಇದೆಲ್ಲವೂ ಕೇವಲ ಮತಕ್ಕಾಗಿ ಈ ಷಡ್ಯಂತ್ರ. ಆಂಜನೇಯನಿಗೆ ಜಾತಿ ಕಟ್ಟಬೇಕಾ ಎಂದು ಕೇಳಿದರು. ನಾನಿಂದು ಇಂತಹ ವಿಚಾರಧಾರೆಯಿಂದ ಹೊರಗಡೆ ಬರಲು ಕುವೆಂಪು ಸಾಹಿತ್ಯವನ್ನು ಓದಿಕೊಂಡೆ ಎಂದರು.

ಗೋಷ್ಠಿಯನ್ನು ಅರುಣ್ ಜೋಳದಕೂಡ್ಲಿಗಿ ನಿರ್ವಹಿಸಿದರು.

ಕೇಳಿದ್ದು, ಮರೆಯದ್ದು

ಸಂಘ ಹಿಂದುಗಳ ಪರ ಅಲ್ಲ, ಅದು ವಾಸ್ತವವಾಗಿ ಹಿಂದುಗಳ ಶತ್ರು, ಸಂಘ ಔಷಧಿ ನೀಡುತ್ತಿಲ್ಲ. ಮತ್ತೇರಿಸುವ ಅಫೀಮು ಹಂಚುತ್ತದೆ....*

– ಮಹೇಂದ್ರ ಕುಮಾರ್

ಸಂಘಪರಿವಾರದ ಕೆಟ್ಟ ಸಿದ್ಧಾಂತವನ್ನು ಮತ್ತೊಂದು ಗಟ್ಟಿಯಾದ ಸಿದ್ಧಾಂತದ ಮೂಲಕವೇ ಎದುರಿಸಬೇಕಾಗಿದೆ.

– ಸುಧೀರ್ ಕುಮಾರ್ ಮುರೊಳ್ಳಿ

ನಮಗೆ ಅಂದು ನಡೆಯುವ ಧಾರ್ಮಿಕ ಸಭೆಗಳಲ್ಲಿ ರಾಮಕೃಷ್ಣ ಪರಮಹಂಸ, ವಿವೇಕಾನಂದ ಸೇರಿದಂತೆ ಮತ್ತಿತರೆ ವಿಷಯಗಳ ಬಗ್ಗೆ ಮಾತನಾಡಿ ಎನ್ನುತ್ತಿರಲಿಲ್ಲ. ಮೊನ್ನೆ ಅಲ್ಲಿ ಕತ್ತು ಕುಯ್ದ ವಿಷಯದ ಬಗ್ಗೆ ಮಾತನಾಡು ಎನ್ನುತ್ತಿದ್ದರು

– ನಿಕೇತ್ ರಾಜ್ ಮೌರ್ಯ

'ಭಾರತದ ಮುಸ್ಲಿಮರು' ಗೋಷ್ಠಿಯಲ್ಲಿ

* ಭಾರತದ ಮುಸ್ಲಿಮರು ಒಂದು ಸಿಂಗಲ್ ಎಂಟಿಟಿ ಅಲ್ಲ. ಯಾವುದೇ ಹೇಳಿಕೆಯನ್ನು ಭಾರತದಲ್ಲಿ ಸಮಾನವಾಗಿ ಅನ್ವಯಿಸಲು ಸಾಧ್ಯವಿಲ್ಲ. ಅಂತಹ ವೈವಿಧ್ಯತೆ ಮುಸ್ಲಿಮರಲ್ಲಿ ಇದೆ...
* ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಪರಿಶಿಷ್ಟ ಜಾತಿ, ವರ್ಗಕ್ಕಿಂತ ಹೆಚ್ಚು ಕನಿಷ್ಠ ಸ್ಥಿತಿ ಅವರದು
* ವಿಚಾರಣಾಧೀನ ಖೈದಿಗಳಲ್ಲಿ ಶೇ.25ರಷ್ಟು ಮುಸ್ಲಿಮರಿದ್ದಾರೆ. ಶಿಕ್ಷೆ ಆದವರಲ್ಲಿ ಶೇ.16 ಇದ್ದಾರೆ. ಕೆಲವು ರಾಜ್ಯಗಳಲ್ಲಿ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚು. ಮಹಾರಾಷ್ಟ್ರದಲ್ಲಿ ಜನಸಂಖ್ಯೆ ಶೇ.12 ಇದ್ದರೆ ಜೈಲುಗಳಲ್ಲಿ ಶೇ.31 ಇದ್ದಾರೆ. ಇದು ಓಲೈಸಲ್ಪಡುವ, ಸದಾ ರಾಜಕೀಯ ಪಕ್ಷಗಳ ಪ್ರೀತಿ, ಆದರಕ್ಕೆ ಪಾತ್ರವಾದ ಸಮುದಾಯದ ಸ್ಥಿತಿ. ಓಲೈಸಲ್ಪಡುವ ಸಮುದಾಯ ಎನ್ನುವುದಾದರೆ ದಮನಿಸಬಹುದಾದ ಸಮುದಾಯ ಎಂದು ಹೇಳುವುದೇ ಹೇಗೆ ಎಂದು ಪ್ರಶ್ನಿಸಬಹುದು. ಇದನ್ನೇ ಓಲೈಸುವ ಸ್ಥಿತಿ ಎಂದು ಬಣ್ಣಿಸುವವರು ಏನನ್ನು ಬಯಸುತ್ತಿದ್ದಾರೆ.... ದಮನ ಅಂತ ಯಾವುದನ್ನೂ ಅವರು ಕರೆಯುತ್ತಾರೆ ಎಂಬುದು ಅಚ್ಚರಿ.
* ಮುಸ್ಲಿಮರು ಹಲವು ವಿಷಯಗಳಲ್ಲಿ ಸಮಾಜಕ್ಕೆ ಆಗಾಗ ಸಮಜಾಯಿಷಿ, ಸ್ಪಷ್ಟೀಕರಣ ಕೊಡಬೇಕಾದ ಸ್ಥಿತಿಯಲ್ಲಿದ್ದಾರೆ.
* ಮುಸ್ಲಿಮರು ಪ್ರಾಪಗಂಡಾದ ಬಲಿಗಳು. ಮುಸ್ಲಿಮರು ಸಮಾಜದ ಪಾಲಿಗೆ ಪರಿಚಿತರಾಗಿದ್ದರು. ಪ್ರಾಪಗಂಡ ಮುಸ್ಲಿಮರನ್ನು ಅವರ ಅಕ್ಕಪಕ್ಕದಲ್ಲಿಯೇ ಅಪರಿಚಿತರನ್ನಾಗಿ ಮಾಡಿತು. ಅವರೀಗ ಧರ್ಮ, ಇತಿಹಾಸ, ಭೂತ, ಭವಿಷ್ಯ ಎಲ್ಲದಕ್ಕೂ ಉತ್ತರ ಕೊಡಬೇಕು. ಅಕ್ಬರ್ ಮಾಡಿದ್ದಕ್ಕೂ, ಪಾಕಿಸ್ತಾನ ಮಾಡಿದ್ದಕ್ಕೂ ಉತ್ತರ ಕೊಡಬೇಕು. ಭಾರತದಲ್ಲಿ ಇಸ್ಲಾಮೀಕರಣ ನಡೆಯಬೇಕು ಎಂದು ಉತ್ತರ ಕೊಡಬೇಕು. ಭಾರತೀಯರನ್ನು ಬಲವಂತವಾಗಿ ಮುಸ್ಲಿಮರನ್ನಾಗಿ ಮಾಡುವುದಿಲ್ಲ ಎಂದು ಆಶ್ವಾಸನೆ ಕೊಡಬೇಕು. ಇದನ್ನು ಹೊರಿಸಿದ್ದು ಪ್ರಾಪಗಂಡ ಎನ್ನುವ ಅಸ್ತ್ರ.
* ಭಾರತೀಯ ಮುಸ್ಲಿಮರಿಗೆ ಹೊಸ ಚಿಂತನೆ, ನಾಯಕರ ಅಗತ್ಯವಿದೆ. ಪ್ರಾಶಸ್ತ್ಯದ ಪಟ್ಟಿಯ ಅವಶ್ಯಕತೆ ಇದೆ.

– ಅಬ್ದುಸಲಾಂ ಪುತ್ತಿಗೆ

‘ಭವಿಷ್ಯದ ಭಾರತ – ಮಾರ್ಕ್ಸ್, ಅಂಬೇಡ್ಕರ್, ಗಾಂಧಿ, ಲೋಹಿಯಾ’

ಈ ವರ್ಷ ಮಾರ್ಕ್ಸ್ ದ್ವಿಶತಮಾನೋತ್ಸವ, ಗಾಂಧಿ–150 ವರ್ಷವೂ ಆಗಿರುವ ಹಿನ್ನೆಲೆಯಲ್ಲಿ ಈ ಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿತ್ತು. ಭವಿಷ್ಯದ ಭಾರತ ರೂಪಿಸಲು ಅವಶ್ಯಕ ಸೈದ್ಧಾಂತಿಕ ಚೌಕಟ್ಟು ಕಟ್ಟಿಕೊಳ್ಳಲು ನೆರವಾಗುವ ಸಿದ್ಧಾಂತಗಳಿಂದ ಏನನ್ನು ಕಲಿಯಬಹುದು ಎಂಬುದು ಗೋಷ್ಠಿಯ ಆಶಯವಾಗಿತ್ತು. ಖ್ಯಾತ ಚಿಂತಕ ಜಿ. ರಾಜಶೇಖರ್ ಮಾರ್ಕ್ಸ್ ವಾದದ ಕುರಿತು, ಪ್ರೊ. ಮುಜಫ್ಫರ್ ಅಸಾದಿ ಗಾಂಧಿವಾದದ ಕುರಿತು, ಡಾ ಡೊಮಿನಿಕ್ ಲೋಹಿಯಾವಾದದ ಕುರಿತು ಹಾಗೂ ಪ್ರೊ. ಪರುಷೋತ್ತಮ ಬಿಳಿಮಲೆ ಅಂಬೇಡ್ಕರ್ ವಾದದ ಕುರಿತು ಮಾತನಾಡಲು ಕೇಳಿಕೊಳ್ಳಲಾಗಿತ್ತು.



ಫ್ರೆಂಚ್ ಕ್ರಾಂತಿಯ ಘೋಷಣೆಗಳಾದ ಸ್ವಾತಂತ್ರ್ಯ, ಸಮಾನತೆ, ಸೋದರತ್ವದ ನಿರಂತರ ಹಂಬಲಗಳಿಗೆ ಮಾತು ಮತ್ತು ವಾಗ್ವಾದಗಳ ಖಚಿತತೆ ತಂದು ಕೊಟ್ಟಿದ್ದು ಮಾರ್ಕ್ಸ್. ಆ ಆಶಯಗಳನ್ನು ಸಾಧಿಸಲು ಅವಶ್ಯಕವಾದ ತಾತ್ವಿಕ ಚೌಕಟ್ಟನ್ನು ಕೊಟ್ಟಿದ್ದು ಮಾರ್ಕ್ಸ್ ಎಂದು ಹೇಳುತ್ತಾ, ಜಿ. ರಾಜಶೇಖರ್ ಮಾರ್ಕ್ಸ್ ವಾದದ ಪ್ರಮುಖ ಅಂಶಗಳನ್ನು ವಿವರಿಸಿದರು. ಮಾರ್ಕ್ಸ್ ಅಂದರೆ ಮಾರ್ಕ್ಸ್ ವಾದದ ತಾತ್ವಿಕ ಪರಂಪರೆ. ಜಾತಿ, ವರ್ಗ, ಲಿಂಗ, ದೈಹಿಕ–ಮಾನಸಿಕ ಕೆಲಸಗಳ ಅಸಮಾನತೆಗಳಿಂದ ವಿಮೋಚನೆಯ ಹಲವು ಸಾಧ್ಯತೆಗಳನ್ನು ಮಾರ್ಕ್ಸ್ ವಾದ ಬಿಚ್ಚಿಡುತ್ತದೆ. ಬಂಡವಾಳಶಾಹಿ ವ್ಯವಸ್ಥೆಯನ್ನು ನಾಶ ಮಾಡಿ ಸಮಸಮಾಜದ ಮಾರ್ಕ್ಸ್ ನ ಪರಿಕಲ್ಪನೆ ಆತನ ಕನಸೂ ಅಲ್ಲ. ರಮ್ಯವಿಲಾಸವೂ ಅಲ್ಲ. ಒಂದು ಚಾರಿತ್ರಿಕ ಅನಿವಾರ್ಯತೆ ಎಂದು ಅವರು ಹೇಳಿದರು.

ಇದೇ ಸಂದರ್ಭದಲ್ಲಿ ಇದು ಮಾರ್ಕ್ಸ್ ನ ಮೇರು ಕೃತಿ ‘ಕ್ಯಾಪಿಟಲ್’ನ 150ನೇ ವರ್ಷ, ಅಪ್ರತಿಮ ಸಾಮ್ರಾಜ್ಯಶಾಹಿ ಹೋರಾಟಗಾರ ಚೆ ಗವೆರಾ ನ ಬರ್ಬರ ಕೊಲೆಯ 50ನೇ ವಾರ್ಷಿಕವೂ ಹೌದು. ಭಾರತದ ಸಮಾಜದ ವಿಶ್ಲೇಷಣೆಗೆ ಉಪಯೋಗಿ ಆಗಬಹುದಾದ ಹಲವು ತಾತ್ವಿಕ ಪರಿಕಲ್ಪನೆಗಳನ್ನು ಕೊಟ್ಟ ಗ್ರಾಮ್ ಸ್ಕಿಯ ಕೊಡುಗೆಗಳನ್ನೂ ಅವರು ನೆನೆಸಿಕೊಂಡರು. ದಲಿತರ ಆರ್ಥಿಕ–ಸಾಮಾಜಿಕ ಹಕ್ಕುಗಳಿಗಾಗಿ ಎಚ್ಚೆತ್ತು ಹೋರಾಡಲಾರಂಭಿಸಿದಾಗ ಸಾಮೂಹಿಕ ದೌರ್ಜನ್ಯದ ಸರಣಿ ಆರಂಭವೆಂದು ಹೇಳಲಾದ ಕಿಲ್ವೆನ್ಮಣಿ ಹತ್ಯಾಕಾಂಡದ 50 ನೇ ವಾರ್ಷಿಕವನ್ನು ನೆನೆಸಿಕೊಂಡರು. ಈ ಹೋರಾಟವನ್ನು ಸಂಘಟಿಸುವಲ್ಲಿ ಮತ್ತು ಈ ಹತ್ಯಾಕಾಂಡವನ್ನೂ ಧೀರ ಹೋರಾಟದ ಅಧ್ಯಾಯ ನೆನಪು ಜೀವಂತವಾಗಿರಿಸುವಲ್ಲಿ ಸಿಪಿಐ(ಎಂ)ನ ರೈತ ಸಂಘಟನೆಯ ಪಾತ್ರವನ್ನು ಸ್ಮರಿಸಿದ್ದು ವಿಶೇಷವಾಗಿತ್ತು.

ಭವಿಷ್ಯ ಭಾರತದ ರೂಪಿಸುವಿಕೆಯಲ್ಲಿ ಗಾಂಧಿಯ ಪಾತ್ರವನ್ನು ಪಂಚಮಂತ್ರಗಳ ಮೂಲಕ ಪ್ರೊ. ಮುಜಫ್ಫರ್ ಅಸಾದಿ ವಿವರಿಸಿದರು. ಗಾಂಧಿಯನ್ನು ಪರಿಕಲ್ಪಿಸಿದ ಐದು ಹಂತಗಳು, ಐದು ವೈರುಧ್ಯಗಳು, ಐದು ಆತಂಕಗಳನ್ನು ವಿವರಿಸುವತ್ತ ಭವಿಷ್ಯ ಭಾರತವನ್ನು ಕಟ್ಟುವ ಪಂಚ ಪಾಂಡವರನ್ನು ಅವರು ನಿರ್ವಚಿಸುತ್ತಾರೆ. ಗಾಂಧಿಯನ್ನು ಪರಿಕಲ್ಪಿಸಿದ ಹಂತಗಳನ್ನು ಪ್ರಭುತ್ವದ, ಸಾಮಾಜಿಕ ಚಳುವಳಿಗಳ, ನೆನಪಾಗುವ (ಪ್ರತೀಕ), ನೆಪವಾಗುವ (ಬರಿಯ ಟೋಕನ್) ನಾಲ್ಕು ಹಂತಗಳ ನಂತರ, ಮುಂದಿನ ಹಂತಕ್ಕೆ ಪಂಚ ಪಾಂಡವರ ಭಾಗವಾಗಿ ಗಾಂಧಿ ಬರುತ್ತಾರೆ. ಈ ಮುಂದಿನ ಹಂತದಲ್ಲಿ ಗಾಂಧಿ ಗಾಂಧಿ, ನೆಹರೂ, ಮೌಲಾನಾ ಆಜಾದ್, ಅಂಭೇಡ್ಕರ್ ಮತ್ತು ಮಾರ್ಕ್ಸ್ – ಇವರುಗಳಿರುವ ಪಂಚಪಾಂಡವರ ಭಾಗವಾಗಿ ಬರುತ್ತಾರೆ ಎಂದರು. ಗಾಂಧಿ ಸಮಾಜವಾದ ಮತ್ತು ಬಂಡವಾಳಶಾಹಿ, ಅಭಿವೃದ್ಧ ಮತ್ತು ಬಡ ಭಾರತ, ಜನರು ಮತ್ತು ಪ್ರಭುತ್ವ, ಬಹುತ್ವದ ಮತ್ತು ಹಿಂದು ರಾಷ್ಟ್ರೀಯತೆಗಳ ನಡುವಿನ ವೈರುದ್ಯಗಳ ನಡುವೆ ನಿರ್ವಚಿಸಿಕೊಳ್ಳಬೇಕು ಎಂದರು

ಲೋಹಿಯಾ ಅವರ ಸಿದ್ಧಾಂತ ಬೆಳೆದು ಬಂದ ಬಗೆಯನ್ನು ವಿವರಿಸಿದ ಡಾ. ಡೊಮಿನಿಕ್ ಅವರು ಜಾತಿ ವ್ಯವಸ್ಥೆಯ ಬಗ್ಗೆ ಕೊಡುವ ಒಳನೋಟಗಳ ಬಗ್ಗೆ ಹೇಳಿದರು. ಸಾರ್ವತ್ರಿಕ ಪರಿಕಲ್ಪನೆಗಳನ್ನು ತಿರಸ್ಕರಿಸುತ್ತಾ ದೇಶದ ಜನರ ಸಮಸ್ಯೆಗಳಿಗೆ ‘ಸ್ಥಳೀಯ ಪರಿಹಾರ’ಗಳನ್ನು ಕಂಡುಕೊಳ್ಳುವಲ್ಲಿ ಲೋಹಿಯಾವಾದ ಮಾರ್ಗದರ್ಶಿಯಾಗಬಲ್ಲುದು ಎಂದು ಅಭಿಪ್ರಾಯ ಪಟ್ಟರು.

ಪುರುಷೋತ್ತಮ ಬಿಳಿಮಲೆ ಅವರು ವಿಷಯ ಮಂಡನೆ ಮಾಡುತ್ತಾ, ದೆಹಲಿಯಲ್ಲಿ ಕಿಸಾನ್ ಮೋರ್ಚಾದ ರಾಮಲೀಲಾ ಮೈದಾನದ ರ್ಯಾಲಿಯಲ್ಲಿ ನೆರೆದ “ಲಕ್ಷಾಂತರ ರೈತರು ಬಾಡಿದ ಕಣ್ಣಿನಿಂದ ಕೂಗಿದಾಗ ಆ ಕೂಡಿನಲ್ಲಿ ನಾನು ಕಾರ್ಲ್ ಮಾರ್ಕ್ಸ್ ಹುಡುಕಲೇ, ಗಾಂಧಿಯನ್ನು ಹುಡುಕಲೇ, ಲೋಹಿಯಾ ಹುಡುಕಲೇ, ಅಥವಾ ಭಾರತದ ಸಾಮಾನ್ಯ ಮನುಷ್ಯನನ್ನು ಹುಡುಕಲೇ ನೀವೇ ಹೇಳಿ. ಆ ರೈತರನ್ನು ನೋಡಿದಾಗ ಯಾವ ತತ್ವಗಳೂ ನೆನಪಿಗೆ ಬರಲಿಲ್ಲ. ಅವರ ಕಣ್ಣಿನಿಂದ ಇಳಿಯುತ್ತಿರುವ ನೀರು ಮಾತ್ರ ಕಂಡಿತು. ಅಂದ್ರೆ, ವರ್ತಮಾನದ ಭಾರತದಲ್ಲಿ ಎಷ್ಟೋ ಬಾರಿ ನಾವು ಭಾವಿಸಿದ ತತ್ವಗಳು ನಿರಸನಗೊಳ್ಳುತ್ತಿರುವುದನ್ನು ನಾವು ಕಾಣುತ್ತಿದ್ದೇವಲ್ಲಾ, ಈ ಅಪಾಯಕ್ಕೆ ಮುಖಾಮುಖಿಯಾಗಲು ಸಾಧ್ಯವೇ. ಸಾಧ್ಯವಾಗಬೇಕು ಎಂಬುದು ನನ್ನ ಆಸೆ.” ಎಂದು ಹೇಳುತ್ತಾ, ಭವಿಷ್ಯದ ಭಾರತ ರೂಪಿಸುವಲ್ಲಿ ಸಿದ್ಧಾಂತಗಳ ಪಾತ್ರದ ಬಗ್ಗೆ ತಮ್ಮ ಅನುಮಾನ ವ್ಯಕ್ತಪಡಿಸಿದರು.

“ಭಾರತೀಯ ಸಾಮಾಜಿಕ ಚರಿತ್ರೆಯನ್ನು ಅರ್ಥ ಮಾಡಿಕೊಳ್ಳಲು ಅಂಬೇಡ್ಕರ್ ಅವರಷ್ಟು ಪ್ರಖರವಾದ, ಪ್ರಬಲವಾದ ಚಿಂತನಾ ಕ್ರಮ ಯಾರದ್ದೂ ಇಲ್ಲ. ಕಾರ್ಲ್ ಮಾರ್ಕ್ಸ್, ಲೋಹಿಯಾ ಅವರಲ್ಲೂ ಇಲ್ಲ. ಗಾಂಧಿಯನ್ನು ಟೀಕಿಸುವಾಗ ಅಂಬೇಡ್ಕರ್ ಎತ್ತಿದ ಪ್ರಶ್ನೆಗಳಿಗೆ ಉತ್ತರಿಸಲು ಎಂತಹ ಗಾಂಧಿವಾದಿಗೂ ಸಾಧ್ಯವಾಗಲಿಲ್ಲ. ಹೌದು ಎಂದು ಒಪ್ಪಿಕೊಳ್ಳಲೇಬೇಕು. ಈ ಐಕಾನ್ ಗಳನ್ನು ಬಿಟ್ಟು ಅಂಬೇಡ್ಕರ್ ವಾದಿಗಳು, ಮಾರ್ಕ್ಸ್ ವಾದಿಗಳು, ಲೋಹಿಯಾವಾದಿಗಳ ಜತೆ ಮಾತಾಡ್ತೀವಿ. ಹೀಗೆ ಮಾತಾಡುವಾಗ ಒಂದು ಬಿಕ್ಕಟ್ಟಿನ ಸಂದರ್ಭದಲ್ಲಿ ಯಾವುದೂ ಪ್ರಯೋಜನಕ್ಕೆ ಬರೋಲ್ಲ. ಕಾಮನ್ ಸೆನ್ಸ್ ಮಾತ್ರ ಉಪಯೋಗಕ್ಕೆ ಬರುತ್ತೆ.” ಎಂದು ಜೆ.ಎನ್.ಯು. ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿ ಬಿ.ಎಸ್.ಪಿ,ಯ ವಿದ್ಯಾರ್ಥಿ ಸಂಘಟನೆ ಕೋಮುವಾದಿ ಎಬಿವಿಪಿ ವಿರುದ್ಧ ಅಣಿ ನೆರೆದಿದ್ದ ಎಲ್ಲಾ ವಿದ್ಯಾರ್ಥಿ ಸಂಘಟನೆಗಳಿಂದ ದೂರ ಉಳಿದಿದ್ದರ ಹಿನ್ನೆಲೆಯಲ್ಲಿ ಹೇಳಿದರು.

ಮಾರ್ಕ್ಸ್‌ವಾದ ಪ್ರಾದೇಶಿಕವಾಗಲೇ ಇಲ್ಲ. ಜಗದ್ವಲಯದಲ್ಲೇ ನಿಂತ ಸಿದ್ಧಾಂತ. ಅದು ಪ್ರಾದೇಶಿಕ ಅವಶ್ಯಕತೆಗೆ ಪ್ರತಿಕ್ರಿಯಲು ವಿಫಲವಾದ್ದರಿಂದ, ಬರಿಯ ಜಾಗತಿಕ ಸಿದ್ಧಾಂತವಾಗಿ ಉಳಿದಿದೆ.. ಭಾರತದಲ್ಲಿ ಜನರನ್ನು ಮುಟ್ಟಲಿಲ್ಲವೆಂದು ಅಭಿಪ್ರಾಯ ಪಟ್ಟರು.

ನಂತರ ನಡೆದ ಸಂವಾದದಲ್ಲಿ, ‘ಜಾಗತಿಕವಾಗಿ ಉಳಿಯುವುದು’, ‘ಪ್ರಾದೇಶಿಕವಾಗುವುದು’, ’ಸ್ಥಳೀಯ ಪರಿಹಾರಗಳು’ ಎಂದರೇನು ಎಂಬುದರ ಬಗ್ಗೆ ಚರ್ಚೆಯಾಯಿತು. ರೈತರ ‘ದಿಲ್ಲಿ ಚಲೊ’ ಅಥವಾ ಜೆ.ಎನ್.ಯು. ವಿದ್ಯಾರ್ಥಿ ಸಂಘದ ಚುನಾವಣೆಗಳು ಸಿದ್ಧಾಂತದ ಪಾತ್ರ ಅಲ್ಲಗಳೆಯುವ ಬದಲು, ಆ ಪಾತ್ರದ ಮಹತ್ವವನ್ನು ಹೇಳುತ್ತವೆ ಎಂಬುದು ಮಾತ್ರ ಚರ್ಚೆಗೆ ಬಾರದೆ ಹೋಯಿತು. ಯಾಕೆಂದರೆ ದೆಹಲಿಯ ಅಭೂತಪೂರ್ವ ರೈತರ ರ್‍ಯಾಲಿಯಾಗಲಿ ಜೆ.ಎನ್.ಯು. ನಲ್ಲಿ ಕೋಮುವಾದಿಗಳ ಸೋಲಾಗಲಿ ವಿವಿಧ ಸಿದ್ಧಾಂತಗಳ ಆಧಾರದ ಮೇಲೆ ನಡೆಯುತ್ತಿರುವ ರೈತ/ವಿದ್ಯಾರ್ಥಿ ಸಂಘಟನೆಗಳು ಇಲ್ಲದಿದ್ದರೆ ಸಾಧ್ಯವಾಗಿರುತ್ತಿರಲಿಲ್ಲ ಎಂಬ ಸರಳ ಸತ್ಯ ಗಮನಕ್ಕೆ ಬಾರದೆ ಹೋಯಿತು. ●

ಕೇಳಿದ್ದು ಮರೆಯದ್ದು

ಜಾತಿ, ವರ್ಗ, ಲಿಂಗ, ದೈಹಿಕ–ಮಾನಸಿಕ ಕೆಲಸಗಳ ಅಸಮಾನತೆಗಳಿಂದ ವಿಮೋಚನೆಯ ಹಲವು ಸಾಧ್ಯತೆಗಳನ್ನು ಮಾರ್ಕ್ಸ್ ವಾದ ಬಿಚ್ಚಿಡುತ್ತದೆ.

– ಜಿ. ರಾಜಶೇಖರ್

ಗಾಂಧಿ, ನೆಹರೂ, ಅಂಬೇಡ್ಕರ್, ಮಾರ್ಕ್ಸ್, ಮೌಲಾನಾ ಅಜಾದ್ ಅವರುಗಳ ಚಿಂತನೆಗಳನ್ನು ಒಳಗೊಂಡ ಹೊಸ ಪಂಚಶೀಲ ತತ್ವ ಭವಿಷ್ಯದ ಭಾರತಕ್ಕೆ ಅಡಿಪಾಯವಾಗಬಲ್ಲದು....

~ **ಡಾ. ಮುಜಾಫರ್ ಅಸ್ಸಾದಿ**

ಅನ್ನದಾತ ತನ್ನ ಒಡಲ ಬೆಂಕಿ ಹೊತ್ತು ನ್ಯಾಯಕ್ಕಾಗಿ ದೆಹಲಿಯ ಬೀದಿಗಳಲ್ಲಿ ಧ್ವನಿ ಎತ್ತುವಾಗ ಅವರನ್ನು ಕೇಳಿಸಿಕೊಳ್ಳಲು ಪ್ರಭುತ್ವ ಸಿದ್ಧವಿಲ್ಲ ಅಂತಾದರೆ ನಾವು ರಾಜಕೀಯವನ್ನು ಹೇಗೆ ಗ್ರಹಿಸಬೇಕು...

~ ಡಾ. ಪುರುಷೋತ್ತಮ ಬಿಳಿಮಲೆ

ಜನರ ಬದುಕಿನ ಸಂಕಷ್ಟಗಳಿಗೆ ಸ್ಥಳೀಯ ಪರಿಹಾರಗಳನ್ನು ಹುಡುಕಿಕೊಳ್ಳಬೇಕಿದೆ ಆ ದಾರಿಯಲ್ಲಿ ಲೋಹಿಯಾ ಚಿಂತನೆ ಮಾರ್ಗದರ್ಶಿ..


~ **ಡಾ.ಡೊಮೆನಿಕ್**


ಹೆಣ್ಣುಮಕ್ಕಳ ಧ್ವನಿಯನ್ನು ಹತ್ತಿಕ್ಕುವ ಕೆಲಸ ನಿರಂತರವಾಗಿ ನಡೆಯುತ್ತಿದೆ.


~ **ಡಾ. ಎಚ್.ಎಸ್ ಅನುಪಮಾ**

ದಲಿತ ಭಾರತ ಎಂದರೆ ಬಹುತ್ವದ ಮರುಹುಟ್ಟು

– ರವಿಕುಮಾರ್ ಟೆಲೆಕ್ಸ್







ಜಿಡಿಪಿ, ಅಚ್ಛೇ ದಿನ್ ಎಲ್ಲವೂ ಮಿಥ್ಯೆ....



ದೇಶದ ಅಭಿವೃದ್ಧಿ ಮತ್ತು ಜನರ ಕಲ್ಯಾಣಕ್ಕಿಂತ ಜಿಡಿಪಿಯ ಬಗ್ಗೆಯೇ ಗೀಳು ಹೆಚ್ಚಿರುವ ಎನ್‌ಡಿಎ–2 ಅವಧಿ ಮುಗಿಯುತ್ತಿರುವಂತೆ ಜಿಡಿಪಿಯ ಬಗ್ಗೆ ಮತ್ತೆ ಚರ್ಚೆ ಎದ್ದಿದೆ. ಕಳೆದ ವಾರ ಜಿಡಿಪಿಯ ಹೊಸ ವಿಧಾನದಲ್ಲಿ ಹಿಂದಿನ ವರ್ಷಗಳ ಸರಣಿಯನ್ನು 'ನೀತಿ ಆಯೋಗ' ಪ್ರಕಟಿಸಿದ್ದು ಅದರ ವಿಶ್ವಸನೀಯತೆಯ ಬಗ್ಗೆಯೇ ವಾದ–ವಿವಾದಗಳು ಹುಟ್ಟಿಕೊಂಡಿವೆ.

ಮೂರು ವರ್ಷಗಳ ಹಿಂದೆ ಈ ಸರಕಾರ ಜಿಡಿಪಿಯನ್ನು ಲೆಕ್ಕ ಹಾಕುವ ವಿಧಾನವನ್ನು ಬದಲಿಸಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅದರಲ್ಲಿ ತನ್ನ ಅವಧಿಯಲ್ಲಿ ಜಿಡಿಪಿ ಬೆಳವಣಿಗೆ ಉತ್ತಮಗೊಂಡಂತೆ ಕಂಡು ಈ ಸರಕಾರ ಮುದಗೊಂಡಿತ್ತು, ಅದು ತನ್ನ ಅಚ್ಛೇ ದಿನ್‌ಗಳ ಸಂಕೇತ ಎಂದಿತ್ತು. ಆದರೆ ಇದು ಅಂಕಿ–ಅಂಶಗಳಲ್ಲಷ್ಟೇ, ವಾಸ್ತವದಲ್ಲಿ ಅಲ್ಲ, ಈ ಹೊಸ ವಿಧಾನದಲ್ಲಿ ಹಿಂದಿನ ವರ್ಷಗಳ ಜಿಡಿಪಿಗಳನ್ನು ಲೆಕ್ಕ ಹಾಕಿದಾಗ ಚಿತ್ರ ಸ್ಪಷ್ಟವಾಗಬಹುದು ಎಂಬ ವಾದ ಬಂದಿತ್ತು. ಆ ಕಸರತ್ತು ಆರಂಭವಾಯಿತು.

ಮೂರು ವಾರಗಳ ಹಿಂದೆ ಈ ಕಸರತ್ತು ಮುಗಿದು ಅದರ ಫಲಿತಾಂಶಗಳನ್ನು ಪ್ರಕಟಿಸಲಾಗುವುದು ಎಂದು ಅದಕ್ಕಾಗಿ ಪತ್ರಿಕಾ ಸಮ್ಮೇಳನವನ್ನೂ ಏರ್ಪಡಿಸಲಾಗಿತ್ತು. ಆದರೆ ಕೊನೆಯ ಗಳಿಗೆಯಲ್ಲಿ ಅದು ರದ್ದಾಯಿತು. ಅದಕ್ಕೆ ಕೊಟ್ಟ ಕಾರಣ– ಈ ಬಗ್ಗೆ ಕೆಲವು ಪ್ರಶ್ನೆಗಳು ಎದ್ದಿದ್ದು ನೀತಿ ಆಯೋಗ ಮತ್ತು ಸರಕಾರದ ಅಂಕ–ಅಂಶಗಳ ಇಲಾಖೆ ಈ ಬಗ್ಗೆ ಪರಿಣಿತರೊಂದಿಗೆ ಇನ್ನಷ್ಟು ಚರ್ಚೆ ನಡೆಯಬೇಕು ಎಂದು ಭಾವಿಸಿದವಂತೆ!

ನಿಜವಾದ ಕಾರಣ ಅದಲ್ಲ, ಈ ವಿಷಯದ ಮೇಲೆ ಅಧ್ಯಯನ ಮಾಡಲು ರಾಷ್ಟ್ರೀಯ ಸಾಂಖ್ಯಿಕ ಆಯೋಗದ ಒಂದು ಸಮಿತಿಯನ್ನು ನೇಮಿಸಲಾಗಿತ್ತು, ಈ ಅಗಸ್ಟ್‌ನಲ್ಲಿ ಅದು ಈ ಕುರಿತ ಒಂದು ಚರ್ಚಾ ಪ್ರಬಂಧವನ್ನು, ಅಂದರೆ ಕರಡನ್ನು ಪ್ರಕಟಿಸಿದ್ದು, ಅದರಲ್ಲಿ ಹಿಂದಿನ ಅವಧಿಯಲ್ಲಿ, ಅಂದರೆ ಯುಪಿಎ ಸರಕಾರದ ಅವಧಿಯಲ್ಲಿ ಇನ್ನೂ ಉತ್ತಮ ಜಿಡಿಪಿ ಬೆಳವಣಿಗೆ ಕಂಡು ಬಂದಿತ್ತು. ಎರಡು ವರ್ಷಗಳಲ್ಲಂತೂ ಅದು ಎರಡಂಕಿ ದಾಟಿತ್ತು ಎನ್ನಲಾಗಿತ್ತು. ಈ ಬಾರಿಯೂ ಅದೇ ಫಲಿತಾಂಶ ಬಂದಿರಬಹುದೆಂಬ ಭೀತಿಯಿಂದ ಅದನ್ನು ಮುಂದೂಡಲಾಯಿತು ಎಂಬುದು ಕೆಲವು ವಿಶ್ಲೇಷಕರ ಊಹೆಯಾಗಿತ್ತು.

ಈ ಊಹೆಗೆ, ಕೊನೆಗೂ ಕಳೆದ ವಾರ ಬಿಡುಗಡೆ ಮಾಡಿದ ಜಿಡಿಪಿ ಮಾಹಿತಿಗಳು ಸಾಕಷ್ಟು ಆಧಾರಗಳನ್ನು ಕೊಡುವಂತಿವೆ. ಬಹುಶಃ ಆ ಭೀತಿಯಿಲ್ಲ ಎಂದು ಈಗ ಖಾತ್ರಿ ಮಾಡಿಕೊಳ್ಳಲಾಗಿದೆ. ಏಕೆಂದರೆ ಇದರ ಪ್ರಕಾರ ಯುಪಿಎ ಅವಧಿಯಲ್ಲಿ, ಜಿಡಿಪಿ ಬೆಳವಣಿಗೆ ಈ ಮೊದಲು ಹೇಳಿದಂತೆ ಸರಾಸರಿ 7.75% ಇರಲಿಲ್ಲ, ಬದಲಾಗಿ 6.7% ಮಾತ್ರ ಇತ್ತು. ಅಚ್ಛೇದಿನ್‌ಗಳಲ್ಲಿ ಈ ಸರಾಸರಿ 7.3% ಎಂದು ಲೆಕ್ಕ ಹಾಕಲಾಗಿದೆ ಎಂಬುದನ್ನು ಗಮನಿಸಬಹುದು.

ಈ ಹೊಸ ಅಂಕಿ–ಅಂಶಗಳು ವಿವಾದಕ್ಕೆ ಒಳಗಾಗಿರಲು ಒಂದು ಕಾರಣ, ಇವನ್ನು ವಾಸ್ತವವಾಗಿ ಕೇಂದ್ರೀಯ ಸಾಂಖ್ಯಿಕ ಸಂಘಟನೆ(ಸಿಎಸ್‌ಒ) ಪ್ರಕಟಿಸಬೇಕಿತ್ತು. ಅದರ ಬದಲು ನೀತಿ ಆಯೋಗ ಪ್ರಕಟಿಸಿದ್ದೇಕೆ ಎಂಬುದು. ನೀತಿ ಆಯೋಗ ಅದು ಮೂಲೆಗುಂಪು ಮಾಡಿದ ರಾಷ್ಟ್ರೀಯ ಯೋಜನಾ ಆಯೋಗದ ಸ್ಥಾನಮಾನವನ್ನು ಹೊಂದಿಲ್ಲ, ಅದು ಕೇವಲ ಒಂದು ಸರಕಾರ ಸಲಹೆ ಕೇಳಲು ನೇಮಿಸಿಕೊಂಡ 'ಚಿಂತಕರ ಚಾವಡಿ' ಯಷ್ಟೇ.

ಎರಡನೆಯದಾಗಿ, ಈ ಲೆಕ್ಕಾಚಾರದಲ್ಲಿ ಅನುಸರಿಸಿದ ವಿಧಾನಗಳ ಬಗ್ಗೆ ಸ್ಪಷ್ಟತೆ ಇಲ್ಲ ಎನ್ನುವುದು. ಈ ಸರಕಾರದೊಂದಿಗೆ ಕೆಲಸ ಮಾಡಿದ ರಘುರಾಮ ರಾಜನ್, ಪನಗರಿಯ, ಸುಬ್ರಮಣ್ಯಂ ಮುಂತಾದ ಪರಿಣತರು ಮಧ್ಯದಲ್ಲೇ ಬಿಟ್ಟುಹೋಗಿರುವುದು ಕರಾರುವಾಕ್ಕಾದ ವಿಧಾನಗಳಿಗೆ ಈ ಸರಕಾರ ಎಷ್ಟು ಗೌರವ ಕೊಡುತ್ತದೆ, ಅಂದರೆ ಈ ಅಂಕಿ–ಅಂಶಗಳ ಬಗ್ಗೆ ಎಷ್ಟು ಪ್ರಾಮಾಣಿಕವಾಗಿದೆ ಎಂಬುದರ ಬಗ್ಗೆ ಬಹಳಷ್ಟು ಸಂದೇಹಗಳನ್ನು ಹುಟ್ಟಿಸಿರುವುದು.

ಮೂರನೆಯದಾಗಿ, ಈ ಅವಧಿಗಳಲ್ಲಿನ ವಾಸ್ತವಾಂಶಗಳು ತದ್ವಿರುದ್ಧವಾಗಿವೆ ಎಂಬುದು.


ಯುಪಿಎ ಆಡಳಿತದ 10ವರ್ಷಗಳಲ್ಲಿ ಅಚ್ಛೇ ದಿನ್ ಖಂಡಿತವಾಗಿಯೂ ಇರಲಿಲ್ಲ. ಆದರೆ, ಅಂಕಿ–ಅಂಶಗಳ ಪ್ರಕಾರ, ಜಿಡಿಪಿ ಲೆಕ್ಕಾಚಾರದ ಮುಖ್ಯ ಅಂಶಗಳಾದ ರಫ್ತು ಬೆಳವಣಿಗೆ ದರ 20 & ಮೀರಿತ್ತು, ಉದ್ದಿಮೆಗಳಿಗೆ ಸಾಲ ನೀಡಿಕೆಯೂ 20% ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ದಾಖಲಾಗಿತ್ತು, ಮೇಲಿನ 1100 ಕಂಪನಿಗಳ ಆದಾಯಗಳಲ್ಲೂ 20% ಕ್ಕಿಂತ ಹೆಚ್ಚಿನ ಬೆಳವಣಿಗೆ ದಾಖಲಾಗಿತ್ತು. ತದ್ವಿರುದ್ಧವಾಗಿ, ಈ ನಾಲ್ಕು ವರ್ಷಗಳ 'ಅಚ್ಛೇ ದಿನ್' ಅವಧಿಯಲ್ಲಿ ರಫ್ತು ಬೆಳವಣಿಗೆ ದರ ಸೊನ್ನೆ, ಉದ್ದಿಮೆಗಳಿಗೆ ಸಾಲ ನೀಡಿಕೆಯಲ್ಲಿ ಬೆಳವಣಿಗೆಯ ದರ ಎರಡಂಕಿಯನ್ನೂ ತಲುಪಿಲ್ಲ, ಮೇಲಿನ 1100 ಕಂಪನಿಗಳ ಆಧಾಯಗಳಲ್ಲೂ ಆಗಿರುವ ಏರಿಕೆ 2% ಮಾತ್ರ. ಹೆಚ್ಚಿನ ಆರ್ಥಿಕ ಸೂಚ್ಯಂಕಗಳು ಕಳೆದ ನಾಲ್ಕು ವರ್ಷಗಳಲ್ಲಿ ಕೆಳಮುಖಿಯಾಗಿವೆ. ಹೀಗಿರುವಾಗ ಹೆಚ್ಚಿನ ಜಿಡಿಪಿ ಬೆಳವಣಿಗೆ ಎಲ್ಲಿಂದ ಬಂತು ಎಂದು ಹಲವು ಪರಿಣಿತರು ಪ್ರಶ್ನಿಸುತ್ತಿದ್ದಾರೆ(ಎಂ.ಕೆ.ವೇಣು, ದಿ ವೈರ್, ನವಂಬರ್ 30).

ಸಿಎಸ್‌ಒ ಮತ್ತು ರಾಷ್ಟ್ರೀಯ ಸಾಂಖ್ಯಿಕ ಆಯೋಗದ ಹಿಂದಿನ ಅಧ್ಯಕ್ಷರು ಕೂಡ ನೀತಿ ಆಯೋಗ ಈ ಮಾಹಿತಿಗಳನ್ನು ಬಿಡುಗಡೆ ಮಾಡಿರುವ ಬಗ್ಗೆ ಟೀಕೆ ಮಾಡಿದ್ದಾರೆ. ಇದು ರಾಷ್ಟ್ರೀಯ ಅಂಕೆ–ಸಂಖ್ಯೆಗಳಿಗೆ ಸಂಬಂಧಪಟ್ಟ ಸಂಸ್ಥೆಗಳ ರಾಜಕೀಯಕರಣ ಎಂಬುದು ಅವರ ಅಭಿಪ್ರಾಯ. ಅಲ್ಲದೆ, ಈ ಹಿಂದಿನ ಸರಣಿ ಕುರಿತ ಮಾಹಿತಿಗಳು ವಾಸ್ತವತೆಗಳಿಗೆ ಸಂಬಂಧಪಟ್ಟಂತೆ ಇರುವ ಮೂಲ ಪರೀಕ್ಷೆಗಳಲ್ಲೂ ತೇರ್ಗಡೆಯಾಗಿಲ್ಲ ಎಂದೂ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಹಿಂದಿನ ಒಬ್ಬ ರಿಝರ್ವ್ ಬ್ಯಾಂಕಿನ ಗವರ್ನರ್ ವೈ.ವಿ.ರೆಡ್ಡಿ "ಜಗತ್ತಿನ ಎಲ್ಲೆಡೆಗಳಲ್ಲಿ ಭವಿಷ್ಯ ಅನಿಶ್ಚಿತವಾಗಿದೆ, ಭಾರತದಲ್ಲಿ ಭೂತಕಾಲವೂ ಅನಿಶ್ಚಿತವಾಗಿದೆ" ಎಂದು ವ್ಯಂಗ್ಯವಾಡಿದ್ದರಂತೆ. ಈ ಹಿಂದಿನ ವರ್ಷಗಳ ಹೊಸ ಸರಣಿಯೊಂದಿಗೆ ಈಗ ಭೂತಕಾಲ ಮತ್ತಷ್ಟು ಅನಿಶ್ಚಿತವಾಗಿದೆ ಎನ್ನುತ್ತಾರೆ ಇನ್ನೊಬ್ಬ ಆರ್ಥಿಕ ತಜ್ಞ ವಿವೇಕ್ ಕೌಲ್ (ಫಸ್ಟ್ ಪೋಸ್ಟ್, ನವಂಬರ್ 29).

ವರ್ಷಕ್ಕೆ 2 ಕೋಟಿ ಉದ್ಯೋಗ ನಿರ್ಮಾಣದ ಬದಲು, ಉದ್ಯೋಗನಾಶವಾಗುತ್ತಿದೆ ಎಂಬ ಟೀಕೆ ವ್ಯಾಪಕವಾದಾಗ, ಸಮಸ್ಯೆ ಉದ್ಯೋಗ ನಿರ್ಮಾಣದ ಅಭಾವದ್ದಲ್ಲ, ಬದಲಾಗಿ ಆ ಕುರಿತ ಮಾಹಿತಿಯ ಅಭಾವದ್ದು ಎನ್ನಲಾಯಿತು. ಈಗ ಎನ್‌ಡಿಎ–2 ಅಧಿಕಾರಾವಧಿ ಮುಗಿಯಲು ಕೇವಲ ನಾಲ್ಕೇ ತಿಂಗಳು ಉಳಿದಿರುವಾಗ ಹಿಂದಿನ ಜಿಡಿಪಿ ಮಾಹಿತಿಗಳೇ ಮಿಥ್ಯೆ ಎನ್ನಲಾಗುತ್ತಿದೆ. ವಿಶೇಷವೆಂದರೆ, ಇದನ್ನೆಲ್ಲ ಹೇಳುತ್ತಿರುವುದು, ಅಚ್ಛೇ ದಿನ್ ತಂದಿದ್ದೇವೆ ಎಂದು ಹೇಳಲಿಕ್ಕಲ್ಲ, ಬದಲಾಗಿ, ಬಹುಶಃ ಅಚ್ಛೇ ದಿನ್ ಕೂಡಾ ಮಿಥ್ಯೆ ಎಂದು ಹೇಳಲಿಕ್ಕಾಗಿ, ಏಕೆಂದರೆ ಯುಪಿಎ ಕಾಲದಲ್ಲೂ ಅಚ್ಛೇ ದಿನ್ ಇರಲಿಲ್ಲವಲ್ಲ!

ಈ ಪ್ರಕ್ರಿಯೆಯಲ್ಲಿ ಇದುವರೆಗೆ ಜಾಗತಿಕ ಮನ್ನಣೆ ಗಳಿಸಿದ್ದ ನಮ್ಮ ದೇಶದ ಸಾಂಖ್ಯಿಕ, ಅಂಕಿ–ಅಂಶಗಳ ಸಂಸ್ಥೆಗಳನ್ನು ಅಪಲೌಲ್ಯಗೊಳಿಸಲಾಗುತ್ತಿದೆ ಎಂದು ಈ ರಂಗದಲ್ಲಿನ ಪರಿಣಿತರು ಖೇದ ವ್ಯಕ್ತಪಡಿಸುತ್ತಿದ್ದಾರೆ.



'ಸಮರ್ಥ' ಅಂಬಾನಿ ಗುಂಪಿನ ರಕ್ಷಣಾ ಕಂಪನಿಗೆ ನೌಕಾಪಡೆ 'ಶಿಕ್ಷೆ'!
'ಅಸಮರ್ಥ' ಹೆಚ್‌ಎಎಲ್‌ನಿಂದ ದಾಖಲೆ ವಹಿವಾಟು–ವಾಯುಪಡೆ ಅಭಿನಂದನೆ!

ಖಾಸಗಿ ರಂಗದ ದೊಡ್ಡ ಕಂಪನಿಗಳ ನಿಜ ಸಾಮರ್ಥ್ಯದ ಒಂದು ಟ್ರೇಲರ್ ಈಗ ಬಂದಿದೆ.

ರಿಲಯನ್ಸ್ ನೇವಲ್ ಇಂಜಿನಿಯರಿಂಗ್ ಲಿಮಿಟೆಡ್(ಆರ್‌ಎನ್‌ಇಎಲ್) ಕಂಪನಿಯ ಮೇಲೆ ಭಾರತೀಯ ನೌಕಾ ಪಡೆ 'ಶಿಕ್ಷೆ'ಯ ಕ್ರಮ ಕೈಗೊಂಡಿದೆ ಎಂದು ನೌಕಾ ಸೇನಾಪತಿಗಳು ಪತ್ರಿಕಾ ಸಮ್ಮೇಳನವೊಂದರಲ್ಲಿ ಹೇಳಿದ್ದಾರೆ. ಈ ಕಂಪನಿ ಐದು ಗಸ್ತು ನೌಕೆಗಳನ್ನು ತಯಾರಿಸಿ ಕೊಡುವ ಕಾಂಟ್ರಾಕ್ಟ್ ಪಡೆದಿದ್ದು ಇದುವರೆಗೂ ಒಂದೂ ನೌಕೆಯನ್ನು ಕೊಟ್ಟಿಲ್ಲ. ಆದರೂ ಇದು ಅನಿಲ್ ಅಂಬಾನಿ ಒಡೆತನದ ಕಂಪನಿಯಾದ್ದರಿಂದ ಅದರ ವಿರುದ್ಧ ಯಾವುದೇ ಕ್ರಮವನ್ನು ಕೈಗೊಂಡಿಲ್ಲ ಎಂಬ ಸುದ್ದಿಯ ಹಿನ್ನೆಲೆಯಲ್ಲಿ ನೌಕಾಸೇನಾಪತಿಗಳೇ ಈ ಪತ್ರಿಕಾ ಸಮ್ಮೇಳನ ಕರೆದಂತೆ ಕಾಣುತ್ತದೆ. ಕ್ರಮ ಕೈಗೊಳ್ಳದಂತೆ ನೌಕಾ ಪಡೆಯ ಮೇಲೆ ಒತ್ತಡಗಳಿವೆಯೇ ಎಂದು ಪ್ರಶ್ನೆಗೆ ಉತ್ತರಿಸುತ್ತ ಯಾವ ಮುಲಾಜೂ ತೋರಿಸಲಾಗಿಲ್ಲ, ಆ ಕಂಪನಿಯ ಮೇಲೆ ಈಗಾಗಲೇ 'ಶಿಕ್ಷಾ'ಕ್ರಮ ಕೈಗೊಳ್ಳಲಾಗಿದೆ, ಆ ಪ್ರಕ್ರಿಯೆಯನ್ನು ಮುಂದುವರೆಸಲಾಗುತ್ತದೆ ಎಂದರು. 'ಶಿಕ್ಷಾ' ಕ್ರಮ ಎಂದರೆ ಆ ಕಂಪನಿ ನೀಡಿದ್ದ ಬ್ಯಾಂಕ್ ಗ್ಯಾರಂಟಿಯನ್ನು ವಸೂಲು ಮಾಡಲಾಗಿದೆ. ಆದರೆ ಈ ಕಾಂಟ್ರಾಕ್ಟನ್ನು ಸದ್ಯಕ್ಕೆ ರದ್ದು ಮಾಡಲಾಗುತ್ತಿಲ್ಲ, ಸರಕಾರ ಈ ಬಗ್ಗೆ ನಿರ್ಧರಿಸಬಹುದು ಎಂದಷ್ಟೇ ಅವರು ಹೇಳಿದರು. ಅಲ್ಲದೆ ಈ ಕಂಪನಿಯ ಸಾಲ ಮರುಪಾವತಿಯ ಮರುಪರಿಶೀಲನೆ ನಡೆದಿದೆ ಎಂದೂ ಅವರು ಹೇಳಿದರು.

ನೌಕಾಪಡೆ 2011ರಲ್ಲಿ 3000 ಕೋಟಿ ರೂ.ಗಳ ಈ ಕಾಂಟ್ರಾಕ್ಟನ್ನು ಪಿಪಾವಾವ್ ಡಿಫೆನ್ಸ್ ಅಂಡ್ ಆಫ್‌ಶೋರ್ ಇಂಜಿನಿಯರಿಂಗ್ ಕಂಪನಿಗೆ ಕೊಟ್ಟಿತ್ತು. 2015ರಿಂದ ಗಸ್ತು ನೌಕೆಗಳ ಡೆಲಿವರಿ ಆರಂಭಿಸಬೇಕಿತ್ತು. 2016ರಲ್ಲಿ ಅನಿಲ್ ಅಂಬಾನಿ ಗುಂಪು ಈ ಕಂಪನಿಯನ್ನು ಖರೀದಿಸಿತು. ಆದರೂ ಇದುವರೆಗೂ ಒಂದೇ ಒಂದು ಗಸ್ತು ನೌಕೆ ಭಾರತೀಯ ನೌಕಾಪಡೆಗೆ ಸಿಕ್ಕಿಲ್ಲ.

3000 ಕೋಟಿ ರೂ. ಕಾಂಟ್ರಾಕ್ಟನ್ನು ಇನ್ನೂ ಕೈಗೆತ್ತಿಕೊಳ್ಳಲಾರದ ಇಂತಹ 'ದಕ್ಷತೆ'ಯ ಅಮೋಘ ದಾಖಲೆಯಿರುವ ಗುಂಪಿನ ಇನ್ನೊಂದು ಹೊಸ ಕಂಪನಿಗೆ ರಫೆಲ್ ಯುದ್ಧವಿಮಾನಕ್ಕೆ ಸಂಬಂಧಪಟ್ಟ 58000 ಕೋಟಿ ರೂ.ಗಳ ಕಾಂಟ್ರಾಕ್ಟ್ ಸಿಗುತ್ತಿರುವ ವಿವಾದದ ಹಿನ್ನೆಲೆಯಲ್ಲಿ ಇದು ಎಲ್ಲರ ಗಮನ ಸೆಳೆದಿದೆ.

ಈ ನಡುವೆ ಆ ರಫೆಲ್ ವ್ಯವಹಾರದಿಂದ ಇದೇ ಸರಕಾರದ ಪ್ರಕಾರವೇ 'ಅಗತ್ಯ ಸಾಮರ್ಥ್ಯ ಇಲ್ಲ' ಎಂದು ಹೊರದಬ್ಬಲ್ಪಟ್ಟಿರುವ ಹಿಂದುಸ್ಥಾನ್ ಏರೊನಾಟಿಕ್ಸ್ ಲಿಮಿಟೆಡ್(ಹೆಚ್‌ಎಎಲ್) 2017–18ರಲ್ಲಿ ಅತ್ಯಂತ ಹೆಚ್ಚಿನ ವ್ಯವಹಾರವನ್ನು ದಾಖಲಿಸಿದೆ ಎಂದು ಅದರ ಅಧ್ಯಕ್ಷರು ಹೇಳಿದ್ದಾರೆ. ಹಿಂದಿನ ವರ್ಷ 17,60,379 ಲಕ್ಷ ರೂ.ಗಳ ವಹಿವಾಟು ನಡೆಸಿದ್ದರೆ, ಮಾರ್ಚ್ 2018ಕ್ಕೆ ಮುಗಿದ ಹಣಕಾಸು ವರ್ಷದಲ್ಲಿ ಅದು 18,28,386 ಲಕ್ಷಕ್ಕೆ ಏರಿದೆ. ತೆರಿಗೆ–ಪೂರ್ವ ಲಾಭ 3,32,284 ಲಕ್ಷ ರೂ.ಗಳಾದರೆ, ತೆರಿಗೆ ಕೊಟ್ಟ ನಂತರದ ಲಾಭ 2,07,041 ಲಕ್ಷ ರೂ. ಅಂದರೆ ಸುಮಾರು 1.250 ಕೋಟಿ ರೂ. ತೆರಿಗೆಯ ರೂಪದಲ್ಲಿ ಸರಕಾರದ ಖಜಾನೆ ಸೇರಿದೆ.

ಭಾರತೀಯ ವಾಯುಪಡೆ ಹೆಚ್‌ಎಎಲ್‌ನ ಈ ಸಾಧನೆಗೆ ಅದನ್ನು ಅಭಿನಂದಿಸಿದೆ ಎಂದೂ ವರದಿಯಾಗಿದೆ. ಪ್ರಧಾನಿಗಳು, ರಕ್ಷಣಾಮಂತ್ರಿಗಳು ಅಭಿನಂದಿಸಿರುವ ಸುದ್ದಿಯೇನೂ ಇಲ್ಲ.

ನೀರವ್ ಮೋದಿ, ಮೆಹುಲ್ ಚೊಕ್ಸಿ ವ್ಯವಹಾರಗಳ ಬಗ್ಗೆ ಎಂಟು ತಿಂಗಳ ಮೊದಲೇ ಆದಾಯ ತೆರಿಗೆ ಇಲಾಖೆಗೆ ಅವ್ಯವಹಾರಗಳ ಸುಳಿವು ಸಿಕ್ಕಿತ್ತು. ಆದರೆ ಅವನ್ನು ಗಂಭೀರ ವಂಚನೆಗಳ ತನಿಖಾ ಕಚೇರಿ(ಎಸ್‌ಎಫ್‌ಐಒ), ಜಾರಿ ನಿರ್ದೇಶನಾಲಯ(ಇಡಿ), ಸಿಬಿಐ ಮತ್ತು ರೆವಿನ್ಯೂ ಗುಪ್ತಚರ ನಿರ್ದೇಶನಾಲಯ(ಡಿಆರ್‌ಐ)ಗೆ ನೀಡಿರಲಿಲ್ಲ– ಸುದ್ದಿ 1

ದೇಶದಿಂದ ಪರಾರಿಯಾಗಿರುವ ಉದ್ಯಮಿ ನೀರವ್ ಮೋದಿ ವಿಚಾರಣೆಗೆಂದು ಭಾರತಕ್ಕೆ ಬಂದರೆ ಅವರ ಲಿಂಚಿಂಗ್ ಆಗಬಹುದು ಎಂದು ಆತನ ವಕೀಲರು ವಿಶೇಷ ನ್ಯಾಯಾಲಯಕ್ಕೆ ಹೇಳಿದ್ದಾರೆ–ಸುದ್ದಿ 2



ದಲಿತ ಬಿಜೆಪಿ ಸಂಸದರುಗಳ "ಮನದ ಮಾತು"ಗಳು!

ದಲಿತರು ಮತ್ತು ಬುಡಕಟ್ಟು ಜನಗಳ ಮೀಸಲಾತಿ ಅಪಾಯದಲ್ಲಿದೆ. ಕಾಂಟ್ರಾಕ್ಟ್ ವ್ಯವಸ್ಥೆ ಹೆಚ್ಚಾಗಿದೆ, ಹೊರಗುತ್ತಿಗೆ ಎಷ್ಟು ಹೆಚ್ಚಿದೆಯೆಂದರೆ ದೇಶದಲ್ಲಿ ಭಾರೀ ನಿರುದ್ಯೋಗ ಇದೆ, ಮೀಸಲಾತಿ 80–90ಶೇ. ಮುಗಿದೇ ಹೋಗಿದೆ. ಇದನ್ನು ನಾನು ಪಕ್ಷದ ವೇದಿಕೆಗಳಲ್ಲಿ ಎತ್ತಿದ್ದೇನೆ. ಆದರೆ ಕಿವಿಗೆ ಹಾಕಿಕೊಂಡಿಲ್ಲ" ಹೀಗೆಂದು ದಲಿತ ಸಮುದಾಯಕ್ಕೆ ಸೇರಿದ ಬಿಜೆಪಿ ಸಂಸದ ಉದಿತ್ ರಾಜ್ ಬಿಬಿಸಿ ನ್ಯೂಸ್‌ಗೆ ಹೇಳಿದ್ದಾರೆ.

"ಆರೆಸ್ಸೆಸ್ ಮತ್ತು ಬಿಜೆಪಿ ಸಂವಿಧಾನವನ್ನು ಮತ್ತು ಮೀಸಲಾತಿಯನ್ನು ಮುಗಿಸಿ ಬಿಡಲು ಸಂಪೂರ್ಣ ಸಿದ್ಧತೆ ಮಾಡಿದ್ದಾರೆ. ಅಭಿವೃದ್ಧಿಯ ಬದಲು ಹಿಂದು–ಮುಸ್ಲಿಂ, ಭಾರತ–ಪಾಕಿಸ್ತಾನ, ಮಂದಿರ–ಮಸೀದಿ, ಭಯಗಳನ್ನು ಕೆದಕುತ್ತಿದ್ದಾರೆ. ದ್ವೇಷ ಹರಡುತ್ತಿದ್ದಾರೆ, ಕೋಮು ಸೌಹಾರ್ದವನ್ನು ಧ್ವಂಸ ಮಾಡುತ್ತಿದ್ದಾರೆ, ಸಮಾಜವನ್ನು ಒಡೆಯುತ್ತಿದ್ದಾರೆ" ಎಂದು ಉತ್ತರಪ್ರದೇಶದ ಬಹರಾಯಿಚ್‌ನಿಂದ ಚುನಾಯಿತರಾಗಿರುವ ಬಿಜೆಪಿ ಸಂಸದೆ ಸಾವಿತ್ರಿಬಾಯಿ ಫುಲೆ ಹೇಳಿದ್ದಾರೆ. ಈ ಹಿಂದೆಯೂ ಮೋದಿ ಸರಕಾರದ ದಲಿತ–ವಿರೋಧಿ ನಿಲುವುಗಳನ್ನು ಈಕೆ ಬಲವಾಗಿ ಖಂಡಿಸಿದ್ದರು.

ಕೊನೆಗೂ, ಈಕೆ ಡಿಸೆಂಬರ್ 6ರಂದು, ಡಾ. ಅಂಬೇಡ್ಕರ್ ಪರಿನಿರ್ವಾಣ ದಿನದಂದು, ಮತ್ತು ಕಾವಿಪಡೆಗಳು ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದ ದಿನದಂದು ಬಿಜೆಪಿಗೆ ರಾಜೀನಾಮೆ ನೀಡಿದ್ದಾರೆ ಎಂದು ವರದಿಯಾಗಿದೆ. ಉದಿತ್ ರಾಜ್ ಇನ್ನೂ ಅಲ್ಲೇ ಇದ್ದಾರೆ. ಆದರೆ ಇವರಿಬ್ಬರೂ ಬಿಜೆಪಿಯಿಂದ ಯಾವ ನಿರೀಕ್ಷೆ/ಭ್ರಮೆಯೊಂದಿಗೆ ಸ್ಪರ್ಧಿಸಿದ್ದರು ಎಂದು ಮಾತ್ರ ತಿಳಿದಿಲ್ಲ.

ಜಾಗತಿಕವಾಗಿ ನಿಜ ಸಂಬಳ ಏರಿದೆಯೇ?



ಜಾಗತಿಕವಾಗಿ ನಿರುದ್ಯೋಗ ಸುಮಾರು ಅರ್ಧದಷ್ಟು ಇಳಿದರೂ ಹಣ ಲೆಕ್ಕದ ಕೂಲಿ ದರ ಬೆಳೆಯದಿರುವುದು ಹೇಗೆ? ಈ ವಿದ್ಯಮಾನದ ಬಗ್ಗೆ ತಬ್ಬಿಬ್ಬಾಗಿರುವ ಐಎಲ್‌ಓ, ಹೀಗಾಗಿರಬಹುದು ಎಂಬ ಕೆಲವು ಊಹನೆಗಳನ್ನು ಮುಂದಿಟ್ಟಿದೆ. ಇವು ಒಪ್ಪಲರ್ಹವಲ್ಲ. ಈ ವಿದ್ಯಮಾನದ ವಿವರಣೆ ಬೇರೆಯೇ ಇದೆ. ಸಾಧ್ಯತೆಯ ಎರಡು ಅಂಶಗಳನ್ನು ಹೇಳಬಹುದು. ಮುಂದುವರೆದ ದೇಶಗಳಲ್ಲಿ ಆರ್ಥಿಕ ಚಟುವಟಿಕೆಗಳು ಬಲಗೊಳ್ಳುತ್ತಿವೆ ಎಂಬ ಹೇಳಿಕೆಗಳು ಅತಿ ಉತ್ಪ್ರೇಕ್ಷೆಯಿಂದ ಕೂಡಿವೆ ಎಂಬುದು ಮೊದಲನೆಯ ಅಂಶ. ಇತ್ತೀಚಿನ ವರ್ಷಗಳಲ್ಲಿ ಟ್ರೇಡ್ ಯೂನಿಯನ್‌ಗಳ ಮೇಲೆ ನಡೆಯುತ್ತಿರುವ ಘೋರ ದಾಳಿಗಳಿಂದಾಗಿ ಕಾರ್ಮಿಕರ ಚೌಕಾಸಿ ಸಾಮರ್ಥ್ಯ ಕುಗ್ಗಿರುವುದು ಎರಡನೆಯ ಅಂಶ. ಐಎಲ್‌ಓ ವರದಿ, ನವ-ಉದಾರವಾದದ ಆಳ್ವಿಕೆಯಡಿಯಲ್ಲಿ ಕಾರ್ಮಿಕರ ಮೇಲೆ ನಡೆಯುತ್ತಿರುವ ಹಲ್ಲೆ ಮತ್ತು ನವ-ಉದಾರವಾದವನ್ನು ಸತತವಾಗಿ ಪೀಡಿಸುತ್ತಿರುವ ಬಿಕ್ಕಟ್ಟಿನ ಮುಂದುವರಿಕೆ ಈ ಎರಡೂ ಅಂಶಗಳನ್ನು, ಮೆಲುದನಿಯಲ್ಲಾದರೂ, ಪ್ರಸ್ತಾಪಿಸಿದೆ.

ಪ್ರೊ. ಪ್ರಭಾತ್ ಪಟ್ನಾಯಕ್, ಅನು: ಕೆ.ಎಂ.ನಾಗರಾಜ್

ವಿಶ್ವ ಶ್ರಮ ಸಂಘಟನೆಯು(ಐಎಲ್‌ಓ) 2018–19ರ ಜಾಗತಿಕ ಕೂಲಿ ವರದಿಯನ್ನು ಪ್ರಕಟಿಸಿದೆ. ವರ್ಷ 2017ಕ್ಕೆ ಸಂಬಂಧಿಸಿದ ಈ ವರದಿಯಲ್ಲಿ, ಜಾಗತಿಕವಾಗಿ ಎಷ್ಟರ ಮಟ್ಟಿಗೆ ನಿಜ ಕೂಲಿಗಳು ಬೆಳೆದಿವೆ ಎಂಬುದರ ಬಗ್ಗೆ ವಿವರವಾದ ಅಂಕಿ ಅಂಶಗಳಿವೆ (ನಿಜ ಕೂಲಿ ಅಂದರೆ, ಬೆಲೆ ಏರಿಕೆಯ ಕಾರಣದಿಂದ ಕೂಲಿಯಲ್ಲಿ ಇಳಿಕೆಯಾದ ಕೊಳ್ಳುವ ಶಕ್ತಿಯ ಪ್ರಮಾಣವನ್ನು ಬಿಂಬಿಸುವಂತೆ ಮರು ಲೆಕ್ಕ ಹಾಕಿದ ಕೂಲಿ–ಅನು). ಐಎಲ್‌ಓ ವರದಿಯ ಪ್ರಕಾರ, ಜಾಗತಿಕವಾಗಿ ನಿಜ ಕೂಲಿಗಳು 2017ರಲ್ಲಿ ಶೇ.1.8ರಷ್ಟು ಏರಿವೆ. ಈ ಏರಿಕೆಯ ಪ್ರಮಾಣವು, 2016ರಲ್ಲಿ ಶೇ.2.4 ಮತ್ತು 2008ರ ಮೊದಲು ಏರಿಕೆಯಾಗುತ್ತಿದ್ದ ಪ್ರಮಾಣಕ್ಕಿಂತ ಕಡಿಮೆ ಇದೆ. ಅಷ್ಟೇ ಅಲ್ಲದೆ, 2017ರ ಜಾಗತಿಕ ನೈಜ ಕೂಲಿಯ ಶೇ.1.8ರ ಸರಾಸರಿ ಏರಿಕೆಯಲ್ಲಿ, ಚೀನಾವನ್ನು ಹೊರಗಿಟ್ಟರೆ, ಉಳಿದ ದೇಶಗಳ ಏರಿಕೆಯು ಕೇವಲ ಶೇ.1.1 ಅಷ್ಟೇ. ಇದೇ ರೀತಿಯ ಹೋಲಿಕೆಯ ಪ್ರಕಾರ, 2016ರಲ್ಲಿ, ಇದು ಶೇ.1.8 ಇತ್ತು.

ಐಎಲ್‌ಓ ಪ್ರಕಟಿಸಿರುವ ಈ ಅಂಕಿ ಅಂಶಗಳು ಮುಂದುವರೆದ ದೇಶಗಳಲ್ಲಿ ವಾಸ್ತವವಾಗಿ ಕೂಲಿ ಸ್ಥಗಿತವಾಗಿದೆ ಎಂಬ ಅಂಶವನ್ನು ತಿಳಿಸುತ್ತವೆ. ಜಿ–20 ದೇಶಗಳಲ್ಲಿ ನಿಜ ಕೂಲಿಯ ಏರಿಕೆ 2007ರಲ್ಲಿ ಕೇವಲ 0.4% ಇತ್ತು. ಇದು, 2016ರಲ್ಲಿದ್ದ 0.9% ಮತ್ತು 2015ರಲ್ಲಿದ್ದ 1.7%ಗಿಂತ ಕೆಳಗಿದೆ. ಯೂರೋಪಿನಲ್ಲಿ, ಪೂರ್ವ ಯೂರೋಪಿನ ದೇಶಗಳನ್ನು ಹೊರತುಪಡಿಸಿದರೆ, 2007ರಲ್ಲಿ, ನಿಜ ಕೂಲಿಯ ಏರಿಕೆ ಅಕ್ಷರಶಃ ಶೂನ್ಯ. ಈ ದೇಶಗಳಲ್ಲಿ, ನೈಜ ಕೂಲಿಯ ಏರಿಕೆ 2016ರಲ್ಲಿ 1.3% ಮತ್ತು 2015ರಲ್ಲಿ 1.6% ಇತ್ತು. ಅಮೇರಿಕಾದಲ್ಲಿ ನೈಜ ಕೂಲಿಯ ಏರಿಕೆಯ ಪ್ರಮಾಣವು, 2007ರಲ್ಲಿ 0.7%, 2016ರಲ್ಲಿ 0.7%, ಮತ್ತು 2015ರಲ್ಲಿ 2.2% ಇತ್ತು.

ಮುಂದುವರೆದ ದೇಶಗಳಲ್ಲಿ ನಿಜ ಕೂಲಿ ಸ್ಥಗಿತವಾಗಿರುವ ಅಂಶವು ಎದ್ದು ಕಾಣುತ್ತದೆ. ಏಕೆಂದರೆ, ಇತ್ತೀಚಿನ ವರ್ಷಗಳಲ್ಲಿ ಈ ದೇಶಗಳಲ್ಲಿ ನಿರುದ್ಯೋಗ ಇಳಿದಿದೆ ಮತ್ತು ಆರ್ಥಿಕ ಚಟುವಟಿಕೆಗಳು ಬಲಗೊಂಡಿವೆ ಎಂಬ ಮಾತುಗಳು ಗಟ್ಟಿಯಾಗಿ ಕೇಳಿಬರುತ್ತಿದ್ದವು. ಉದಾಹರಣೆಗೆ, ಅಮೇರಿಕಾದಲ್ಲಿ ಈಗಿರುವ 3.7% ನಿರುದ್ಯೋಗವು ಕಳೆದ 49 ವರ್ಷಗಳಲ್ಲೇ ಅತಿ ಕಡಿಮೆಯದು ಎಂದು ಹೇಳಲಾಗುತ್ತಿದೆ. ಆದರೆ, ಅತಿ ಕಡಿಮೆ ಮಟ್ಟದ ನಿರುದ್ಯೋಗ ಇರುವಾಗ, ನಿಜ ಕೂಲಿಯ ಏರಿಕೆ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ ಇರುವುದು ಹೇಗೆ ಸಾಧ್ಯ?

ಈ ಸಂದರ್ಭದಲ್ಲಿ ಎರಡು ಅಂಶಗಳನ್ನು ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಮೊದಲನೆಯದು, ಐಎಲ್‌ಓ ತಿಳಿಸುವ ಈ ಅಂಕಿ ಅಂಶಗಳು ತಿಂಗಳ ಒಟ್ಟು ಕೂಲಿ ದರವನ್ನು ಆಧರಿಸಿವೆ, ಗಂಟೆ ಆಧಾರಿತ ಕೂಲಿ ದರವನ್ನಲ್ಲ. ನಿಜ ಕೂಲಿಯಲ್ಲಿ ವರ್ಷ ವರ್ಷಗಳಲ್ಲಿ ಆದ ಬದಲಾವಣೆಯನ್ನು ಲೆಕ್ಕ ಹಾಕುವಾಗ, ಒಂದು ತಿಂಗಳಲ್ಲಿ ಕೆಲಸ ಮಾಡಿದ ಗಂಟೆಗಳೆಷ್ಟು ಮತ್ತು ಕೂಲಿ ದರ ಗಂಟೆಗೆಷ್ಟು ಎಂಬುದನ್ನು ಪರಿಗಣಿಸಲಾಗುತ್ತಿತ್ತು. ನಿರುದ್ಯೋಗ ಇಳಿಯುತ್ತಿದೆ ಎನ್ನುವ ಈ ಕಾಲಾವಧಿಯಲ್ಲಿ, ಒಬ್ಬ ಕೆಲಸಗಾರನಿಗೆ ಒಂದು ತಿಂಗಳಲ್ಲಿ ಸಿಗುವ ಗಂಟೆಗಳ ಸರಾಸರಿ ಅವಧಿಯೂ ಹೆಚ್ಚಬೇಕಾಗುತ್ತದೆ. ಒಂದು ವೇಳೆ, ಮುಂದುವರೆದ ದೇಶಗಳಲ್ಲಿ ನಿಜ ಕೂಲಿಯ ಏರಿಕೆ 2007ರಲ್ಲಿ ಅತಿ ಕಡಿಮೆ ಇದ್ದರೆ ಮತ್ತು ಒಂದು ತಿಂಗಳಲ್ಲಿ ಪ್ರತಿ ಕೆಲಸಗಾರನ ಗಂಟೆಗಳ ಸರಾಸರಿ ಅವಧಿ ಹೆಚ್ಚಿದ್ದರೆ, ಆಗ, ಗಂಟೆ ದರದ ನಿಜ ಕೂಲಿ ಇಳಿದಿರುತ್ತದೆ. ಆದ್ದರಿಂದ ಶ್ರಮ ಮಾರುಕಟ್ಟೆ ಬಿಗಿಯಾಗುತ್ತಿದೆ ಎಂದು ಐಎಲ್‌ಓ ಹೇಳುತ್ತಿರುವ ಈ ಅವಧಿಯಲ್ಲಿ, ಗಂಟೆ ದರದ ನೈಜ ಕೂಲಿ ಇಳಿದಿರುವ ಅಂಶವು ಕುತೂಹಲ ಕೆರಳಿಸುತ್ತದೆ.

ಎರಡನೆಯದಾಗಿ, ಬೆಲೆ ಏರಿಕೆಯ ಕಾರಣದಿಂದ ಹಣ ಕೂಲಿಯ ಮೊತ್ತ ಹೆಚ್ಚುವ ಅಂಶವನ್ನು ನಿಜ ಕೂಲಿಯ ಬೆಳವಣಿಗೆಯ ದರ ಲೆಕ್ಕ ಹಾಕುವಾಗ ಪರಿಗಣಿಸಲಾಗುತ್ತದೆ. ತೈಲದಂತಹ ಕಚ್ಚಾ ಪದಾರ್ಥಗಳ ಬೆಲೆ ಏರಿಕೆ ಅಥವಾ ತಮ್ಮ ತಮ್ಮಲ್ಲೇ ಒಳಸಂಚು ಮಾಡಿ ಬಂಡವಾಳಿಗರು ಲಾಭ ಹೆಚ್ಚಿಸಿಕೊಳ್ಳುವುದು ಇಂತಹ ಅಂಶಗಳ ಕಾರಣದಿಂದಾಗಿ, ಕೂಲಿ ದರ ಚೌಕಾಸಿಯ ನಂತರ ಹಣದ ಲೆಕ್ಕದಲ್ಲಿ ದೊರೆಯುವ ಕೂಲಿಯ ಹೆಚ್ಚಳವು ನಿಜ ಕೂಲಿಯಲ್ಲಿ ಏರಿಕೆಯಾಗದ ಸಾಧ್ಯತೆಗಳೂ ಇವೆ. ನಿರುದ್ಯೋಗ ಇಳಿಯುತ್ತಿದೆ ಎಂದು ಹೇಳುವ ಈ ಅವಧಿಯಲ್ಲಿ, ಹಣ ಕೂಲಿಯ ಹೆಚ್ಚಳವೂ ಆಗಿಲ್ಲ ಎಂಬುದನ್ನು ಐಎಲ್‌ಓ ಅಂಕಿ ಅಂಶಗಳು ಸೂಚಿಸುತ್ತವೆ. ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ನಿಜ ಕೂಲಿಯ ದರದ ಅಂಕಿ ಅಂಶಗಳಿಗೆ ಎದುರಾಗಿ ಹಣದ ಲೆಕ್ಕದಲ್ಲಿ ದೊರೆಯುವ ಕೂಲಿಯ ದರದ ಅಂಕಿ ಅಂಶಗಳನ್ನೂ ನೋಡಿದಾಗ, ಶ್ರಮ ಮಾರುಕಟ್ಟೆ ಬಿಗಿಯಾಗುತ್ತಿದೆ ಎಂದು ಹೇಳಲು ಆಧಾರವಿಲ್ಲ.

ಉದಾಹರಣೆಗೆ, ಅಮೇರಿಕಾದಲ್ಲಿ, ಹಣ ಲೆಕ್ಕದ ಕೂಲಿ ದರದ ಬೆಳವಣಿಗೆಯು 2014ರಲ್ಲಿ ಅದರ ಹಿಂದಿನ ವರ್ಷಕ್ಕಿಂತ 2.4%ರಷ್ಟು ಹೆಚ್ಚಿಗೆ ಇತ್ತು. ನಂತರದ ಮೂರು ವರ್ಷಗಳಲ್ಲಿ, ಕೂಲಿ ದರದ ಬೆಳವಣಿಗೆಯು, ಅನುಕ್ರಮವಾಗಿ, 2.3%, 1.95% ಮತ್ತು 2.69% ಇತ್ತು. ಅಂದರೆ, ಹಣ ಲೆಕ್ಕದ ಕೂಲಿ ದರದಲ್ಲಿ ಹೇಳಿಕೊಳ್ಳುವಂತಹ ಹೆಚ್ಚಳವಿರಲಿಲ್ಲ. ಆದರೆ, ಜನವರಿ 2014ರಲ್ಲಿದ್ದ 6.6% ನಿರುದ್ಯೋಗದ ಪ್ರಮಾಣವು ಅಕ್ಟೋಬರ್ 2017ರ ಹೊತ್ತಿಗೆ 3.7%ಗೆ ಇಳಿದಿದೆ. ಹಾಗಾದರೆ, ನಿರುದ್ಯೋಗ ಸುಮಾರು ಅರ್ಧದಷ್ಟು ಇಳಿದರೂ ಹಣ ಲೆಕ್ಕದ ಕೂಲಿ ದರ ಬೆಳೆಯದಿರುವುದು ಹೇಗೆ?

ಈ ವಿದ್ಯಮಾನದ ಬಗ್ಗೆ ತಬ್ಬಿಬ್ಬಾಗಿರುವ ಐಎಲ್‌ಓ, ಹೀಗಾಗಿರಬಹುದು ಎಂಬ ಕೆಲವು ಕಲ್ಪನೆಗಳನ್ನು ಮುಂದಿಟ್ಟಿದೆ. ಇವು ಒಪ್ಪಲರ್ಹವಲ್ಲ. ಉದಾಹರಣೆಗೆ, 2007ರಲ್ಲಿ ನಿಜ ಕೂಲಿ ಏರಿಕೆಯಾಗದಿರಲು ಶ್ರಮ ಉತ್ಪಾದಕತೆಯ ಮಟ್ಟ ಕೆಳಗಿಳಿದದ್ದೂ ಒಂದು ಕಾರಣವಾಗಿರಬಹುದು ಎಂದು ಐಎಲ್‌ಓ ಹೇಳುತ್ತದೆ. ಈ ವಿವರಣೆಯು ನಿಜ ಕೂಲಿಯ ದರದ ನಿಧಾನ ಗತಿಯನ್ನು ಸೂಚಿಸುತ್ತದೆ ಎಂದರೂ, ವಾಸ್ತವವಾಗಿ ನಿಜ ಕೂಲಿಯ ದರ ಸ್ಥಗಿತಗೊಂಡದ್ದಕ್ಕೆ ಅದು ವಿವರಣೆಯಾಗುವುದಿಲ್ಲ. ಏಕೆಂದರೆ, ಶ್ರಮ ಉತ್ಪಾದಕತೆಯು ಎಷ್ಟೇ ಕೆಳಗಿನ ಮಟ್ಟದ್ದಾಗಿದ್ದರೂ ಅದು ಯಾವಾಗಲೂ ನಿಜ ಕೂಲಿಯ ದರದ ಮಟ್ಟಕ್ಕಿಂತ ಹೆಚ್ಚಿನದೇ ಇರುತ್ತದೆ. ಒಂದು ವೇಳೆ, ಶ್ರಮ ಉತ್ಪಾದಕತೆಯ ಮಟ್ಟವು 3%ನಿಂದ 2%ಗೆ ಇಳಿದರೆ, ನಿಜ ಕೂಲಿಯ ಬೆಳವಣಿಗೆಯೂ 3%ನಿಂದ 2%ಗೆ ಇಳಿದದ್ದನ್ನು ಅರ್ಥಮಾಡಿಕೊಳ್ಳಬಹುದು. ಆದರೆ, ಶ್ರಮ ಉತ್ಪಾದಕತೆಯ ಮಟ್ಟವು ಸೊನ್ನೆಗಿಂತ ಉನ್ನತವಾಗಿರುವಾಗ, ನಿಜ ಕೂಲಿಯ ಏರಿಕೆಯು ಸೊನ್ನೆಗೆ ಅತಿ ಸಮೀಪದಲ್ಲಿರುವುದು ಹೇಗೆ?

ಈ ವಿದ್ಯಮಾನದ ವಿವರಣೆ ಬೇರೆಯೇ ಇದೆ. ಸಾಧ್ಯತೆಯ ಎರಡು ಅಂಶಗಳನ್ನು ಇಲ್ಲಿ ಮಂಡಿಸಬಹುದು. ಮುಂದುವರೆದ ದೇಶಗಳಲ್ಲಿ ಆರ್ಥಿಕ ಚಟುವಟಿಕೆಗಳು ಬಲಗೊಳ್ಳುತ್ತಿವೆ ಎಂಬ ಹೇಳಿಕೆಗಳು ಅತಿ ಉತ್ಪ್ರೇಕ್ಷೆಯಿಂದ ಕೂಡಿವೆ ಎಂಬುದು ಮೊದಲನೆಯ ಅಂಶ. ಅಮೇರಿಕಾದಲ್ಲಿ ನಿರುದ್ಯೋಗವು ಬಹಳ ಕೆಳಗಿದೆ ಎನ್ನುವಷ್ಟು ಮಟ್ಟಿನ 3.7% ಮಟ್ಟದಲ್ಲಿದೆ ಎಂದು ಹೇಳುವವರು, ಅಲ್ಲಿ ಆರ್ಥಿಕ ಬಿಕ್ಕಟ್ಟು ಆರಂಭವಾಗುವ ಮೊದಲು, ಜನವರಿ 2008ರಲ್ಲಿದ್ದ ಶ್ರಮಿಕ ಶಕ್ತಿಯ ಭಾಗವಹಿಸುವಿಕೆಯ ಪ್ರಮಾಣವು ಶೇ.66.2ರಿಂದ ಅಕ್ಟೋಬರ್ 2017ರ ವೇಳೆಗೆ ಶೇ.62.9ಕ್ಕೆ ಇಳಿದಿದೆ ಎಂಬ ಅಂಶವನ್ನು ಹೇಳುವುದೇ ಇಲ್ಲ. ಒಂದು ವೇಳೆ, ಶ್ರಮಿಕ ಶಕ್ತಿಯ ಭಾಗವಹಿಸುವಿಕೆಯ ಇಳಿಕೆಗೆ “ಶ್ರಮಿಕ ನಿರುತ್ಸಾಹಗೊಂಡ ಪರಿಣಾಮ” ಕಾರಣವಾಗಿತ್ತು ಎಂದು ಭಾವಿಸಿಕೊಂಡು, ನಿರುದ್ಯೋಗದ ಪ್ರಮಾಣವನ್ನು ಇನ್ನೊಮ್ಮೆ ಲೆಕ್ಕ ಹಾಕಿದರೆ, ಅದರ ಮಟ್ಟ ಹೆಚ್ಚು ಎನ್ನಬಹುದಾದ 8.5% ಆಗುತ್ತದೆ. (“ಶ್ರಮಿಕ ನಿರುತ್ಸಾಹಗೊಂಡ ಪರಿಣಾಮ” ಅಂದರೆ, ಉದ್ಯೋಗ ಪಡೆಯಬೇಕೆಂಬ ಹಂಬಲವಿದ್ದರೂ ನಿರುದ್ಯೋಗಿಗಳು ಕೆಲಸ ಹುಡುಕಲು ಉತ್ಸಾಹಪೂರ್ಣವಾಗಿ ತೊಡಗುವುದಿಲ್ಲ, ಕೆಲಸ ಸಿಗುವುದಿಲ್ಲವೆಂಬ ಅನ್ನಿಸಿಕೆಯಿಂದಾಗಿ. ಆದ್ದರಿಂದ, ಉದ್ಯೋಗ ಹುಡುಕುವುದರಲ್ಲಿ ಅವರ ಭಾಗವಹಿಸುವಿಕೆಯ ಪ್ರಮಾಣ ಇಳಿಯುತ್ತದೆ) ಈ ರೀತಿಯಲ್ಲಿ ಭಾವಿಸುವುದು ಸರಿಯಲ್ಲವಾದರೂ, ಶ್ರಮಿಕ ಶಕ್ತಿಯ ಭಾಗವಹಿಸುವಿಕೆಯ ಪ್ರಮಾಣ ಇಳಿದಿರುವ ಪರಿಸ್ಥಿತಿಯಲ್ಲಿ ನಿರುದ್ಯೋಗದ ಪ್ರಮಾಣವು ಕೇವಲ 3.7% ಎಂಬ ಅಂಶವನ್ನು ಅದರ ಮುಖ ಬೆಲೆಯಲ್ಲಿ ಒಪ್ಪಿಕೊಳ್ಳಲಾಗದು. ಶ್ರಮ ಮಾರುಕಟ್ಟೆ ಬಿಗಿಯಾಗಿದೆ ಎಂದು ಭಾವಿಸಿದಾಗ ಮಾತ್ರ ನಿಜ ಕೂಲಿಯ ಸ್ಥಗಿತತೆ ಮತ್ತು ಹಣ ಕೂಲಿಯ ಮಟ್ಟ ಹೆಚ್ಚದಿರುವ ವಿದ್ಯಮಾನಗಳು ನಮ್ಮನ್ನು ತಬ್ಬಿಬ್ಬುಗೊಳಿಸುತ್ತವೆ. ಆದರೆ, ಹೇಳಲಾಗುತ್ತಿರುವ ಮಟ್ಟದಲ್ಲಿ ಶ್ರಮ ಮಾರುಕಟ್ಟೆ ಬಿಗಿಯಾಗಿಲ್ಲ ಎಂದು ಭಾವಿಸಿದಾಗ, ನಿಜ ಕೂಲಿಯ ಸ್ಥಗಿತತೆ ಮತ್ತು ಹಣ ಕೂಲಿಯ ಮಟ್ಟ ಹೆಚ್ಚದಿರುವ ವಿದ್ಯಮಾನಗಳಿಂದ ನಾವು ತಬ್ಬಿಬ್ಬುಗೊಳ್ಳುವುದಿಲ್ಲ. ಐಎಲ್‌ಓ ವರದಿಯೂ ಸಹ ಶ್ರಮ ಮಾರುಕಟ್ಟೆ ಅಷ್ಟೊಂದು ಬಿಗಿಯಾಗಿಲ್ಲದ ಸಾಧ್ಯತೆಯನ್ನೇ ವ್ಯಕ್ತಪಡಿಸಿದೆ.

ಇತ್ತೀಚಿನ ವರ್ಷಗಳಲ್ಲಿ ಟ್ರೇಡ್ ಯೂನಿಯನ್‌ಗಳ ಮೇಲೆ ನಡೆಯುತ್ತಿರುವ ಘೋರ ದಾಳಿಗಳಿಂದಾಗಿ ಕಾರ್ಮಿಕರ ಚೌಕಾಸಿ ಸಾಮರ್ಥ್ಯ ಕುಗ್ಗಿರುವುದು ಎರಡನೆಯ ಅಂಶ. ಸಾಮಾನ್ಯವಾಗಿ, ಹಣ ಕೂಲಿಯ ದರದ ಬೆಳವಣಿಗೆಯು, ಕಾರ್ಮಿಕರ ಚೌಕಾಸಿಯ ಸಾಮರ್ಥ್ಯ ಮತ್ತು ನಿರುದ್ಯೋಗ ದರ ಇವುಗಳನ್ನು ಅವಲಂಬಿಸಿರುತ್ತದೆ. ಒಂದು ವೇಳೆ, ಕಾರ್ಮಿಕರನ್ನು ಕಳಪೆ ಕೂಲಿಯ ಸ್ಥಳಗಳಿಗೆ ಎತ್ತಂಗಡಿ ಮಾಡುವುದೂ ಸೇರಿದಂತೆ ನಾನಾ ರೀತಿಯಲ್ಲಿ ಟ್ರೇಡ್ ಯೂನಿಯನ್‌ಗಳನ್ನು ದುರ್ಬಲಗೊಳಿಸಿದ ಸಮಯದಲ್ಲಿ ನಿರುದ್ಯೋಗ ದರ ಇಳಿದರೂ ಸಹ ಹಣ ಕೂಲಿಯ ದರದ ಹೆಚ್ಚಳವಿರುವುದಿಲ್ಲ.

ಟ್ರೇಡ್ ಯೂನಿಯನ್‌ಗಳನ್ನು ದುರ್ಬಲಗೊಳಿಸಿ, ಕೂಲಿ ಮತ್ತು ಸಾಮಾನ್ಯ ವಸ್ತುಗಳ ಬೆಲೆ ಗಮನಾರ್ಹವಾಗಿ ಏರದಂತೆ ನೋಡಿಕೊಂಡು, ಅರ್ಥವ್ಯವಸ್ಥೆಯ ಚಟುವಟಿಕೆಗಳ ವಿಸ್ತಾರಗೊಳ್ಳುವಿಕೆಯನ್ನು ಖಾತ್ರಿಪಡಿಸಿಕೊಳ್ಳಬಹುದು ಎಂಬುದಕ್ಕೆ ಒಂದು ಅತಿ ಸ್ಪಷ್ಟ ನಿದರ್ಶನವನ್ನು ಯುದ್ಧ ಪೂರ್ವ ಫ್ಯಾಸಿಸ್ಟ್ ಜಪಾನ್ ಒದಗಿಸುತ್ತದೆ. ಶಸ್ತ್ರಾಸ್ತ್ರ ಮತ್ತು ಯುದ್ಧಸಲಕರಣೆಗಳ ತಯಾರಿಕೆಗೆ ಅತಿ ಹೆಚ್ಚು ಹಣ ಖರ್ಚುಮಾಡುವ ಮೂಲಕ ಜಪಾನಿನ ಮಿಲಿಟರಿ ಆಡಳಿತವು ಅರ್ಥವ್ಯವಸ್ಥೆಯನ್ನು ಮಹಾ ಕುಸಿತದ ಅಡ್ಡ ಪರಿಣಾಮಗಳಿಂದ ಪಾರುಮಾಡಿತು. (ವಾಸ್ತವವಾಗಿ, ಈ ಬಗ್ಗೆ, “ಮಿಲಿಟರಿ ಕೀನ್ಸ್ ವಾದ” ಅನುಸರಿಸುವ ಮೂಲಕ ಅರ್ಥವ್ಯವಸ್ಥೆಯನ್ನು ಮಹಾ ಕುಸಿತದ ಅಡ್ಡ ಪರಿಣಾಮಗಳಿಂದ ಪಾರುಮಾಡಿದ ದೇಶಗಳ ಪೈಕಿ ಜಪಾನ್ ಮೊದಲನೆಯದು). ಆದರೆ, ಅಲ್ಪ ನಿರುದ್ಯೋಗದ ಪರಿಸ್ಥಿತಿಯಲ್ಲಿಯೂ ಫ್ಯಾಸಿಸ್ಟ್ ಸ್ವಭಾವದ ಆಡಳಿತವು ಟ್ರೇಡ್ ಯೂನಿಯನ್‌ಗಳನ್ನು ದುರ್ಬಲಗೊಳಿಸಿತ್ತು ಮತ್ತು ಈ ಮೂಲಕವೇ ಅರ್ಥವ್ಯವಸ್ಥೆ ತನ್ನ ಪೂರ್ವಸ್ಥಿತಿಗೆ ಮರಳುವಾಗ ಹಣ ಕೂಲಿಯಲ್ಲಾಗಲಿ ಅಥವಾ ನಿಜ ಕೂಲಿಯಲ್ಲಾಗಲಿ ಏರಿಕೆ ಇರಲಿಲ್ಲ. ಅಮೇರಿಕಾ ಅಥವಾ ಇತರ ಮುಂದುವರೆದ ದೇಶಗಳಲ್ಲಿ ಟ್ರೇಡ್ ಯೂನಿಯನ್‌ಗಳು ಈ ಮಟ್ಟದ ದಾಳಿಗೆ ಒಳಗಾಗಿಲ್ಲ. ಆದರೆ, ಜಾಗತೀಕರಣದ ಆಳ್ವಿಕೆಯಲ್ಲಿ ಟ್ರೇಡ್ ಯೂನಿಯನ್‌ಗಳನ್ನು ದುರ್ಬಲಗೊಳಿಸಲಾಗಿದೆ ಎಂಬುದಂತೂ ನಿಸ್ಸಂಶಯವಾಗಿದೆ.

ಐಎಲ್‌ಓ ವರದಿ, ನವ-ಉದಾರವಾದದ ಆಳ್ವಿಕೆಯಡಿಯಲ್ಲಿ ಕಾರ್ಮಿಕರ ಮೇಲೆ ನಡೆಯುತ್ತಿರುವ ಹಲ್ಲೆ ಮತ್ತು ನವ-ಉದಾರವಾದವನ್ನು ಸತತವಾಗಿ ಪೀಡಿಸುತ್ತಿರುವ ಬಿಕ್ಕಟ್ಟಿನ ಮುಂದುವರಿಕೆ ಈ ಎರಡೂ ಅಂಶಗಳನ್ನು, ಮೆಲುದನಿಯಲ್ಲಾದರೂ, ಪ್ರಸ್ತಾಪಿಸಿದೆ. ●



ಐಎಲ್‌ಓ ಪ್ರಕಟಿಸಿರುವ ಅಂಕಿ ಅಂಶಗಳು ಮುಂದುವರೆದ ದೇಶಗಳಲ್ಲಿ ವಾಸ್ತವವಾಗಿ ಕೂಲಿ ಸ್ಥಗಿತವಾಗಿದೆ ಎಂಬ ಅಂಶವನ್ನು ತಿಳಿಸುತ್ತವೆ. ಜಿ–20 ದೇಶಗಳಲ್ಲಿ ನೈಜ ಕೂಲಿಯ ಏರಿಕೆ 2007 ರಲ್ಲಿ ಕೇವಲ 0.4% ಇತ್ತು. ಇದು, 2016 ರಲ್ಲಿದ್ದ 0.9% ಮತ್ತು 2015 ರಲ್ಲಿದ್ದ 1.7%ಗಿಂತ ಕೆಳಗಿದೆ. ಯೂರೋಪಿನಲ್ಲಿ, ಪೂರ್ವ ಯೂರೋಪಿನ ದೇಶಗಳನ್ನು ಹೊರತುಪಡಿಸಿದರೆ, 2007 ರಲ್ಲಿ, ನಿಜ ಕೂಲಿಯ ಏರಿಕೆ ಅಕ್ಷರಶಃ ಶೂನ್ಯ. ಈ ದೇಶಗಳಲ್ಲಿ, ನೈಜ ಕೂಲಿಯ ಏರಿಕೆ 2016 ರಲ್ಲಿ 1.3% ಮತ್ತು 2015 ರಲ್ಲಿ 1.6% ಇತ್ತು. ಅಮೇರಿಕಾದಲ್ಲಿ ನೈಜ ಕೂಲಿಯ ಏರಿಕೆಯ ಪ್ರಮಾಣವು, 2007 ರಲ್ಲಿ 0.7%, 2016 ರಲ್ಲಿ 0.7%, ಮತ್ತು 2015 ರಲ್ಲಿ 2.2% ಇತ್ತು.

ಅಮೇರಿಕಾದಲ್ಲಿ ಈಗಿರುವ 3.7% ನಿರುದ್ಯೋಗವು ಕಳೆದ 49 ವರ್ಷಗಳಲ್ಲೇ ಅತಿ ಕಡಿಮೆಯದು ಎಂದು ಹೇಳಲಾಗುತ್ತಿದೆ. ಆದರೆ, ಅತಿ ಕಡಿಮೆ ಮಟ್ಟದ ನಿರುದ್ಯೋಗ ಇರುವಾಗ, ನೈಜ ಕೂಲಿಯ ಏರಿಕೆ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ ಇರುವುದು ಹೇಗೆ ಸಾಧ್ಯ?

ಕೇರಳ ಸ್ಥಳೀಯ ಸಂಸ್ಥೆಗಳ ಉಪಚುನಾವಣೆಗಳಲ್ಲಿ ಮಣ್ಣುಮುಕ್ಕಿದ ಬಿಜೆಪಿ

ಶಬರಿಮಲೆ ಹೆಸರಲ್ಲಿ ವಂಚನೆಗೆ ಜನಗಳಿಂದ ತಕ್ಕ ಪ್ರತ್ಯುತ್ತರ

ಕೇರಳದಲ್ಲಿ ಕಳೆದ ವಾರ ನಡೆದ ಸ್ಥಳೀಯ ಸಂಸ್ಥೆಗಳ ಉಪಚುನಾವಣೆಗಳಲ್ಲಿ 39ರಲ್ಲಿ 21ನ್ನು ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ ಗೆದ್ದಿದೆ, ಶಬರಿಮಲೆ ತಮಗೆ ಭಾರೀ ಚುನಾವಣಾ ಪ್ರಯೋಜನ ತರುತ್ತದೆ ಎಂದು ನಂಬಿದ್ದ ಯುಡಿಎಫ್ ಕೇವಲ 11 ಪಡೆದಿದೆ ಮತ್ತು ಅದಕ್ಕೂ ಹೆಚ್ಚಾಗಿ ಬಿಜೆಪಿಗೆ ಕೇವಲ 2 ಸ್ಥಾನಗಳು ಉಳಿದಿವೆ. ವಾಸ್ತವವಾಗಿ ಅದರ ಮತಗಳಿಕೆಯೂ ಇಳಿದಿದೆ! 2015ರಲ್ಲಿ ಅದಕ್ಕೆ ಈ ಕ್ಷೇತ್ರಗಳಲ್ಲಿ 11118 ಮತಗಳು ದೊರೆತಿದ್ದರೆ ಈ ಬಾರಿ ಅದು 9869ಕ್ಕೆ ಇಳಿದಿದೆ. ಯುಡಿಎಫ್ ಮತಗಳಿಕೆಯೂ 26722 ರಿಂದ 26092ಕ್ಕೆ ಇಳಿದಿದೆ. ಎಲ್‌ಡಿಎಫ್ ನ ಮತಗಳಿಕೆ 34324 ರಿಂದ 34780 ಕ್ಕೆ ಹೆಚ್ಚಿದೆ. ಇದೀಗ ಶಬರಿಮಲೆ ತೀರ್ಪು ಮತ್ತು ಎಲ್‌ಡಿಎಫ್ ಸರಕಾರ ಅದರ ಜಾರಿಗೆ ಮುಂದಾಗಿರುವುದು ಬಹುಸಂಖ್ಯಾತರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡಿವೆ ಎಂಬ ಅವರ ಪ್ರಚಾರಕ್ಕೆ ಜನಗಳೇ ತಕ್ಕ ಉತ್ತರ ಕೊಟ್ಟಂತಾಗಿದೆ. ರಾಜ್ಯದ 14 ಜಿಲ್ಲೆಗಳ 27 ಪಂಚಾಯತ್ ವಾರ್ಡುಗಳು, 5 ಬ್ಲಾಕ್ ಪಂಚಾಯತ್ ವಾರ್ಡುಗಳು, 6 ನಗರಸಭಾ ವಾರ್ಡುಗಳು ಮತ್ತು ಒಂದು ಮಹಾನಗರ ಸಭೆಯ ಸೀಟಿಗೆ ಈ ಉಪಚುನಾವಣೆಗಳು ನಡೆದಿವೆ.

ಶಬರಿಮಲೆ ಚಳುವಳಿಯ ಕೇಂದ್ರವಾಗಿದ್ದ ಪಟ್ಟಣಮಿತ್ತ ಪ್ರದೇಶದಲ್ಲಿನ ಉಪಚುನಾವಣೆಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಇಬ್ಬರಿಗೂ ಹಿಂದೂ ವೋಟ್ ಬ್ಯಾಂಕ್ ಪ್ರಯೋಜನ ಸಿಗಬಹುದೆಂಬ ನಿರೀಕ್ಷೆ ಹುಸಿಯಾಗಿದೆ. ಎರಡೂ ಪಕ್ಷಗಳು ಇಲ್ಲಿ ಸೋತಿವೆ. ಈ ಜಿಲ್ಲೆಯ **ಪಂಡಲಂ ನಗರ ಸಭೆಯ ಸೀಟುಗಳಲ್ಲಿ ಬಿಜೆಪಿ ಮೂರು ವಾರ್ಡುಗಳಲ್ಲಿ ಪಡೆದ ಮತಗಳು 19, 12 ಮತ್ತು 7!**

ತ್ರಿಶೂರಿನ ಪರಪ್ಪುಕಾರದಲ್ಲಿ ಬಿಜೆಪಿ ಇದ್ದ ಸೀಟನ್ನೂ ಕಳಕೊಂಡಿದೆ, ಇದನ್ನು ಎಲ್‌ಡಿಎಫ್ ಗೆದ್ದುಕೊಂಡಿದೆ. ವ್ಯಾಪಕ ಪ್ರಮಾಣದಲ್ಲಿ ಅಯ್ಯಪ್ಪ ಮಂತ್ರಘೋಷವನ್ನು ದುರುಪಯೋಗ ಪಡಿಸಿಕೊಳ್ಳಲು ಬಿಜೆಪಿ ಪ್ರಯತ್ನಿಸಿದ ಎರ್ನಾಕುಳಂನ ತ್ರಿಪುನಿತ್ರದಲ್ಲಿಯೂ ಎಲ್‌ಡಿಎಫ್ ಎಲ್ಲ ಐದು ಸೀಟುಗಳನ್ನೂ ಗೆದ್ದುಕೊಂಡಿದೆ. ಇವುಗಳಲ್ಲಿ ಮೂರನ್ನು ಈ ಹಿಂದೆ 2015ರಲ್ಲಿ ಯುಡಿಎಫ್ ಪಡೆದುಕೊಂಡಿತ್ತು.

ಕಾಸರಗೋಡಿನ ಬಿಂಬುಕಲ್‌ನಲ್ಲಿ ಕಳೆದ ಬಾರಿ ಎರಡನೇ ಸ್ಥಾನದಲ್ಲಿದ್ದ ಬಿಜೆಪಿ ಈ ಉಪಚುನಾವಣೆಯಲ್ಲಿ ಮೂರನೇ ಸ್ಥಾನಕ್ಕೆ ಇಳಿದಿದೆ. ಅಲಪುಳದಲ್ಲಿ ಮಾತ್ರ ಬಿಜೆಪಿ ಎರಡು ಸೀಟುಗಳನ್ನು ತನ್ನಂತೆಯೇ ಶಬರಿಮಲೆ ತೀರ್ಪನ್ನು ವಿರೋಧಿಸಿದ ಯುಡಿಎಫ್‌ನಿಂದ ಕಸಿದುಕೊಳ್ಳುವಲ್ಲಿ ಯಶಸ್ವಿಯಾಗಿದೆಯಷ್ಟೇ. ಹಲವೆಡೆಗಳಲ್ಲಿ ಯುಡಿಎಫ್-ಬಿಜೆಪಿ ಬಹಿರಂಗವಾಗಿಯೇ ಎಲ್‌ಡಿಎಫ್ ವಿರುದ್ಧ ಜಂಟಿ ಪ್ರಚಾರ ನಡೆಸಿದವು. ಇನ್ನು ಕೆಲವೆಡೆಗಳಲ್ಲಿ ಎಲ್‌ಡಿಎಫ್‌ನ್ನು ಸೋಲಿಸಲು ಬಿಜೆಪಿ ಮತ್ತು ಅಲ್ಪಸಂಖ್ಯಾತ ಕೋಮುವಾದವನ್ನು ಪ್ರತಿನಿಧಿಸುವ ಎಸ್‌ಡಿಪಿಐ ತಮ್ಮ ಅಭ್ಯರ್ಥಿಗಳನ್ನು ನಿಲ್ಲಿಸದೆ ಯುಡಿಎಫ್‌ಗೆ ಬೆಂಬಲ ನೀಡಿದವು. ಬಿಜೆಪಿ ಮತ್ತು ಯುಡಿಎಫ್ ಕೃಪೆಯಿಂದ ಎಸ್‌ಡಿಪಿಐ ಕೂಡ ಬಿಜೆಪಿಯಂತೆ 2 ಸೀಟುಗಳನ್ನು ಪಡೆದಿದೆ.

ಶಬರಿಮಲೆ ಪ್ರಶ್ನೆಯಲ್ಲಿ ಕಾಂಗ್ರೆಸ್ ಪಕ್ಷ ಬಿಜೆಪಿ ಜತೆಗೆ ನಿಂತದ್ದರ 'ಫಲ' ಎಂದರೆ, ಹಿರಿಯ ಕಾಂಗ್ರೆಸ್ ಮುಖಂಡ ಮತ್ತು ತಿರುವಾಂಕೂರು ದೇವಸ್ವಂ ಮಂಡಳಿಯ ಮಾಜಿ ಅಧ್ಯಕ್ಷ ರಾಮನ್ ನಾಯರ್ ಬಿಜೆಪಿ ಸೇರಿದ್ದಾರೆ. ಕಾಂಗ್ರೆಸ್ ಒಡೆತನದ ಜೈಹಿಂದ್ ಟಿವಿಯ ಮಾಜಿ ಅಧ್ಯಕ್ಷ ವಿಜಯನ್ ಥಾಮಸ್ ಬಿಜೆಪಿ ಕೇಂದ್ರ ಮುಖಂಡತ್ವದೊಂದಿಗೆ 'ಸಮಾಲೋಚನೆ'ಗಳನ್ನು ಆರಂಭಿಸಿದ್ದಾರೆ. ಮತ್ತು ಇತ್ತೀಚೆಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯ ಪಿ ಎಂ ನಿಯಾಸ್ ಕೋಝಿಕೋಡ್‌ನಲ್ಲಿ ಬಿಜೆಪಿ ಏರ್ಪಡಿಸಿದ್ದ ಸಭೆಯನ್ನುದ್ದೇಶಿಸಿ ಮಾತನಾಡಿದ್ದಾರೆ.

ಬುಲಂದ್‌ಶಹರ್‌ನಲ್ಲಿ ಕಾವಲುಕೋರತನದ ಹೊಸ ಘಟ್ಟ: ಪೋಲೀಸ್ ಅಧಿಕಾರಿಯ ಲಿಂಚಿಂಗ್?

ಡಿಸೆಂಬರ್ 3 ರಿಂದ ಉತ್ತರಪ್ರದೇಶದ ಬುಲಂದ್‌ಶಹರ್ ಇಡೀ ದೇಶದ ಗಮನ ಸೆಳೆಯುತ್ತಿದೆ. ಅಂದು ಬೆಳಿಗ್ಯೆ ಕಬ್ಬಿನ ಗದ್ದೆಯಲ್ಲಿ ಕೊಂದ ಹಸುಗಳ ದೇಹಾಂಗಗಳು ಸಿಕ್ಕವು ಎಂಬ ಸುದ್ದಿಯೊಂದಿಗೆ ಭುಗಿಲೆದ್ದ ಹಿಂಸಾಚಾರ ಒಬ್ಬ ದಕ್ಷ ಪೋಲಿಸ್ ಅಧಿಕಾರಿಯನ್ನು ಮತ್ತು ಒಬ್ಬ 21 ವರ್ಷದ ಯುವಕನನ್ನು ಬಲಿ ತೆಗೆದುಕೊಂಡ ಮೇಲೆ ಈಗ ಉತ್ತರಪ್ರದೇಶವನ್ನು ಹೊಸ ಬಿಜೆಪಿ ಮಾದರಿಯಾಗಿಸುತ್ತಿರುವ ವಿದ್ಯಮಾನದ ವಿವಿಧ ರೂಪಗಳನ್ನು ಪ್ರದರ್ಶಿಸುತ್ತಿದೆ.

ಭಜರಂಗ ದಳದ ಜಿಲ್ಲಾಧ್ಯಕ್ಷ ಯೋಗೇಶ್ ರಾಜ್ ನೇತೃತ್ವದಲ್ಲಿ ಟ್ರಾಕ್ಟರಿನಲ್ಲಿ ಗೋವಧೆಯ ಅವಶೇಷಗಳನ್ನು ಪೋಲಿಸ್ ಠಾಣೆಗೆ ಒಯ್ಯಲಾಯಿತು. ಅಲ್ಲಿಗೆ ಕಾನೂನು ವ್ಯವಸ್ಥೆಯನ್ನು ಕಾಪಾಡಲು ಧಾವಿಸಿ ಬಂದ ಪೋಲಿಸ್ ಇನ್ಸ್‌ಪೆಕ್ಟರ್ ಸುಬೋಧ್ ಕುಮಾರ್ ಸಿಂಗ್ ಗಲಭೆಕೋರರನ್ನು ಸಮಾಧಾನ ಪಡಿಸಲು, ಗೋವಧೆಯ ತನಿಖೆ ಮಾಡಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರೂ ಕೇಳದೆ ಹಿಂಸಾಚಾರವನ್ನು ತೀವ್ರಗೊಳಿಸಲಾಯಿತು. ಇದರ ನಡುವೆ ಸುಭೋಧ್ ಕುಮಾರ್ ವಾಹನವನ್ನು ಕಬ್ಬಿನ ಗದ್ದೆಯೆಡೆಗೆ ಬರುವಂತೆ ಮಾಡಿ ಅವರನ್ನು ಗುಂಡಿಕ್ಕಿ ಸಾಯಿಸಲಾಯಿತು ಎಂದು ಒಂದು ವರದಿ ಹೇಳುತ್ತದೆ.

ಪೋಲೀಸ್ ಠಾಣೆಯಲ್ಲಿ ಎರಡು ಎಫ್‌ಐಆರ್‌ಗಳು ದಾಖಲಾದವು. ಒಂದು, ಇನ್ಸ್‌ಪೆಕ್ಟರನ್ನು ಕೊಂದ ಘಟನೆಯ ಬಗ್ಗೆ, ಇದರಲ್ಲಿ ಯೋಗೇಶ್ ರಾಜ್ ಪ್ರಮುಖ ಆರೋಪಿ. ಇನ್ನೊಂದು ಎಫ್‌ಐಆರ್ ಇದೇ ಪ್ರಮುಖ ಆರೋಪಿಯ ದೂರಿನ ಆಧಾರದಲ್ಲಿ ದಾಖಲು ಮಾಡಿದ್ದು! ಅದರಲ್ಲಿ ತಾನು ಗೋಹತ್ಯೆ ಮಾಡುವುದನ್ನು ನೋಡಿರುವುದಾಗಿ ಆತ ಹೇಳಿದ್ದಾನಂತೆ. ಆದರೆ ನಂತರ ತಲೆಮರೆಸಿಕೊಂಡ ಈತ ಕಳಿಸಿದ 'ಸಂದೇಶ'ದಲ್ಲಿ ತನಗೆ ಗೋಹತ್ಯೆಯ ಸುದ್ದಿ ಬಂದ ನಂತರ ಪೋಲಿಸ್ ಠಾಣೆಗೆ ಹೋಗಿ ದೂರು ದಾಖಲಿಸಿದೆ ಎಂದಿದ್ದಾನೆ.

ಇನ್ನೊಂದೆಡೆಯಲ್ಲಿ ಜಿಲ್ಲಾ ಆಡಳಿತ ಮತ್ತು ಪೋಲಿಸ್ ಸಿಬ್ಬಂದಿ ಮತ್ತು ಪ್ರತ್ಯಕ್ಷ ಸಾಕ್ಷಿಗಳ ಪ್ರಕಾರ ಇದು ಈ ಪ್ರದೇಶದಲ್ಲಿ ಕೋಮು ಗಲಭೆಗಳನ್ನು ಸೃಷ್ಟಿಸುವ ಹುನ್ನಾರದ ಭಾಗ. ಮಹಾವ್ ಗ್ರಾಮದಲ್ಲಿ ಹಿಂಸಾಚಾರ ಭುಗಿಲೆದ್ದಾಗ ಅಲ್ಲೇ ಇದ್ದ ತಹಸಿಲ್ದಾರ್‌ರವರ ಪ್ರಕಾರ ಸತ್ತ ದನದ ಮಾಂಸ, ತಲೆ ಮತ್ತು ಚರ್ಮವನ್ನು ಬಟ್ಟೆ ಒಣಗಲು ಹಾಕುವಂತೆ, ಅದು ದೂರದಿಂದಲೂ ಕಾಣುವಂತೆ ನೇತು ಹಾಕಲಾಗಿತ್ತು. ಸಾಮಾನ್ಯವಾಗಿ ಗೋವಧೆ ಮಾಡಿದವರು ಹೀಗೆ ವಿಚಿತ್ರವಾಗಿ ವರ್ತಿಸುವುದಿಲ್ಲ. ಹೀಗೆಂದು ಇನ್ನೊಂದು ವರದಿ ಹೇಳುತ್ತದೆ.

ಈ ನಡುವೆ 40 ಕಿ.ಮೀ. ದೂರದಲ್ಲಿ ನಡೆಯುತ್ತಿರುವ ಮುಸ್ಲಿಮರ ಒಂದು ಧಾರ್ಮಿಕ ಕಾರ್ಯಕ್ರಮಕ್ಕೂ ಇದಕ್ಕೂ ಗಂಟು ಹಾಕುವ ಪ್ರಯತ್ನ ನಡೆಯಿತು. ಇದನ್ನು ಜಿಲ್ಲಾ ಪೋಲಿಸ್ ಇಲಾಖೆ ಬಲವಾಗಿ ನಿರಾಕರಿಸಿತು.

ಇನ್ನು, ಪೊಲಿಸ್ ಇನ್ಸ್‌ಪೆಕ್ಟರ್ ಸುಬೋಧ್ ಕುಮಾರ್ ಸಿಂಗ್ ಕಾವಲುಕೋರ ಪಡೆಗಳು ಲಿಂಚಿಂಗ್ ಆರಂಭಿಸಿದ ದಾದ್ರಿಯ ಮಹಮ್ಮದ್ ಅಕ್ಲಾಕ್ ಕೊಲೆಯ ತನಿಖಾ ಅಧಿಕಾರಿಯಾಗಿದ್ದವರು ಎಂಬ ಸಂಗತಿ ಈ ಘಟನೆಗೆ ಮತ್ತೊಂದು ತಿರುವು ನೀಡಿತು. ಈ ದಕ್ಷ ಮತ್ತು ನೇರ ನಡೆಯ ಅಧಿಕಾರಿ ಕಾವಿ ಪಡೆಗಳ ಒತ್ತಡಕ್ಕೆ ತಲೆ ಬಾಗದಿರುವುದನ್ನು ಕಂಡು ಅವರನ್ನು ಅಲ್ಲಿಂದ ವರ್ಗಾವಣೆ ಮಾಡಲಾಯಿತು. ಆದರೆ ಇಲ್ಲಿಯೂ ಕಾವಲುಕೋರ ಗುಂಪುಗಳ ಚಟುವಟಿಕೆಗಳನ್ನು ತಡೆಯುವಲ್ಲಿ ಅವರು ಯಶಸ್ವಿಯಾಗಿದ್ದರು. ಸ್ಥಳೀಯ ಶಾಸಕ ಮತ್ತು ಎಂಪಿ ಯ ಒತ್ತಡವನ್ನೂ ಎದುರಿಸಿ ಅವರು ತನ್ನ ಕರ್ತವ್ಯ ನೇರವೇರಿಸುತಿತದ್ದುದೇ ಕೊನೆಗೆ ಅವರ ಕೊಲೆಗೆ ಕಾರಣವಾಯಿತು ಎಂದು ಈಗ ಊಹಿಸಲಾಗುತ್ತಿದೆ. ಅವರ ತಂಗಿ ನೇರವಾಗಿಯೇ ಈ ಘಟನೆ ಅವರ ಕೊಲೆಯ ಸಂಚು ಎಂದಿದ್ದಾರೆ. ಕುಟುಂಬದ ಇತರ ಸದಸ್ಯರೂ ಅದರ ಸಾಧ್ಯತೆಯನ್ನು ತಳ್ಳಿ ಹಾಕುವುದಿಲ್ಲ.

ಈ ಘಟನೆಯಲ್ಲಿ ವ್ಯಾಪಕವಾದ ಟೀಕೆಗೆ ಗುರಿಯಾದ ಅಂಶವೆಂದರೆ ರಾಜ್ಯದ ಮುಖ್ಯಮಂತ್ರಿಗಳ ವರ್ತನೆ. ಗಲಭೆ ನಡೆದಾಗ ತೆಲಂಗಾಣ ಮತ್ತು ರಾಜಸ್ಥಾನದಲ್ಲಿ ಚುನಾವಣಾ ಪ್ರಚಾರದಲ್ಲಿ ಇದ್ದ ಅವರು ತಮ್ಮ ಒಬ್ಬ ಪೋಲಿಸ್ ಅಧಿಕಾರಿಯನ್ನೇ ಜನಜಂಗುಳಿ ಸಾಯಿಸಿದ ಸುದ್ದಿ ಕೇಳಿದರೂ ಅದಕ್ಕೆ ಪ್ರತಿಕ್ರಿಯಿಸದೆ ತಮ್ಮ ಪ್ರಚಾರ ಕಾರ್ಯ, ತೆಲಂಗಾಣದಲ್ಲಿ ಹೈದರಾಬಾದಿನ, ಕರೀಂ ನಗರದ ಹೆಸರುಗಳನ್ನು ಬದಲಾಯಿಸುವ ಹುಂಕಾರದಲ್ಲೇ ಮಗ್ನರಾಗಿದ್ದರು. ಪ್ರಚಾರ ಕಾರ್ಯ ಮುಗಿದ ಮೇಲೂ ಈ ಕುರಿತ ಸಭೆ ನಡೆಸಿದ್ದು ಗೋರಖ್‌ಪುರದಲ್ಲಿ ಒಂದು ಲೇಸರ್ ಪ್ರದರ್ಶನದಲ್ಲಿ ಭಾಗವಹಿಸಿದ ನಂತರವೇ ಎನ್ನಲಾಗಿದೆ. ಸಭೆಯ ನಂತರ ನೀಡಿದ ಸರಕಾರದ ಹೇಳಿಕೆಯಂತೂ ಪ್ರಜಾಪ್ರಭುತ್ವವಾದಿಗಳಲ್ಲಿ ಆಕ್ರೋಶವನ್ನೇ ಉಂಟು ಮಾಡಿದೆ. ಇದರಲ್ಲಿ ಗೋವಧೆ ನಡೆಸುವವರ ವಿರುದ್ಧ ಕಾರ್ಯಾಚರಣೆಯನ್ನು ತೀವ್ರಗೊಳಿಸುವ ವಿಚಾರವಿತ್ತೇ ವಿನಹ ಒಬ್ಬ ಪೋಲೀಸ್ ಅಧಿಕಾರಿಯನ್ನು ಹೊಡೆದು ಕೊಂದ ಪ್ರಸ್ತಾಪವೂ ಇರಲಿಲ್ಲ. ಇದಕ್ಕೆ ಎಲ್ಲೆಡೆಯಿಂದ ವ್ಯಕ್ತಗೊಂಡ ಆಕ್ರೋಶದಿಂದಾಗಿ ಕೊಲೆ ಸಂಭವಿಸಿದ ಮೂರು ದಿನಗಳ ನಂತರ ಇನ್ಸ್‌ಪೆಕ್ಟರ್ ಕುಟುಂಬದವರನ್ನು ಕೊನೆಗೂ ಭೇಟಿಯಾಗಿ 'ನ್ಯಾಯ' ಕೊಡಿಸುವುದಾಗಿ ಹೇಳಿದರು, 'ಪರಿಹಾರ'ವನ್ನೂ ಪ್ರಕಟಿಸಿದರು. "ಅವರು ಬದುಕಿದ್ದಾಗ ಬೆದರಿಕೆ ಕರೆಗಳು ಬರುತ್ತಿದ್ದವು. ಅವನ್ನೆಲ್ಲ ಅವರು ದಾಖಲಿಸಿಕೊಳ್ಳುತ್ತಿದ್ದರು. ಈ ದಾಖಲೆಯೆಲ್ಲ ಈಗ ಇಲ್ಲವಾಗಿದೆ. ಏಕೆಂದರೆ ಅವರ ಕೊಲೆಯಾದ ನಂತರ ಅವರ ಮೊಬೈಲ್ ಕಾಣೆಯಾಗಿದೆ" ಎಂದು ಇನ್ಸ್‌ಪೆಕ್ಟರ್ ಅವರ ಪತ್ನಿ ಈ ಭೇಟಿಯ ನಂತರ ಹೇಳಿದ್ದಾರೆ.

ಆದರೆ ಮರುದಿನವೇ ಇನ್ಸ್‌ಪೆಕ್ಟರ್ ಕೊಲೆ ಜನಜಂಗುಳಿಯ ನಡುವೆ ನಡೆದ ಒಂದು ಅಪಘಾತವಷ್ಟೇ ಎಂದು ಮುಖ್ಯಮಂತ್ರಿಗಳೇ ಸ್ವತಃ ಘೋಷಿಸಿ ಬಿಟ್ಟಿದ್ದಾರೆ. ಆದರೆ ಈ ಇಡೀ ಘಟನೆ ಅವರ ಪ್ರಕಾರವೂ ಒಂದು 'ಪಿತೂರಿ', ನಿಜ, ಗೋವಧೆಗಳನ್ನು ಹೆಚ್ಚಿಸುವ ಪಿತೂರಿ! ಅವರ ಬೇಹುಗಾರಿಕೆ ವಿಭಾಗದ ಅಡಿಶನಲ್ ಡೈರೆಕ್ಟರ್ ಜನರಲ್(ಎಡಿಜಿ) ವರದಿಯ ಪ್ರಕಾರವೂ ಇದೊಂದು ಪಿತೂರಿ, ಆದರೆ ತದ್ವಿರುದ್ಧವಾದ ಪಿತೂರಿ! ತಿಕ್ಕಾಟ ಸೃಷ್ಟಿಸುವ ಒಂದು ದೊಡ್ಡ ಪಿತೂರಿಯ ಭಾಗ. ದೂರು ಕೊಟ್ಟ ಭಜರಂಗ ದಳದ ಜಿಲ್ಲಾಧ್ಯಕ್ಷ 'ಕಣ್ಣಾರೆ' ನೋಡಿದನೆನ್ನಲಾದ ದನದ ದೇಹದ ಅವಶೇಷಗಳು ಕನಿಷ್ಟ 48 ಗಂಟೆಗಳ ಹಿಂದೆ ಸಾಯಿಸಿದ ದನದ್ದು, ಮತ್ತು ಬಹುಮಟ್ಟಿಗೆ ಆ ಹಳ್ಳಿಯಲ್ಲಿ ಅದರ ವಧೆಯಾಗಿರಲಿಕ್ಕಿಲ್ಲ ಎಂದೂ ಎಡಿಜಿಯವರ ಈ ವರದಿ ಹೇಳಿದೆಯಂತೆ. ಆ ಜನಜಂಗುಳಿಯಲ್ಲಿ ಹಿಂಸಾಚಾರವನ್ನು ಹೆಚ್ಚಿಸಿ ಪರಿಸ್ಥಿತಿಯನ್ನು ಉಲ್ಬಣಗೊಳಿಸುವ ಉದ್ದೇಶಪೂರ್ವಕ ಪ್ರಯತ್ನದ ಅಂಶಗಳೂ ಇದ್ದವು ಎಂದು ಈ ವರದಿ ಹೇಳಿದೆಯಂತೆ. ದಿ ವೈರ್, ಡಿಸೆಂಬರ್ 7).

ಪೋಲೀಸರು ಒಟ್ಟು 90 ಜನರ ಮೇಲೆ ಕೇಸ್ ಹಾಕಿದ್ದಾರೆ, 28 ಮಂದಿಯನ್ನು ಹೆಸರಿಸಿದ್ದಾರೆ. ಇವರಲ್ಲಿ ಭಜರಂಗ ದಳ, ಬಿಜೆಪಿ ಯುವ ಮೋರ್ಚ ಮತ್ತು ವಿಹೆಚ್‌ಪಿ ಸದಸ್ಯರಿದ್ದಾರೆ. ಆದರೆ ತನಿಖೆ ಗೋವಧೇಯ ದಿಕ್ಕಿನಲ್ಲೇ ಸಾಗುವಂತೆ ಮಾಡಲಾಗುತ್ತಿದೆ ಎಂದು ವರದಿಯಾಗಿದೆ.



750 ಕೆಜಿ ಈರುಳ್ಳಿಗೆ ಕೇವಲ 1064 ರೂ.: ಪ್ರಧಾನಿಗಳಿಗೆ ಕಳಿಸಿದ ರೈತನ ನೋವು-ಸಿಟ್ಟು

ಮಹಾರಾಷ್ಟ್ರದ ನಾಶಿಕ್ ಜಿಲ್ಲೆಯ ಒಬ್ಬ ರೈತ ತಾನು ಬೆಳೆದ 750 ಕೆ.ಜಿ. ಈರುಳ್ಳಿಗೆ ಕೇವಲ 1064 ರೂ. ಮಾತ್ರ ಸಿಕ್ಕಾಗ ಬಹಳವಾಗಿ ಮನನೊಂದು ಅ ಹಣವನ್ನು ಪ್ರಧಾನ ಮಂತ್ರಿಗಳ ವಿಪತ್ತು ಪರಿಹಾರ ನಿಧಿಗೆ ತನ್ನ ದಾನವೆಂದು ಕಳಿಸಿ ಸಿಟ್ಟನ್ನು, ಪ್ರತಿಭಟನೆಯನ್ನು ವ್ಯಕ್ತಪಡಿದ್ದಾರೆ ಎಂದು ಪಿಟಿಐ ವರದಿ ಮಾಡಿದೆ.

ನಾಶಿಕ್ ಜಿಲ್ಲೆಯ ನಿಫಾಡ್ ಗ್ರಾಮದ ರೈತ ಸಂಜಯ್ ಸಾತೆ ಒಟ್ಟು 750 ಕೆ.ಜಿ ಬೆಳೆ ತನ್ನ ಕೈಸೇರಿದಾಗ ಸಂತೋಷದಿಂದ ಅದನ್ನು ಮಾರಾಟ ಮಾಡಲು ಸ್ಥಳೀಯ ಮಾರುಕಟ್ಟೆಗೆ ಕೊಂಡೊಯ್ದಾಗ ಅಲ್ಲಿ ಅವರಿಗೆ ಭಾರೀ ನಿರಾಸೆ ಕಾದಿತ್ತು. ಈರುಳ್ಳಿ ಬೆಲೆ ಕುಸಿದು ಕೆ.ಜಿ ಒಂದು ರೂ. ಮಾತ್ರ ಕೊಡುವುದಾಗಿ ಹೇಳಲಾಯಿತು. ಕೊನೆಗೆ ಕೊಸರಾಡಿ ಕೆ.ಜಿಗೆ 1.40 ರೂ.ಗಳಂತೆ ಮಾರಾಟ ಮಾಡಿದ ಸಂಜಯ್ 750 ಕೆ.ಜಿಯಿಂದ ಒಟ್ಟಾರೆ 1064 ರೂ.ಗಳನ್ನಷ್ಟೇ ಸಂಪಾದಿಸಿದರು. ನಾಲ್ಕು ತಿಂಗಳಿಂದ ಕಷ್ಟಪಟ್ಟು ಬೆಳೆದ ಬೆಳೆಗೆ ಸೂಕ್ತ ಬೆಲೆ ಸಿಗದೆ ಬೇಸತ್ತ ರೈತ ಸಂಜಯ್ ಆ ಹಣವನ್ನು ಪ್ರಧಾನಿಗೆ ಕಳುಹಿಸಿ ಪ್ರತಿಭಟನೆ ಮಾಡಿದ್ದಾರೆ ಎನ್ನಲಾಗಿದೆ.

ಈ ಬಗ್ಗೆ ಡಿಸೆಂಬರ್ 2ರಂದು ಪಿಟಿಐ ಯೊಡನೆ ಮಾತಾಡುತ್ತ ಅವರು "ನಾಲ್ಕು ತಿಂಗಳಿಂದ ಶ್ರಮಪಟ್ಟು ಬೆಳೆದ ಉತ್ತಮ ಫಸಲಿಗೆ ಉತ್ತಮ ಬೆಲೆ ಸಿಗದಾದಾಗ ಬಹಳ ನೋವಾಯಿತು. ಹಾಗಾಗಿ ಹಣವನ್ನು ಪ್ರತಿಭಟನೆಯಾಗಿ ಪ್ರಧಾನಿಗಳ ಪರಿಹಾರ ನಿಧಿಗೆ ದಾನ ಮಾಡಲು ನಾನು ನಿರ್ಧರಿಸಿದೆ. ನಾನು ಯಾವ ರಾಜಕೀಯ ಪಕ್ಷಕ್ಕೂ ಸೇರಿಲ್ಲ. ಆದರೆ ರೈತರ ನೋವು ಸಮಸ್ಯೆಗಳ ಬಗೆಗೆ ಸರಕಾರದ ನಿರ್ಲಕ್ಷ್ಯ ಕಂಡು ಬಹಳ ಸಿಟ್ಟು ಬರುತ್ತದೆ" ಎಂದು ಹೇಳಿದ್ದಾರೆ.

ನವಂಬರ್ 29ರಂದು ನಿಫಾಡ್ ಅಂಚೆ ಕಚೇರಿಯಿಂದ "ನರೇಂದ್ರ ಮೋದಿ, ಭಾರತದ ಪ್ರಧಾನ ಮಂತ್ರಿ" ಹೆಸರಿಗೆ ಮನಿ ಆರ್ಡರ್ ಮಾಡಿದರಂತೆ. ಅದಕ್ಕೆ ತನ್ನ ಕೈಯಿಂದಲೇ ಮತ್ತೆ 54ರೂ. ಖರ್ಚು ಮಾಡಬೇಕಾಯಿತಂತೆ.

ಇನ್ನೊಂದು ಗಮನಾರ್ಹ ಸಂಗತಿಯೆಂದರೆ ಸಂಜಯ್ ಸಾತೆ ಎಂಟು ವರ್ಷಗಳ ಹಿಂದೆ, 2010ರಲ್ಲಿ ಕೇಂದ್ರ ಕೃಷಿ ಸಚಿವಾಲಯ ಆರಿಸಿದ ಕೆಲವೇ 'ಪ್ರಗತಿಪರ ರೈತ'ರಲ್ಲಿ ಒಬ್ಬರು. ಒಂದು ಟೆಲಿಕಾಂ ಕಂಪನಿ ನಡೆಸುತ್ತಿದ್ದ ಕೃಷಿ ಸಲಹೆ ವ್ಯವಸ್ಥೆಯಿಂದ ಹವಾಮಾನ ಬದಲಾವಣೆಯ ಮಾಹಿತಿಗಳನ್ನು ಪಡೆದು ಉತ್ಪಾದನೆ ಹೆಚ್ಚಿಸಿಕೊಳ್ಳುವುದು ತನಗೆ ಸಾಧ್ಯವಾಗಿತ್ತು ಎಂದು ಅವರ ಹೇಳಿದರು.

ಆದರೆ ರೈತಕೃಷಿ ಬಗ್ಗೆ ಸರಕಾರದ ನಿರ್ಲಕ್ಷ್ಯ, ಅದರ ಬದಲು ಕಾರ್ಪೊರೇಟ್ ಕೃಷಿಗೆ ಪ್ರೋತ್ಸಾಹದ ನವ-ಉದಾರವಾದಿ ಧೋರಣೆ ಸಂಜಯ್ ಸಾತೆಯಂತಹ ರೈತರನ್ನೂ ಬಾಧಿಸುತ್ತಿರುವದು, ಈ ಹಿನ್ನೆಲೆಯಲ್ಲಿ ಬೆಳೆಗಳಿಗೆ ಫಲದಾಯಕ ಬೆಲೆಯನ್ನು ಕಾನೂನಾತ್ಮಕ ಹಕ್ಕಾಗಿ ಮಾಡಬೇಕೆಂಬ ದೇಶದ ರೈತ ಚಳವಳಿಯ ಪ್ರಮುಖ ಬೇಡಿಕೆಯ ಮಹತ್ವ ಈ ಎಲ್ಲ ಅಂಶಗಳನ್ನು ಈ ಸುದ್ದಿ ಮುನ್ನೆಲೆಗೆ ತಂದಿದೆ.

ಅಮೇರಿಕಾದ ಗಡಿಯನ್ನು ಸಮೀಪಿಸುತ್ತಿರುವ ಕಾರವಾನ್ ವಲಸಿಗರ ಮೇಲೆ ಅಮೇರಿಕಾದ ಗಡಿ ಭದ್ರತಾ ಏಜೆಂಟರಿಂದ ಅಶ್ರು ವಾಯು ದಾಳಿ

ಜಗದ ಸುತ್ತ



ನವೆಂಬರ್ 25, ಭಾನುವಾರ ಮೆಕ್ಸಿಕೊ ನಗರವಾದ ಟಿಜುವಾನಾ ಸಮೀಪ ಅಮೆರಿಕಾದ ಗಡಿ ದಾಟಲು ಪ್ರಯತ್ನಿಸಿದ ವಲಸಿಗರ ತಂಡದ ಸುಮಾರು 98 ಸದಸ್ಯರನ್ನು ಗಡೀಪಾರು ಮಾಡಿದ್ದೇವೆಂದು ಮೆಕ್ಸಿಕನ್ ವಲಸೆ ಅಧಿಕಾರಿಗಳು ತಿಳಿಸಿದ್ದಾರೆ. ಆ ದಿನ, ಅಮೇರಿಕಾದ ಗಡಿ ಭದ್ರತೆಯು ಈ ಟಿಜುವಾನಾ ಬಳಿ ಗಡಿಯ ದ್ವಾರದ ಸಮೀಪದಲ್ಲಿರುವ ಕಾರವಾನ್‌ನ ನೂರಾರು ಸದಸ್ಯರನ್ನು ದುರ್ಬಳಕೆ ಮಾಡಿಕೊಂಡು ಅವರ ಮೇಲೆ ಆಶ್ರುವಾಯು ಬಳಸಿ ಆಕ್ರಮಣ ಮಾಡಲಾಗಿದೆ. ಈ ದಾಳಿಯಲ್ಲಿ ಮಕ್ಕಳು ಮತ್ತು ಮಹಿಳೆಯರ ಮೇಲು ಅಶ್ರು ವಾಯು ದಾಳಿ ನಡೆಸಿರುವುದು ಉಗ್ರ ಖಂಡನೆಗೆ ಗುರಿಯಾಗಿದೆ. ಯು.ಎಸ್. ಅಧಿಕಾರಿಗಳು ಭಾನುವಾರ ಹಲವು ಗಂಟೆಗಳ ಕಾಲ ಕ್ಯಾಲಿಫೋರ್ನಿಯಾದ ಸ್ಯಾನ್ ಯ್ಸಿಡ್ರೊ ದಲ್ಲಿ ದೇಶದ ಅತ್ಯಂತ ಜನನಿಬಿಡ ಗಡಿಯನ್ನು ಮುಚ್ಚಿದ್ದರು. ವರದಿಗಳ ಪ್ರಕಾರ, ಯುಎಸ್ ಗಡಿ ಭದ್ರತಾ ಅದಿಕಾರಿಗಳು ಕೂಡಾ, ಮಹಿಳೆಯರು ಮತ್ತು ಮಕ್ಕಳ ಮೇಲೆಯು ಟಿಯರ್ ಗ್ಯಾಸ್ ಬಳಸಲು ಹಿಂಜರಿಯಲಿಲ್ಲ ಎನ್ನುವುದು ಅದರ ಮಾನವ ಹಕ್ಕುಗಳ ಉಲಂಘನೆ ಯನ್ನು ತೀವ್ರವಾಗಿ ಪ್ರಶ್ನಿಸುವಂತಾಗಿದೆ.

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮೆಕ್ಸಿಕನ್ ಅಧಿಕಾರಿಗಳಿಗೆ ಪರಿಸ್ಥಿತಿಯನ್ನು 'ಹೇಗಾದರು ಮಾಡಿ ನಿರ್ವಹಿಸಲು' ಒತ್ತಾಯ ಪಡಿಸಿದ ನಂತರ ಗಡಿಪಾರು ಪ್ರಕ್ರಿಯೆ ಈ ಮಟ್ಟಕ್ಕೆ ತಲುಪಿತು ಎನ್ನಲಾಗಿದೆ. ಆ ನಂತರದಲ್ಲಿ ಲಭ್ಯವಿರುವ ಮಾಹಿತಿಗಳ ಪ್ರಕಾರ, ಅಂದು ರಾತ್ರಿ 5,600 ವಲಸಿಗರನ್ನು ಹೊಂದಿರುವ ಕ್ರೀಡಾ ಸಂಕೀರ್ಣ "ಬೆನಿಟೊ ಜುಆರೆಜ್" ನಲ್ಲಿ ವಲಸಿಗರನ್ನು ಮುಖ್ಯ ಆಶ್ರಯ ತಾಣದತ್ತ ಕಳುಹಿಸಿ ಬೇಲಿ ಸ್ಥಾಪಿಸಿ ಒಳಗೆ ಹಾಕಲಾಯಿತು.

ವಲಸಿಗರ ಕಾರವಾನ್ ಹಿನ್ನೆಲೆ

ಹೊಂಡುರಾಸ್‌ನ ಸ್ಯಾನ್ ಪೆಡ್ರೊ ಸುಲಾದಿಂದ ಅಕ್ಟೋಬರ್ 13 ರಂದು ಇವರು ತಮ್ಮ ಪಯಣವನ್ನು ಅಮೆರಿಕದ ಕಡೆಗೆ ಆರಂಬಿಸಿದರು. ಆ ಸಂದರ್ಭದಲ್ಲಿ, ಸವಾರು 7,000– ಕಾರವಾನ್‌ನಲ್ಲಿ ಇದ್ದರು. ಅವರೆಲ್ಲರೂ ರೈಲಿನಲ್ಲಿ, ಬಸ್ ಗಳಲ್ಲಿ, ಹಡಗುಗಳಲ್ಲಿ 4,000 ಕಿ.ಮೀ ದೂರ ಪ್ರಯಾಣಿಸಿದ ನಂತರ, ಟಿಜುವಾನಾ ಪಟ್ಟಣವನ್ನು ತಲುಪಿದ್ದರು ಎಂದು ಹೇಳಲಾಗಿದೆ. ವಲಸೆ ಬಂದ ನಂತರ, ಇವರ ಭಯಾನಕ ಜೀವನ ಪರಿಸ್ಥಿತಿ ಅತ್ಯಂತ ಶೋಷಣೆಗೆ ತುತ್ತಾಗಿತ್ತು. ವಿಶೇಷವಾಗಿ ಜುವಾನ್ ಒರ್ಲ್ಯಾಂಡೋ ಹೆರ್ನಾಂಡೆಜ್ (ಜೆ.ಒ.ಎಚ್) ಯು, 2017 ರ ಚುನಾವಣೆಯಲ್ಲಿ ಅಕ್ರಮವಾಗಿ ಗೆಲುವು ಸಾಧಿಸಿ ಅಧಿಕಾರವನ್ನು ಹಿಡಿದ ನಂತರ, ಇವರನ್ನು ಆಚೆ ದಬ್ಬಿದರು. ಜೆಒಎಚ್ ಗೆ ಅಮೆರಿಕದಿಂದ ಬಲವಾದ ಬೆಂಬಲವಿರುವುದೆ ಈ ಕಾರವಾನ ಗುಂಪಿನ ಶೋಚನೀಯ ಪರಿಸ್ಥಿತಿ ಗೆ ಕಾರಣವಾಗಿದೆ ಎಂದು ಹೇಳಲಾಗಿದೆ.

ನಿರಾಶ್ರಿತರಿಗೆ ವಿಶ್ವದಾದ್ಯಂತ ವ್ಯಾಪಕವಾದ ಬೆಂಬಲ ಮತ್ತು ಐಕಮತ್ಯವನ್ನು ಹೊಂದಿದ್ದರು ಸಹಾ, ಡೊನಾಲ್ಡ್ ಟ್ರಂಪ್ ಮತ್ತು ಅವನ ಆಡಳಿತದಿಂದ ಪದೇಪದೇ ಬೆದರಿಕೆಯೊಡ್ಡಿದ ಕಾರಣ, ಪರಿಸ್ಥಿತಿಯು ಇಂತಹ ಅಮಾನವೀಯ ಸ್ಥಿತಿಗೆ ತಲುಪಲು ಕಾರಣವಾಗಿದೆ. ಕಾರವಾನ್ ವಲಸಿಗರು "ಅಪರಾಧಿಗಳು ಮತ್ತು ಅಪರಿಚಿತ ಮಧ್ಯಪ್ರಾಚ್ಯದ ಪೌರರು" ಎಂಬ ಆರೋಪ ಕ್ಕೆ ತುತ್ತಾದ ಕಾರಣ , ಟ್ರಂಪ್ ಆಡಳಿತ ಯುಎಸ್ ಒಳಗೆ ಪ್ರವೇಶಿಸುವುದನ್ನು ತಡೆಯಲು ಗಡಿ ಗಸ್ತುನ್ನು ನಿರ್ಮಿಸಿಕೊಂಡಿದ್ದಾರೆ. ಆದರೆ ಅವರೆಲ್ಲರೂ ಅಪರಾಧಿಗಳು ಎಂದು ಸಾಬೀತು ಪಡಿಸಲು ಯುಎಸ್ ಬಳಿ ಯಾವುದೇ ಪುರಾವೆಗಳು ಇಲ್ಲವೆಂಬುದ್ದನ್ನು ಇಲ್ಲಿ ಗಮನಿಸಬೇಕಾಗಿದೆ.

ಅಮೇರಿಕನ್ ಸಿವಿಲ್ ಲಿಬರ್ಟೀಸ್ ಯೂನಿಯನ್ (ಎ ಸಿ ಎಲ್ ಯು) "ಮಕ್ಕಳ ಮತ್ತು ಮಹಿಳೆಯರ ಮೇಲೆ ಅಶ್ರು ವಾಯು ಪ್ರಯೋಗ ಅತಿರೇಕ ಮತ್ತು ಅಮಾನವೀಯತೆ" ಯಿಂದ ಕೂಡಿದ್ದು ಎಂದು ಉಗ್ರವಾಗಿಯೇ ಖಂಡಿಸಿದೆ. ಇದರಿಂದಾಗಿ, "ನಮ್ಮ ದಕ್ಷಿಣದ ಗಡಿಯಲ್ಲಿರುವ ವಲಸಿಗರು, ತಾಯಂದಿರು ಮತ್ತು ಚಿಕ್ಕ ಮಕ್ಕಳಿಗೆ ಕಾನೂನು ಮತ್ತು ಮಾನವ ಹಕ್ಕುಗಳ ಆಶ್ರಯವನ್ನು ಒದಗಿಸಲಾಗಿದೆ ಎಂದು ಎ ಸಿ ಎಲ್ ಯು ಹೇಳಿದೆ.

ಯು.ಎಸ್. ಸೆನೆಟ್ ಪ್ರತಿನಿಧಿ ಚುನಾಯಿತೆ ಮತ್ತು ಡೆಮಾಕ್ರಟಿಕ್ ಸಮಾಜವಾದಿ ಅಲೆಕ್ಸಾಂಡ್ರಿಯು ಒಕಾಸಿಯೊ–ಕೊರ್ಟೆಜ್ ರವರು, ಇವರನ್ನು ನಿರಾಶ್ರಿತರೆಂದು ಪರಿಗಣಿಸಬಹುದು ಹಾಗೂ ಇವರು ಅರ್ಜಿ ಸಲ್ಲಿಸಲು ಕಾನೂನು ತೊಡಕಿಲ್ಲ ಎಂದು ಟ್ವೀಟ್ ಮಾಡಿದ್ದಾರೆ. ಹಾಗೆಯೇ, ವಲಸೆಗಾರರ ಮತ್ತು ನಿರಾಶ್ರಿತರ ಹಕ್ಕುಗಳ ರಾಷ್ಟ್ರೀಯ ನೆಟ್ವರ್ಕ್ (ಎನ್ ಎನ್ ಐಆರ್ ಆರ್) ಮಕ್ಕಳ ಮೇಲಿನ ಈ ಆಕ್ರಮ ದಾಳಿಯು, "ಮಾನವೀಯ ಬಿಕ್ಕಟ್ಟನ್ನು ಇನ್ನಷ್ಟು ಅಮಾನವೀಯ ಗೊಳಿಸಿದೆ" ಎಂದು ಒತ್ತಿ ಹೇಳಿದೆ. ಯುಎಸ್ ಮತ್ತು ಅಂತಾರಾಷ್ಟ್ರೀಯ ಮಟ್ಟದ ಎರಡೂ ಕಾನೂನುಗಳು ಕೂಡಾ, ಈ ವಲಸಿಗರಿಗೆ ಆಶ್ರಯಕ್ಕಾಗಿ ಅರ್ಜಿ ಸಲ್ಲಿಸುವ ಹಕ್ಕು ಇದೆ ಎಂದು ಹೇಳಿರುವುದು ಆಶಾದಾಯಕ ಅಂಶವಾಗಿದೆ.

ಹೊಂಡುರಾಸ್‌ನಿಂದ ಹೊರಟ ವಲಸಿಗರ ಕಾರವಾನ್



ಸಾಮಾಜಿಕ ಜಾಲತಾಣಗಳು ಸ್ವತಂತ್ರವೂ ಅಲ್ಲ ತಟಸ್ಥವೂ ಅಲ್ಲ ಬಿಜೆಪಿಯ ಫೇಸ್‌ಬುಕ್ ಗೆಳೆತನದ ಮರ್ಮ

ಕೇಳಿಸಿದ್ದು

ಫೇಸ್‌ಬುಕ್‌ನಿಂದ ಸೋರಿಕೆಯಾದ ದತ್ತಾಂಶ ಅಮೆರಿಕದ ಚುನಾವಣೆಗಳ ಮೇಲೆ ಬೀರಿದ ಪರಿಣಾಮದ ಚರ್ಚೆ ಹೊಸ ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತಿರುವಾಗಲೇ ಭಾರತದಿಂದಲೂ ಅಂಥದ್ದೊಂದು ಸುದ್ದಿ ಹೊರಬಿದ್ದಿದೆ. ಫೇಸ್‌ಬುಕ್ ಪ್ರಜ್ಞಾಪೂರ್ವಕವಾಗಿ ಆಡಳಿತಾರೂಢ ಬಿಜೆಪಿಯ ಪರವಾಗಿ ನಿಲ್ಲುತ್ತಿದೆ ಎಂಬ ತರ್ಕವೊಂದನ್ನು ಪರೊಂಜಯ್ ಗುಹಾ ಥಾಕುರ್ತ ಮತ್ತು ಸಿರಿಲ್ ಸ್ಯಾಮ್ ತಮ್ಮ ಇತ್ತೀಚಿನ ತನಿಖಾ ವರದಿಯಲ್ಲಿ ಮುಂದಿಟ್ಟಿದ್ದಾರೆ. 'ನ್ಯೂಸ್‌ಕ್ಲಿಕ್ ಡಾಟ್ ಇನ್' ಜಾಲತಾಣ

ದಲ್ಲಿ ಐದು ಭಾಗದಲ್ಲಿ ಪ್ರಕಟವಾಗಿರುವ ಸರಣಿ ವರದಿಗಳು ಬಿಜೆಪಿ ಮತ್ತು ಫೇಸ್‌ಬುಕ್ ಸಂಬಂಧವನ್ನು ಬಿಡಿಸಿಡಲು ಪ್ರಯತ್ನಿಸಿವೆ.

ಕಾರ್ಪೊರೇಟ್ ಹಗರಣಗಳ ಕುರಿತ ವರದಿಗಳಿಗಾಗಿಯೇ ಪ್ರಸಿದ್ಧರಾಗಿರುವ ಪರೊಂಜಯ್ ಗುಹಾ ಥಾಕುರ್ತ 2 ಜಿ ಹಗರಣ, ನೈಸರ್ಗಿಕ ಅನಿಲದ ಗುತ್ತಿಗೆಯಲ್ಲಿ ಅಂಬಾನಿ ಕುಟುಂಬದ ಪಾತ್ರ ಇತ್ಯಾದಿಗಳ ಬಗ್ಗೆ ವಿವರವಾದ ತನಿಖಾ ವರದಿಗಳನ್ನು ಪ್ರಕಟಿಸಿದವರು. ಸಿರಿಲ್ ಸ್ಯಾಮ್ ಕೂಡಾ ವಾಣಿಜ್ಯ ಪತ್ರಿಕೋದ್ಯಮದಲ್ಲಿ ಸಕ್ರಿಯರಾಗಿರುವ ಪತ್ರಕರ್ತ. ನವ ಮಾಧ್ಯಮವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದರಲ್ಲಿ ಬಿಜೆಪಿ ಆರಂಭದಿಂದಲೂ ಮುಂಚೂಣಿಯಲ್ಲಿದೆ. 2002ರ ಗುಜರಾತ್ ಗಲಭೆಗಳ ನಂತರದ ಅವಧಿಯಲ್ಲಿ ನರೇಂದ್ರ ಮೋದಿಯವರ ಇಮೇಜ್ ಬದಲಾಯಿಸುವ ಪ್ರಕ್ರಿಯೆಯಲ್ಲಿಯೂ ನವ ಮಾಧ್ಯಮಗಳು ಬಹುಮುಖ್ಯ ಪಾತ್ರ ವಹಿಸಿದವು. ಇದರ ಹಿಂದೆ ಕೆಲಸ ಮಾಡಿದ್ದು ಮುಂಬೈ ಮೂಲದ ತಂತ್ರಜ್ಞಾನೋದ್ಯಮಿ ರಾಜೇಶ್ ಜೈನ್. ಮುಕ್ತವಾಗಿ ಲಭ್ಯವಿರುವ ಅನೇಕ ಮೂಲಗಳಿಂದ ಮಾಹಿತಿ ಸಂಗ್ರಹಿಸಿ ಅವರು ರೂಪಿಸಿದ ಮತದಾರರ ದತ್ತ ಸಂಚಯ 2014ರ ಚುನಾವಣೆಯಲ್ಲಿ ಬಹುಮುಖ್ಯ ಪಾತ್ರ ವಹಿಸಿದೆ. ಅಲ್ಲಿಂದಾಚೆಗೆ ಬಿಜೆಪಿ ಸೈಬರ್ ಲೋಕದಲ್ಲಿ ತನ್ನನ್ನು ಸ್ಥಾಪಿಸಿಕೊಂಡ ಬಗೆ ಅನನ್ಯ. ನ್ಯೂಸ್ ಕ್ಲಿಕ್ ಪ್ರಕಟಿಸಿರುವ ವರದಿ ಈ ಎಲ್ಲಾ ವಿಚಾರಗಳನ್ನೂ ವಿವರವಾಗಿ ಚರ್ಚಿಸುತ್ತದೆ.

ಬಿಜೆಪಿ ನವ ಮಾಧ್ಯಮವನ್ನು ಯಶಸ್ವಿಯಾಗಿ ಬಳಸಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದವರು ಯಾರೆಲ್ಲಾ ಮತ್ತು ಅದನ್ನು ಹೇಗೆ ಮಾಡಿದರು ಎಂಬುದರ ಕುರಿತು ಈ ವರದಿ ಅನೇಕ ಒಳನೋಟಗಳನ್ನು ನೀಡುತ್ತದೆ. ಭಾರತದ ಚುನಾವಣೆಗಳು ಮತ್ತು ಅದರಲ್ಲಿ ಸಾಮಾಜಿಕ ಮಾಧ್ಯಮಗಳು ವಹಿಸಿದ ಪಾತ್ರವನ್ನು ಗಮನಿಸುತ್ತಾ ಬಂದವರಿಗೆ ಈ ವಿಚಾರಗಳೇನೂ ಹೊಸತಲ್ಲ. ಇವೆಲ್ಲವನ್ನೂ ನಿರ್ದಿಷ್ಟ ಸಂದರ್ಭಗಳ ವಿಶ್ಲೇಷಣೆಯ ಜೊತೆಗೆ ಒಂದೆಡೆ ತಾರ್ಕಿಕವಾಗಿ ಕಟ್ಟಿಕೊಡುವಲ್ಲಿ ಈ ವರದಿ ಯಶಸ್ವಿಯಾಗಿದೆ. ಈ ವಿಶ್ಲೇಷಣೆಯ ಭಾಗದಲ್ಲಿರುವ ಬಹುಮುಖ್ಯ ಅಂಶವೆಂದರೆ ಫೇಸ್‌ಬುಕ್ ಮತ್ತು ಬಿಜೆಪಿ ತಮ್ಮ ಬೆಳವಣಿಗೆಗಳಿಗೆ ಹೇಗೆ ಪರಸ್ಪರ ಪೂರಕವಾಗಿ ಕೆಲಸ ಮಾಡಿದವು ಎಂಬುದು. 2011ರಲ್ಲಿ ಭಾರತದಲ್ಲಿ ತನ್ನ ಕಚೇರಿಯನ್ನು ಆರಂಭಿಸುವ ಫೇಸ್‌ಬುಕ್ ಮುಂದಿನ ಒಂದೆರಡು ವರ್ಷಗಳಲ್ಲಿ ಭಾರತ ವಿಶ್ವದ ಅತಿದೊಡ್ಡ 'ಫೇಸ್‌ಬುಕ್ ದೇಶ'ಗಳಲ್ಲಿ ಒಂದಾದ್ದರ ಹಿಂದೆ ಬಿಜೆಪಿಯ ತಂತ್ರಗಾರಿಕೆಯ ಪಾತ್ರವೂ ಬಹಳ ದೊಡ್ಡದು ಎಂಬುದನ್ನು ವರದಿ ಪ್ರತಿಪಾದಿಸುತ್ತದೆ.

ಈ ವಿವರಗಳು ಅತ್ಯಂತ ಕುತೂಹಲಕಾರಿಯಾಗಿವೆ. ಬಿಜೆಪಿಯ ಸಾಮಾಜಿಕ ಮಾಧ್ಯಮ ತಂತ್ರ ರೂಪಿಸುತ್ತಿದ್ದವರಿಗೆ ಸ್ವತಃ ಫೇಸ್‌ಬುಕ್ನ ತಜ್ಞರೇ ತರಬೇತಿ ನೀಡಿದ್ದರು. ಈ ವಿಷಯವನ್ನು ಫೇಸ್‌ಬುಕ್ ಕೂಡಾ ಅಲ್ಲಗಳೆದಿಲ್ಲ. ಅದು ನೀಡಿರುವ ಸ್ಪಷ್ಟೀಕರಣದಂತೆ 'ನೀತಿ ನಿರೂಪಕರು, ರಾಜಕಾರಣಿಗಳು, ಮಾಧ್ಯಮಗಳಿಗೆ ತರಬೇತಿ ನೀಡುವುದು ಸಂಸ್ಥೆಯ ನೀತಿಯ ಭಾಗ'. ಆದರೆ ಇದೇ ಫೇಸ್‌ಬುಕ್ ಇತರ ಪಕ್ಷಗಳಿಗೆ ಇದೇ ಬಗೆಯ ತರಬೇತಿ ನೀಡಿರುವ ಯಾವ ವಿವರಗಳನ್ನೂ ನೀಡುವುದಿಲ್ಲ.

ಈಗ ಫೇಸ್‌ಬುಕ್ ನ ಭಾರತ ಮತ್ತು ದಕ್ಷಿಣ ಏಷ್ಯಾದ ಪಾಲಿಸಿ ಡೈರೆಕ್ಟರ್ ಆಗಿರುವ ಶಿವನಾಥ್ ತುಕ್ರಾಲ್ ಅವರು 2012ರಿಂದ 2014ರ ನಡುವಣ ಅವಧಿಯಲ್ಲಿ ಬಿಜೆಪಿಯ ಜೊತೆ ಸೇರಿ ಕೆಲಸ ಮಾಡುತ್ತಿದ್ದರು ಎಂಬ ಅಂಶವೂ ಈ ವರದಿ ತೆರೆದಿಟ್ಟಿದೆ. ನರೇಂದ್ರ ಮೋದಿಯವರ ಇಮೇಜ್ ಬದಲಾಯಿಸುವುದರಲ್ಲಿ ಪ್ರಮುಖ ಪಾತ್ರವಹಿಸಿದ ಡಾ. ಹಿರೇನ್ ಜೋಷಿಯವರು ಈ ಅವಧಿಯಲ್ಲಿ ಆರಂಭಿಸಿದ ಹಲವು ವೆಬ್‌ಸೈಟ್‌ಗಳಿಗೆ ನೆರವು ನೀಡಿದ್ದು ಇದೇ ತುಕ್ರಾಲ್. ಇವರು ಫೇಸ್‌ಬುಕ್ ನ ನೀತಿ ನಿರೂಪಣೆಯ ಸ್ಥಾನಕ್ಕೆ ಏರಿದ ಮೇಲೂ ಮೋದಿಯವರ ಬಲಗೈ ಎಂದು ಗುರುತಿಸಲಾಗುವ ಹಿರೇನ್ ಅವರನ್ನು ನಿಯತವಾಗಿ ಭೇಟಿ ಮಾಡುತ್ತಾರೆ ಎಂಬ ಅಂಶವೂ ಈ ವರದಿಯಲ್ಲಿದೆ.

ಈ ವರದಿಯಲ್ಲಿರುವ ವಿವರಗಳನ್ನು ಒಟ್ಟಂದದಲ್ಲಿ ಗ್ರಹಿಸಿದರೆ ಫೇಸ್‌ಬುಕ್ ಮತ್ತು ಅದರದ್ದೇ ಮಾಲೀಕತ್ವದಲ್ಲಿರುವ ವಾಟ್ಸಾಪ್‌ಗಳು ಬಿಜೆಪಿ ಮತ್ತು ಸಂಘಪರಿವಾರದ ಬಹುಮುಖ್ಯ ಸಂವಹನ ಸಾಧನಗಳಾಗಿರುವುದಕ್ಕೆ ಬೇರೆಯೇ ಅರ್ಥ ಬರುತ್ತದೆ. ಅಮೆರಿಕದ ಅಧ್ಯಕ್ಷೀಯ ಚುನಾವಣೆ ಮತ್ತು ಬ್ರೆಕ್ಸಿಟ್‌ಗಳಲ್ಲಿ ಬಳಕೆಯಾದದ್ದು ಫೇಸ್‌ಬುಕ್‌ನಿಂದ ಸೋರಿಕೆಯಾದ ವಿವರಗಳು ಮಾತ್ರ. ಒಂದು ವೇಳೆ ಇಂಥದ್ದು ಭಾರತದ ಚುನಾವಣೆಯಲ್ಲಿಯೂ ಸಂಭವಿಸಿದ್ದರೆ ಸ್ವತಃ ಫೇಸ್‌ಬುಕ್ ಒಂದು ಸಂಸ್ಥೆಯಾಗಿ ಬಿಜೆಪಿಯ ಪರವಾಗಿ ನಿಂತಿತ್ತು ಎಂದು ಭಾವಿಸಬೇಕಾಗುತ್ತದೆ. 2014ರ ಚುನಾವಣೆಯಲ್ಲಿ ಇದು ನಿಜವಾಗಿಯೂ ಸಂಭವಿಸಿತು ಎಂದು ಹೇಳುವುದಕ್ಕೆ ಬೇಕಿರುವ ಅಂಶಗಳೇನೂ ಈ ವರದಿಯಲ್ಲಿ ಇಲ್ಲ. ಆದರೆ 2014ರ ನಂತರ ನಡೆದ ಅನೇಕ ಘಟನೆಗಳ ಸಂದರ್ಭದಲ್ಲಿ ಫೇಸ್‌ಬುಕ್ ಆಡಳಿತಾರೂಢರ ಪರವಾಗಿ ನಿಂತಿರುವುದಕ್ಕೆ ಸಾಕ್ಷ್ಯಗಳಿವೆ.

ಈ ವರ್ಷದ ಆಗಸ್ಟ್‌ನಲ್ಲಿ 'ಕ್ಯಾರವಾನ್' ಎಂಬ ಮಾಸಪತ್ರಿಕೆಯು ಬಿಜೆಪಿಯ ಅಧ್ಯಕ್ಷ ಅಮಿತ್ ಶಾ ತಮ್ಮ ಚುನಾವಣಾ ಪ್ರಮಾಣ ಪತ್ರದಲ್ಲಿ ಆಸ್ತಿ ವಿವರಗಳನ್ನು ತಪ್ಪಾಗಿ ನೀಡಿದ್ದನ್ನು ವಿವರಿಸುವ ವರದಿ ಪ್ರಕಟಿಸಿತ್ತು. ಈ ವರದಿಯನ್ನು ಫೇಸ್‌ಬುಕ್ ಜಾಹೀರಾತಿನ ಮೂಲಕ ಹೆಚ್ಚು ಜನರಿಗೆ ತಲುಪಿಸುವ ಪತ್ರಿಕೆಯ ಪ್ರಯತ್ನ ವಿಫಲವಾಗಿತ್ತು. ಫೇಸ್‌ಬುಕ್ನ ಶಿಷ್ಟತೆಯನ್ನು ಪಾಲಿಸುವ ಜಾಹೀರಾತುಗಳಿಗೆ ಕೆಲವು ನಿಮಿಷ ಹೆಚ್ಚೆಂದರೆ ಒಂದೆರಡು ಗಂಟೆಯೊಳಗೆ ಪ್ರಕಟಣೆಯ ಅನುಮತಿ ದೊರೆಯುತ್ತದೆ. ಆದರೆ ಈ ವರದಿಗೆ ಪ್ರಕಟಣೆ ಅನುಮತಿ ದೊರೆಯುವ ವೇಳೆಗೆ ಹನ್ನೊಂದು ದಿನಗಳು ಕಳೆದಿದ್ದವು.

2017ರಲ್ಲಿ ರಫೇಲ್ ವ್ಯವಹಾರದ ಕುರಿತು ಪ್ರಕಟಿಸಿದ್ದ ವರದಿಯನ್ನು ಹಂಚಿಕೊಂಡದ್ದಕ್ಕೆ 'ಜನತಾ ಕಾ ರಿಪೋರ್ಟರ್'ನ ಫೇಸ್‌ಬುಕ್ ಪುಟವೂ ಅಮಾನತಾಗಿತ್ತು. ಕೇರಳದ 'ಇಂಜಿ ಪೆಣ್ಣು', ಕರ್ನಾಟಕದ ಚೇತನಾ ತೀರ್ಥಹಳ್ಳಿ ಅವರ ಫೇಸ್‌ಬುಕ್ ಖಾತೆಗಳೂ ಇದೇ ಬಗೆಯಲ್ಲಿ ಅಮಾನತಾಗಿದ್ದವು. ಇವರಾರೂ ಅಸಭ್ಯ ಅಥವಾ ಅಶ್ಲೀಲ ಪೋಸ್ಟ್‌ಗಳನ್ನು ಪ್ರಕಟಿಸಿರಲಿಲ್ಲ. ಆದರೆ ನಿರಂತರವಾಗಿ ಆಡಳಿತಾರೂಢರನ್ನು ಮತ್ತು ಸಂಘಪರಿವಾರವನ್ನು ಟೀಕಿಸುವ ಪೋಸ್ಟ್ ಗಳನ್ನು ಪ್ರಕಟಿಸುತ್ತಿದ್ದರು. ಎನ್‌ಡಿಟಿವಿ ಹಿಂದಿಯ ರವೀಶ್‌ಕುಮಾರ್ ಅವರ ಕಾರ್ಯಕ್ರಮ ಬಹಳ ಜನಪ್ರಿಯ ಆದರೆ ಕೆಲವು ವಿಡಿಯೊಗಳು ಹೆಚ್ಚಿನ ಜನರನ್ನು ತಲುಪದೇ ಇರುವ ಮ್ಯಾಜಿಕ್ ಆಗಾಗ ಸಂಭವಿಸುತ್ತಿರುತ್ತದೆ ಎಂದು ಎನ್‌ಡಿಟಿವಿಯ ಪತ್ರಕರ್ತರು ಹೇಳುತ್ತಾರೆ. ಈ ಎಲ್ಲಾ ಆರೋಪಗಳಿಗೆ ಫೇಸ್‌ಬುಕ್ 'ಇದು ಅಲ್ಗಾರಿದಮ್ನ ಲೋಪ' ಎಂದು ತಿಪ್ಪೆ ಸಾರಿಸುತ್ತದೆ. ಆದರೆ ಈ 'ಲೋಪ' ಕೇಂದ್ರದ ಆಡಳಿತಾರೂಢರನ್ನು ಟೀಕಿಸಿದಾಗ ಅಥವಾ ಸಂಘಪರಿವಾರದ ನಿಲುವುಗಳಿಗೆ ವಿರುದ್ಧವಾದ ಬರಹಗಳು ಮತ್ತು ವಿಡಿಯೊಗಳಿಗೆ ಮಾತ್ರ ಅನ್ವಯಿಸುವುದೇಕೆ ಎಂಬುದಕ್ಕೆ ಅವರಲ್ಲಿ ಉತ್ತರವಿಲ್ಲ.

'ಫೇಸ್‌ಬುಕ್'ನ ಈ ಬಗೆಯ ವರ್ತನೆಗಳ ಹಿಂದಿನ ಕಾರಣ ಸುಲಭ. 'ಸಾಮಾಜಿಕ ಮಾಧ್ಯಮ'ಗಳ ವ್ಯಾಪಾರ ಮಾದರಿಯಿರುವುದೇ ಅಲ್ಲಿ ನಡೆಯುವ ಭಾವುಕ ಚರ್ಚೆಗಳನ್ನು ಆಧಾರವಾಗಿಟ್ಟುಕೊಂಡು. ಭಾವನೆಗಳನ್ನು ಕೆರಳಿಸುವುದು ರಾಜಕೀಯ ಪಕ್ಷಗಳಿಗೆ ವೋಟು ಗಳಿಸುವ ತಂತ್ರವಾದರೆ ಅಂಥದ್ದಕ್ಕೆ ವೇದಿಕೆ ಒದಗಿಸುವುದು ಫೇಸ್‌ಬುಕ್ ತರಹದ ಕಂಪನಿಗಳಿಗೆ ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳುವ ಮಾರ್ಗ. ಇವುಗಳನ್ನು 'ಸ್ವತಂತ್ರ' ಅಥವಾ 'ತಟಸ್ಥ' ಎಂದು ಭಾವಿಸುವುದರಲ್ಲಿ ಅರ್ಥವಿಲ್ಲ.

–ಎನ್.ಎ.ಎಮ್. ಇಸ್ಮಾಯಿಲ್

(ಪ್ರಜಾವಾಣಿ, ಡಿಸೆಂಬರ್ 6)

JANASHAKTHI KANNADA VARA PATRIKE DECEMBER 10-16, 2018 Price: Rs. 10/- Date of Publication: 7 DECEMBER 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283





ಕವಿಗೋಷ್ಠಿಯಲ್ಲಿ

ಸಮಾರೋಪದಲ್ಲಿ

* ಬಹುತ್ವದಲ್ಲೇ ಭಾರತದ ಅಸ್ಮಿತೆ ಇದೆ. ಬಹುತ್ವವನ್ನು ಅಲ್ಲಗಳೆದು ದೇಶದ ಅಸ್ಮಿತೆಯನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ.. ಬಹುತ್ವವನ್ನು ರಕ್ಷಿಸುವುದಕ್ಕಾಗಿ ಗಟ್ಟಿಯಾದ ಪರ್ಯಾಯಗಳನ್ನು ಕಂಡುಕೊಳ್ಳುವ ಅನಿವಾರ್ಯ ಸ್ಥಿತಿಯನ್ನು ದೇಶ ಈಗ ಎದುರಿಸುತ್ತಿದೆ. ಪ್ರಜಾಪ್ರಭುತ್ವದ ತತ್ವಗಳ ಆಧಾರ ದಲ್ಲಿ ಅಸ್ಮಿತೆಯ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಬಹುತ್ವವನ್ನು ರಕ್ಷಿಸಬಲ್ಲ ಚಳವಳಿಯನ್ನು ಮುನ್ನಡೆಸಲು ದೇಶಕ್ಕೆ ಒಂದು ಬಲಿಷ್ಠವಾದ ಹೊಸ ರಾಜಕೀಯ ಪಕ್ಷದ ಅಗತ್ಯವೂ ಇದೆ
* ಈಗ ದೇಶ ಎದುರಿಸುತ್ತಿರುವ ಸವಾಲುಗಳಿಗೆ ಸಂವಿಧಾನದ ನೆರಳಿನಲ್ಲೇ ಉತ್ತರ ಕಂಡುಕೊಳ್ಳಬೇಕಿದೆ. ಒಕ್ಕೂಟ ವ್ಯವಸ್ಥೆಯನ್ನು ಎಲ್ಲ ಕಾಲದಲ್ಲೂ ಮೇಲಿನಿಂದ ಕೆಳಕ್ಕೆ ಅವಲೋಕಿಸಲಾಗುತ್ತಿದೆ. ಅದನ್ನು ಪುನರ್ ವಿಮರ್ಶೆಗೆ ಒಳಪಡಿಸಿ ಕೆಳಗಿನಿಂದ ಮೇಲಕ್ಕೆ ನೋಡಬೇಕಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಂತಹ ದೊಡ್ಡ ಸಂಪತ್ತು ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಇದಕ್ಕೆ ಪೂರಕವಾಗಿ ಬಳಸಿಕೊಳ್ಳಬೇಕು.

– ಪ್ರೊ. ವಲೇರಿಯನ್ ರೊಡ್ರಿಗಸ್

* ದೇಶದ ಎದುರಿಸುತ್ತಿರುವ ಸವಾಲುಗಳಿಗೆ ಕಾರ್ಲ್ ಮಾರ್ಕ್ಸ್, ಮಹಾತ್ಮ ಗಾಂಧಿ, ಡಾ.ಬಿ.ಆರ್. ಅಂಬೇಡ್ಕರ್ ಮತ್ತು ರಾಮಮನೋಹರ ಲೋಹಿಯಾ ಚಿಂತನೆಗಳಲ್ಲಿ ಪರಿಹಾರವಿದೆ. ಈ ಎಲ್ಲ ತತ್ವಗಳ ಅನುಯಾಯಿಗಳು ಪರಸ್ಪರ ಸಂವಾದದ ಮೂಲಕ ಒಗ್ಗೂಡಿ ನಡೆಯಬೇಕು. ಆದರೆ, ಪ್ರತಿಗಾಮಿ ಶಕ್ತಿಗಳು ಈ ನಾಲ್ಕೂ ಜನರ ಅನುಯಾಯಿಗಳ ನಡುವೆ ಜಗಳ ಸೃಷ್ಟಿಸಿ ಲಾಭ ಪಡೆಯುತ್ತಿದ್ದಾರೆ'

ಏಕಸಂಸ್ಕೃತಿಯನ್ನು ಪ್ರತಿಪಾದಿಸುವ ರಾಜಕೀಯ ಶಕ್ತಿಗಳನ್ನು ಎದುರಿಸುವ ಶಕ್ತಿ ಇರುವುದು ಎಡಪಕ್ಷಗಳಿಗೆ ಮಾತ್ರ. ಆದರೆ, ಎಡಪಕ್ಷಗಳಿಗೆ ಹೋರಾಟದಲ್ಲಿ ಇರುವ ಅನುಭವ ರಾಜಕಾರಣದಲ್ಲಿ ಇಲ್ಲ. ಕಾಂಗ್ರೆಸ್ ಪ್ರಾದೇಶಿಕವಾಗಿ ವಿಸ್ತರಣೆಯಾಗದೇ ಇರುವುದರಿಂದ ಮಿತಿಗಳ ನಡುವೆ ಸಿಲುಕಿದೆ. ಇದು ರಾಜಕೀಯವಾಗಿ ದೇಶವನ್ನು ಅಪಾಯಕ್ಕೆ ತಳ್ಳಿದೆ ಎಂದು ಹೇಳಿದರು.

– ದಿನೇಶ್ ಅಮಿನ್ ಮಟ್ಟು

ಸಾರ್ವಜನಿಕರಿಗೆ ಕೆಲವು ಸೂಚನೆಗಳು

ಸವಾರಿಗೆ ಹೊರಡುವಾಗ
ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ
ಇಲ್ಲಿ ಬದುಕಿ ಉಳಿಯಲು
ಬರೀ ತಲೆ ಇದ್ದರಷ್ಟೇ ಸಾಲದು

ಶಾಲಾ ಕಾಲೇಜುಗಳ ಆಸುಪಾಸು
ತಂಬಾಕು ಮಾರಬೇಡಿ
ವಿದ್ಯಾರ್ಥಿಗಳಿಗೆ ಸಾಕಾಗುವಷ್ಟು ಅಫೀಮು
ಪಠ್ಯಪುಸ್ತಕಗಳಲ್ಲಿಯೇ ಲಭ್ಯವಿದೆ

ಹದಿನೆಂಟು ವರ್ಷ ತುಂಬದವರಿಗೆ
ವಯಸ್ಕರ ಚಿತ್ರಗಳನ್ನು ತೋರಿಸಬೇಡಿ
ಅವರಿಗಾಗಿಯೇ ಟಿವಿ ಚಾನಲ್ಲುಗಳಲ್ಲಿ
ದೇವಮಾನವರುಗಳ ಲೈಂಗಿಕ ಪ್ರಕರಣಗಳಿವೆ

ಸಾರ್ವಜನಿಕ ಸಭೆಗಳಲ್ಲಿ ಸಿಗರೇಟಿಗೆ ಕಡ್ಡಿ
ಗೀರಬೇಡಿ
ಬೆಂಕಿ ಕೊಡುವ ಕೆಲಸವನ್ನು
ಭಾಷಣಕಾರರಿಗೆ ವಹಿಸಿಕೊಡಲಾಗಿದೆ

ಕೊನೆಯದಾಗಿ,
ಚುನಾವಣೆಯ ವೇಳೆ
ಎರಡೆರಡು ಚಿಹ್ನೆಗಳಿಗೆ ಮತ ಹಾಕಬೇಡಿ
ದೇಶವನ್ನು ಕೊಳ್ಳೆ ಹೊಡೆಯಲು
ಒಂದೇ ಪಕ್ಷ ಸಾಕು

– ವಿಲ್ಸನ್ ಕಟೀಲ್

ಅಚ್ಚೆದಿನ್

2 ಲಕ್ಷ ರುಪಾಯಿ ಕೊಟ್ಟು
32 ಲಕ್ಷ ಡಾಲರ್ ಪಡೆದು
ಅಮೇರಿಕ ಹೋಗಿ, ಸುಖವಾಗಿ
ಇರಬೇಕು ಅಂದುಕೊಂಡೆ
ಹಣ ಬದಲಾವಣೆಯವ ಹೇಳಿದ
ಅಚ್ಚೆದಿನ್ ನಿನಗಲ್ಲ ಅವರಿಗೆ


ಆತನನ್ನು ಹುಡುಕಿಕೊಂಡು ಹೋದೆ
ಆತ, ಆತನೇ ಕೊಟ್ಟ ಬೆಂಕಿಯಲ್ಲಿ
ಬೂದಿಯಾಗಿದ್ದ


ಸುಳ್ಳು ಕೇಳಿ ಕೇಳಿ ಸತ್ಯ ಮರತೇ ಹೋಗಿದೆ
ಹೆಸರ ಬದಲಾಯಿಸಿ ನಾನಾರೆಂಬ ಅರಿವಿಲ್ಲ
ಬಣ್ಣವೂ ಬದಲಾಗಿ ಭುವಿ ಕೆಂಪಾಗಿದೆ
ಸುರೆಯ ನಶೆ ಕೂಡಾ ಸತ್ಯ ಹೇಳಿಸುತ್ತಿದೆ
ಈ ಕೋಮುವಾದದ ಅಮಲಿಗೆ ಸುಳ್ಳಲ್ಲದೆ
ಬೇರೇನೂ ತಿಳಿದಿಲ್ಲವೇ?
ಅನೈತಿಕತೆಗೆ ಪರವಾನಿಗೆ, ತಲಾಖ್ ಗೆ ಬಂದಿ
ಕುಟುಂಬ ಆಗಬೇಕಲ್ಲ ಹರಿದು ಚಿಂದಿ


5 ವರುಷಕ್ಕೊಮ್ಮೆ ಪಾರ್ಲಿಮೆಂಟ್ ಚುನಾವಣೆಗೆ
ಅವರಿಬ್ಬರು ಬಂದೇ ಬರುತ್ತಾರೆ
ಒಬ್ಬ ರಾಮ, ಮತ್ತೊಬ್ಬ ಆತಂಕವಾದಿ
ಮುಂದಿನ 5 ವರುಷ ಅವರೆಲ್ಲಿರುತ್ತಾರೆ
ಯಾರೂ ಅರಿಯರು

ಹೆಸರು, ಚರಿತ್ರೆ ಬದಲಾಯಿಸುವ
ಆಚಾರ, ಆಹಾರ ಬದಲಾಯಿಸುವ
ಸಂವಿಧಾನ, ಧರ್ಮ ಗ್ರಂಥ ಬದಲಾಯಿಸುವ
ಇವರನ್ನು ಬದಲಾಯಿಸದಿದ್ದರೆ
ಮುಂದೆ ಚರಿತ್ರೆಯಲ್ಲಿ, ನಿಮ್ಮ ಚರಿತ್ರೆ
ಎತ್ತರದ ವಲ್ಲಾಭಾಯಿ ಮೂರ್ತಿ ಹತ್ತಿ
ನೋಡಿದರೂ ಕಾಣದು.

– ಮಹಮ್ಮದ್ ಬಡ್ಡೂರ್
(ಬ್ಯಾರಿ ಭಾಷೆ ಕವಿತೆಯ ಕನ್ನಡ ಅನುವಾದ)







JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**